
ಗೌರಿ ಲಂಕೇಶ್

ಡಿಸೆಂಬರ್ 26, 2012 ಪುಟ 20 ರೂ. 14/-

ನನ್ನಜ್ಜನಿಗೆ ಒಂದು ಆಸೆ ಇತ್ತು
ಸುರಕೋಡು

ಧರ್ಮಸ್ಥಳ ದಗಲುಬಾಜಿ ದಂಧೆಗಳು




ಕೇರಳದಲ್ಲಿ ಯಡ್ಡಿ ವಾಮಾಚಾರ




ಲೈಫ್ ಆಫ್ ಪೈ ಹುಲಿಯೆಂಬ ಸಾವಿನ ಭೂತ

ನನ್ನ ಗುರು ಕಮಲ್‌ಹಾಸನ್



ಸುವರ್ಣ ಸೌಧಕ್ಕೆ ಮಾದಿಗರ ರಕ್ತತರ್ಪಣ

ನಮ್ಮ ಶಿಲ್ಪವನ್ನು ನಾವೇ ಕೆತ್ತಿಕೊಳ್ಳುವ ಹಾದಿಯಲ್ಲಿ...



ಇದು ಸಿನಿಮಾ ಜಗತ್ತಿಗೆ ಸಂಬಂಧಿಸಿದ ಒಬ್ಬ ವ್ಯಕ್ತಿಯ ಬದುಕಿನ ಕತೆ.

ಆತ ಕೆ. ಬಾಲಚಂದರ್.

ಮೊನ್ನೆ 62 ನೇ ಜನ್ಮದಿನ ಆಚರಿಸಿಕೊಂಡ ರಜನಿಕಾಂತ್ ತನ್ನ ಸಿನಿಮಾ ಕೆರಿಯರ್‌ನ ಆರಂಭದ ದಿನಗಳನ್ನು ನೆನೆದು ಹಲವು ವ್ಯಕ್ತಿಗಳ, ಘಟನೆಗಳ ಪ್ರಸ್ತಾಪ ಮಾಡಿದ್ದಾನೆ. ರಜನಿಯಲ್ಲಿದ್ದ ನಟನಾ ಸಾಮರ್ಥ್ಯವನ್ನು ಪತ್ತೆಹಚ್ಚಿ ಅವಕಾಶ ನೀಡಿದ್ದಲ್ಲದೆ ಅವನ ವ್ಯಕ್ತಿತ್ವ ರೂಪಿಸಿ ವಿನಯ ಹಾಗೂ ಕಲಿಯುವ ಗುಣವನ್ನು ಕಲಿಸಿದ ಗುರು ಈ ಕೈಲಾಸಂ ಬಾಲಚಂದರ್ ಎಂಬುದಾಗಿ ರಜನಿ ವಿನಮ್ರತೆಯಿಂದ ಹೇಳಿಕೊಂಡಿದ್ದಾನೆ.

ಈಗ ಎಂಬತ್ತೊಂದು ವರ್ಷದ ಬಾಲಚಂದರ್ ಒಬ್ಬ ಸಿನಿಮಾ ನಿರ್ದೇಶಕನಾಗಿ ಕನ್ನಡಿಗರೂ ಸೇರಿದಂತೆ ಇಡೀ ದಕ್ಷಿಣ ಇಂಡಿಯಾದ ಸಿನಿಮಾ ಪ್ರೀತಿಯ ಜನರೆಲ್ಲರಿಗೂ ಪರಿಚಿತ ಹೆಸರು. ನೂರಕ್ಕೂ ಹೆಚ್ಚು ಸಿನಿಮಾಗಳಲ್ಲಿ ಕೆಲಸ ಮಾಡಿರುವ ಬಾಲಚಂದರ್ ಅಷ್ಟೇ ಸಂಖ್ಯೆಯ ನಟ, ನಿರ್ದೇಶಕರ, ಟೆಕ್ನಿಷಿಯನ್ಸ್‌ರನ್ನು ಸಿನಿಮಾಗೆ ತಂದು ತಿದ್ದಿ ತೀಡಿ ಅವರವರ ಕೆರಿಯರ್ ರೂಪಿಸಿಕೊಳ್ಳಲು ನೆರವಾಗಿದ್ದಾರೆ.



ಈಗ ತಮಿಳುನಾಡಿನಲ್ಲಿ ಅಂತಾ ಸಿನಿಮಾ ಕಲಾವಿದರು 'ನಾನು ಕೆ ಸ್ಕೂಲ್‌ನವನು' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವುದುಂಟು. ಯಾವ ಕ್ಷೇತ್ರದಲ್ಲೇ ಆಗಲಿ ಯಶಸ್ಸು ಪುಗಸಟ್ಟೆಯಾಗಿ ಸಿಗುವುದಿಲ್ಲ, ಹಾಗೆ ಪುಗಸಟ್ಟೆ ಸಿಗುವ ಯಶಸ್ಸು, ಕೀರ್ತಿ ಬಹಳ ಕಾಲ ಉಳಿಯುವುದೂ ಇಲ್ಲ. ಪ್ರಸಿದ್ಧ ಆಕ್ಷನ್ ಸಿನಿಮಾಗಳ ಹೀರೋ ಜಾಕಿ ಚಾನ್ ಒಮ್ಮೆ ತನ್ನ ಮಗ ನಟಿಸಿದ್ದ ಸಿನಿಮಾ ನೋಡಲು ಹೋಗಿದ್ದನಂತೆ. ಆ ಹುಡುಗ ಹಾಡುಗಾರನಾಗಿ ಹೆಸರು ಮಾಡಲು ಹೋರಾಡುತ್ತಿದ್ದವ, ಒಮ್ಮೆ ಯಾರೋ ಒತ್ತಾಯಿಸಿದರೆಂದು ಆಕ್ಷನ್ ಚಿತ್ರವೊಂದರಲ್ಲಿ ಹೀರೋ ಆಗಿ ನಟಿಸಿದ್ದ. ಸಿನಿಮಾ ಪ್ರದರ್ಶನ ಮುಗಿದ ನಂತರ "ಅಪ್ಪಾ ಹೇಗಿದೆ ನನ್ನ ಸಿನಿಮಾ? ಎಲ್ಲರೂ ನಾನು ನಿನ್ನಂತೆಯೇ ಆಗಬಹುದು ಎನ್ನುತ್ತಿದ್ದಾರೆ" ಎಂದ.

ಅದಕ್ಕೆ ಜಾಕಿ ಚಾನ್ "ನೀನು ನನ್ನ ಮಗ ನಿಜ. ಆದರೆ ನೀನು ನನ್ನಂತೆ ಆಗುವುದು ಅಷ್ಟು ಸುಲಭ ಅಲ್ಲ. ನಾನು ಬಹಳ ಶ್ರಮಪಟ್ಟು ಈ ಎತ್ತರಕ್ಕೆ ಬಂದಿದ್ದೀನಿ, I have fixed new standards in action movies, you are far behind that level" ಎಂದು ನಿಷ್ಠೂರವಾಗಿ ಹೇಳಿದ್ದ.

ಸಿನಿಮಾ, ಸಾಹಿತ್ಯ, ಕ್ರೀಡೆ ಹೀಗೆ ಯಾವುದೇ ಕ್ಷೇತ್ರದಲ್ಲಿ ಹೊಸದನ್ನು ಸಾಧಿಸುವುದು, ಇನ್ನಷ್ಟು ಎತ್ತರದ standard fix ಮಾಡುವುದು. ಅದನ್ನೇ ದಾಟಿ ಮತ್ತಷ್ಟು ಮುಂದಕ್ಕೆ ಹೋಗುವುದೆಲ್ಲಾ ಇದ್ದೇ ಇರುತ್ತದೆ.

ಬಾಲಚಂದರ್ ಇಂತದ್ದನ್ನೆಲ್ಲಾ ಹಾದುಬಂದಿರುವ ಮನುಷ್ಯ.

ಬಡತನ, ಅಭದ್ರತೆಯೊಂದಿಗೇ ಜೀವನ ಆರಂಭಿಸಿದ ಬಾಲಚಂದರ್‌ಗೆ ಸಿನಿಮಾ ಪ್ರೀತಿ ಬೆಳೆದಾಗ ಅವರನ್ನು ಬೆಂಬಲಿಸಿ ಅನೇಕರು ಪ್ರೋಷಿಸಿದರು. ಸರ್ಕಾರಿ ಲೆಕ್ಕಪತ್ರ ಇಲಾಖೆಯ ಕಚೇರಿಯೊಂದರಲ್ಲಿ ಪುಟ್ಟ ನೌಕರಿ ಮಾಡುತ್ತಿದ್ದ ಬಾಲಚಂದರ್‌ಗೆ ಆಗ ನಾಟಕಗಳ ಹುಚ್ಚು, ಒಂದು ಗೆಳೆಯರ ಗುಂಪು ಕಟ್ಟಿಕೊಂಡು 'ಮೇಜರ್ ಸರ್ವರ್ ಸುಂದರಂ, ಚಂದ್ರಕಾಂತ್' ಎಂಬ ನಾಟಕಗಳನ್ನು ಬರೆದು ಆಡಿಸುತ್ತಿದ್ದರು. ಕೆಲ ಸಮಯ ಶಿಕ್ಷಕನಾಗಿಯೂ ಕೆಲಸ ಮಾಡಿದ್ದರು. ತಮಿಳುನಾಡಿನ ಮಿಡಲ್ ಕ್ಲಾಸ್ ಜನವರ್ಗಕ್ಕೆ, ಬಾಲಚಂದರ್ ನಾಟಕಗಳು, ಡೈಲಾಗ್‌ಗಳು ಬಹಳ ಇಷ್ಟವಾದವು. ಆಗಲೇ ಎಂಜಿಆರ್ ಸಿನಿಮಾಗಳಿಗೆ ಡೈಲಾಗ್ ಬರೆಯುವ ಅವಕಾಶ ಸಿಕ್ಕಿತು. ಆಗ ತಮಿಳುನಾಡಿನಲ್ಲಿ ಬ್ರಾಹ್ಮಣ ವಿರೋಧಿ ಚಳವಳಿಯ ಬಿಸಿ ಜೋರಾಗಿತ್ತು, ಸ್ವತಃ ಬ್ರಾಹ್ಮಣ ಹಿನ್ನೆಲೆಯ ಬಾಲಚಂದರ್‌ಗೆ ಬ್ರಾಹ್ಮಣ ವಿರೋಧಿ ಗುಂಪಿನ ಅಣ್ಣಾದೊರೈ, ಎಂ.ಜಿ.ಆರ್, ಕರುಣಾನಿಧಿಯವರ ಹಿಡಿತದಲ್ಲಿದ್ದ ಸಿನಿಮಾ ರಂಗದಲ್ಲಿ ತಮ್ಮದೇ ಸ್ಥಾನ ಪಡೆಯುವುದು ಅಷ್ಟು ಸುಲಭವಾಗಿರಲಿಲ್ಲ, ಆದರೆ ಆತನ ಪ್ರತಿಭೆ ಹಾಗೂ consistencyಗಳು ಬಾಲಚಂದರ್‌ಗೆ ಪ್ರತ್ಯೇಕ ದಾರಿಯೊಂದನ್ನೇ ತೆರೆಯಿತು. ಈ ತಮಿಳು ಸಿನಿಮಾದ ಜನ ಅದೆಂತಾ ಪ್ರೊಫೆಷನಲ್ ಹಾಗೂ ಪ್ರಬುದ್ಧರೆಂದರೆ ಬಾಲಚಂದರ್ ಸಾಮರ್ಥ್ಯದ ಬಗ್ಗೆ ಅರಿತಿದ್ದ ನಿರ್ಮಾಪಕ ಮೆಯಪ್ಪನ್ ಎಂಬಾತ "ನಿನ್ನ ಸರ್ಕಾರಿ ಕೆಲಸ ಬಿಟ್ಟು ಬಾ. ಮುಂದಿನ ಮೂರು ವರ್ಷದಲ್ಲಿ ನಿನಗೆ ಮೂರು ಸಿನಿಮಾದ ಕೆಲಸ ವಹಿಸುತ್ತೇನೆ, ಅಷ್ಟರಲ್ಲಿ ನೀನು ನಿನಗೆ ಯೋಗ್ಯವಾದ ಸ್ಥಾನ ಪಡೆದಿರುತ್ತೀಯ" ಎಂದು ಧೈರ್ಯ ತುಂಬಿ ಬಾಲಚಂದರ್‌ರನ್ನು ಸಿನಿಮಾ ಕ್ಷೇತ್ರಕ್ಕೆ ಪೂರ್ತಿ ಕರೆತಂದು ನಿಲ್ಲಿಸಿದ್ದ. ಅಪೂರ್ವ ರಾಗಂಗಳ್, ಅವರ್‌ಗಳ್, ಅಚ್ಚಮಿಲ್ಲೈ ಅಚ್ಚಮಿಲ್ಲೈ, ತಣ್ಣೀರ್ ತಣ್ಣೀರ್, ಮರೋಚರಿತ್ರ, ರುದ್ರವೀಣಾ, ಬೆಂಕಿಯಲ್ಲಿ ಅರಳಿದ ಹೂವು.... ಹೀಗೆ ಎಂಬತ್ತು ಸಿನಿಮಾ ಮಾಡಿದ ಬಾಲಚಂದರ್ ವೈಶಿಷ್ಟತೆ ಇರುವುದು ಆತನ ವ್ಯಕ್ತಿತ್ವದಲ್ಲಿ.

ಸಿನಮಾ ಪ್ರಪಂಚದಲ್ಲಿ ಹೀರೋಗಳ ಪ್ರಖ್ಯಾತಿಯ ಎದುರು ನಿರ್ದೇಶಕರು, ಕ್ಯಾಮೆರಾಮೆನ್‌ಗಳು ಮಿಂಚುವುದು ಬಹಳ ಕಷ್ಟ. ಆದರೆ ಬಾಲಚಂದರ್ ಎದುರು ಇಂಡಿಯಾದ ಬಹುತೇಕ ಸೂಪರ್‌ಸ್ಟಾರ್‌ಗಳೆಲ್ಲಾ ವಿನಯದಿಂದ ನಡೆದುಕೊಳ್ಳುತ್ತಾರೆ. ಆರ್ಟ್ ಡೈರೆಕ್ಟರ್ ಆಗಿದ್ದ ಕಮಲ್ ಹಾಸನ್ ನಟನಾಗಿ ಬೆಳೆದದ್ದೇ ಬಾಲಚಂದರ್ ಸ್ಪರ್ಶದಿಂದ. ಬಸ್ ಕಂಡಕ್ಟರ್ ಶಿವಾಜಿ ರಾವ್ ಛಾನ್ಸ್ ಕೇಳಿಕೊಂಡು ಬಂದಾಗ ರಜನಿಕಾಂತ್ ಎಂದು ಹೆಸರಿಟ್ಟು "ಇವನು ಮುಂದೆ ಇಡೀ ಸಿನಿಮಾ ಜಗತ್ತನ್ನೇ ಆಳುತ್ತಾನೆ ನೋಡ್ತಾ ಇರಿ" ಎಂದಿದ್ದರಂತೆ ಬಾಲಚಂದರ್. ನಟಿ ಸರಿತಾಳನ್ನು ಎಲ್ಲರೂ reject ಮಾಡಿದ್ದರೂ ಬಾಲಚಂದರ್ ಕರೆದು ಅವಕಾಶ ಕೊಟ್ಟರು. ಕನ್ನಡ ಸಿನಿಮಾದ ದಡ್ಡರು ಅವಕಾಶ ಕೊಡದೆ ನಿರ್ಲಕ್ಷಿಸಿದ್ದ ಪ್ರಕಾಶ್ ರೈ ಮದ್ರಾಸಿಗೆ ಹೋಗಿ ಬಾಲಚಂದರ್ ಭೇಟಿಯಾದಾಗ ತಕ್ಷಣ ಅವಕಾಶ ಸಿಕ್ಕಿತು.

"ಆ ಹುಡುಗನ ಕಣ್ಣು ಬೆಂಕಿಯಂತೆ ಪ್ರಜ್ವಲಿಸುತ್ತಿದೆ. ಅವನು ಒಳ್ಳೇ ನಟ ಆಗುತ್ತಾನೆ" ಎಂದು ನಟಿ ಗೀತಾಗೆ ಬಾಲಚಂದರ್ ಹೇಳಿದ್ದು ಈಗ ನಿಜ ಆಗಿದೆ. ಒಬ್ಬ ವ್ಯಕ್ತಿ ಸೂಕ್ಷ್ಮಗ್ರಾಹಿಯಾದರೆ ತಾನೇ ಇನ್ನೊಬ್ಬರ ಕಣ್ಣಲ್ಲಿ ಪ್ರಜ್ವಲಿಸುವ ಬೆಂಕಿ ಕಾಣುವುದು?

ಎಂಭತ್ತು ಸಿನಿಮಾ ನಿರ್ದೇಶಿಸಿ ಹಲವು ಸಿನಿಮಾಗಳನ್ನು ನಿರ್ಮಿಸಿದ ಬಾಲಚಂದರ್ ದೊಡ್ಡ ಹೆಸರು ಮಾಡಿದರಾದರೂ ಶ್ರೀಮಂತನಾಗಲಿಲ್ಲ. ಅವರ ಸ್ವಂತ ನಿರ್ಮಾಣ ಸಂಸ್ಥೆ 'ಕವಿತಾಲಯ' ಹಣಕಾಸಿನ ಸಮಸ್ಯೆಗೆ ಸಿಕ್ಕಿಕೊಂಡಾಗ ಸೂಪರ್‌ಸ್ಟಾರ್‌ಗಳಾಗಿದ್ದ ಕಮಲ್ ಹಾಗೂ ರಜನಿ ನೆರವಾಗಲು ಹೋದರು. ಆದರೆ 'ನೋ' ಅಂದ ಬಾಲಚಂದರ್ "ಹೋಗ್ರೋಲೆಯ್, ಇದು ನನ್ನ ಸಮಸ್ಯೆ ಹೊಸ ನಿರ್ದೇಶಕರ ಎದುರು ಅವರನ್ನು ಮೀರಿಸುವ ಸಿನಿಮಾ ಮಾಡಿ ನನ್ನ ಅಸ್ತಿತ್ವ ಉಳಿಸಿಕೊಳ್ಳುತ್ತೇನೆ ವಿನಃ ನಿಮ್ಮ ದುಡ್ಡಿನ ಸಹಾಯದಿಂದ ಬದುಕುಳಿಯಲು ಇಷ್ಟಪಡಲ್ಲ" ಎಂದು ವಾಪಸ್ ಕಳುಹಿಸಿದ್ದರು. ಬರಿಗೈ ದಾಸನಾಗಿ ಸತ್ತರೂ ಸೋಲಿಗೆ ಶರಣಾಗದ ಬಾಲಚಂದರ್‌ರ ಈ ವಿಶಿಷ್ಟ ಘನತೆ, ಛಲದ ವ್ಯಕ್ತಿತ್ವವು ಆಶ್ಚರ್ಯ ಹುಟ್ಟಿಸುತ್ತದೆ. ದಕ್ಷಿಣ ಇಂಡಿಯಾದ ಸಿನಿಮಾ ಜಗತ್ತನ್ನು ಆಳುತ್ತಿರುವ ಅನೇಕರು ಬಾಲಚಂದರ್‌ರ ವ್ಯಕ್ತಿತ್ವದಿಂದ ಪ್ರಭಾವಿತರಾಗಿಯೇ ತಮ್ಮ ಶಿಲ್ಪವನ್ನು ತಾವೇ ಕೆತ್ತಿಕೊಂಡಿದ್ದಾರೆ. ಜೊತೆಗೆ ವಿನೀತಭಾವವನ್ನು ಕೂಡ. ಹಾಗಾಗಿಯೇ ರಜನಿಕಾಂತ್ ಸೋತ ಒಬ್ಬ ನಿರ್ಮಾಪಕನನ್ನು ರಕ್ಷಿಸಲು ಕೇವಲ ಒಂದು ಪ್ಯಾಕ್ ಸಿಗರೇಟ್ ಅನ್ನಷ್ಟೇ ಸಂಭಾವನೆಯಾಗಿ ಪಡೆದು ಪುನಃ ನಟಿಸುವುದು, ಪ್ರಕಾಶ್ ರೈ ಪ್ರಖ್ಯಾತ ನಟನಾಗಿದ್ದಾಗಲೂ ನಮ್ಮ ಬಳಗದ ಸದಾಶಿವ ಶೆಣೈರ 'ಪ್ರಾರ್ಥನೆ' ಸಿನಿಮಾದ ಪುಟ್ಟ ಪಾತ್ರ ಒಪ್ಪಿಕೊಂಡು ಬಂದು ನಟಿಸಿ ಎನ್‌ಕರೇಜ್ ಮಾಡುವ ಗುಣಗಳನ್ನು ಬೆಳೆಸಿಕೊಂಡಿದ್ದಾರೆ.

ಕನ್ನಡ ಸಿನಿಮಾದಲ್ಲಿ "ನನ್ನನ್ನು ಮೀರಿಸುವವರು ಯಾರಿಲ್ಲ" ಅಂತಂದುಕೊಂಡು ತಿರುಗುವ ಅನೇಕರಿದ್ದಾರೆ. ಅಂತವರಿಗೆ ಈ 'ಬಾಲಚಂದರ್ ಸ್ಕೂಲ್' ಅಂದರೆ ಏನೆಂದು ಅರ್ಥವಾದರೆ ಚೆನ್ನ ಅಲ್ಲವೆ?

■ ಪಾರ್ವತೀಶ


ಪದ್ಮಾ-ಶ್ರೀರಾಂ ದಂಪತಿ ಡೋನಾಲ್ಡ್ ಭೇಟಿಯಾದಾಗ



...-ಶ್ರೀರಾಮ್ ದಂಪತಿ

ಕೆಲದಿನಗಳ ಹಿಂದೆ 'ಡೊನಾಲ್ಡ್ ಆಂಡರ್‌ಸನ್‌ರೊಂದಿಗೆ ಒಂದು ಸಂಜೆ' ಎಂಬ ಕಾರ್ಯಕ್ರಮವನ್ನು ನಮ್ಮ ಬಳಗದಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಅರೇಂಜ್ ಮಾಡಿದ್ದೆವು.

ಐವತ್ತು ಮಂದಿ ಕೂರಬಹುದಾದ ಕಲಾಕ್ಷೇತ್ರದ ಲಾಂಜ್ ಅವತ್ತು ನೂರಕ್ಕೂ ಹೆಚ್ಚು ಜನರಿಂದ ತುಂಬಿಹೋಗಿತ್ತು, ಅವರಲ್ಲಿ ಮುಕ್ಕಾಲು ಭಾಗ ಜನ ನಮಗೆ ಹೊಸ ಪರಿಚಯದವರು. ಕಾಡಿನ ಅಲೆದಾಟ, ವೈಲ್ಡ್ ಲೈಫ್ ಫೋಟೋಗ್ರಾಫಿ, ಮೀನು ಶಿಕಾರಿ, ಕಾಡಿನ ಬದುಕಿನ ಕುರಿತ ಓದಿನ ಹವ್ಯಾಸದ ಜನರವರು. ಅವತ್ತಿನ ಕಾರ್ಯಕ್ರಮಕ್ಕೆ ಮೈಸೂರಿನ ಪುಸ್ತಕ ಪ್ರಕಾಶನದ ಪದ್ಮಾ-ಶ್ರೀರಾಮ್ ದಂಪತಿ ಬಂದರು. ಹಲವಾರು ವರ್ಷಗಳಿಂದ ಡೋನಾಲ್ಡ್‌ನನ್ನು ಹುಡುಕಿ ಸಿಗದೆ ನಿರಾಶರಾಗಿದ್ದ ಅವರಿಗೆ ಡಾನ್ ಇಲ್ಲಿ ಸಿಕ್ಕಿದ್ದು ಸಂಭ್ರಮ ಮೂಡಿಸಿತ್ತು, ಅವತ್ತು ಬೆಳಗ್ಗೆಯೇ ನಾನು ಶ್ರೀರಾಮ್ ದಂಪತಿಯನ್ನು ಡಾನ್‌ನ ಪುಟ್ಟ ಕುಟೀರಕ್ಕೆ ಕರೆದೊಯ್ದು ಪರಿಚಯಿಸಿದೆ. ಅಲ್ಲಿ ಕೆನೆತ್ ಆಂಡರ್‌ಸನ್ ಶಿಕಾರಿ ಕತೆಗಳ ಕನ್ನಡಾನುವಾದದ ಕೆಲವು ವಿಚಾರಗಳನ್ನು ಚರ್ಚಿಸಿ ಬಗೆಹರಿಸಿಕೊಂಡು ಸಂಜೆ ಕಲಾಕ್ಷೇತ್ರಕ್ಕೆ ಕಾಲಿಟ್ಟಾಗ ಡಾನ್‌ನದ್ದು ಥೇಟ್ ಕೌಬಾಯ್ ಸ್ಟೈಲ್! ಸ್ಕಾಟೀಶ್ ಫೆಲ್ಟ್‌ಹ್ಯಾಟ್, ಸ್ಟೋನ್‌ವಾಶ್ ಶರ್ಟ್ ಹಾಗೂ ಜೀನ್ಸ್ ಪ್ಯಾಂಟ್ ತೊಟ್ಟಿದ್ದ ಡಾನ್ ಸಭಿಕರನ್ನು ತಮ್ಮ ಮಾತುಗಳಿಂದ ರಂಜಿಸಿದರು. ಈತ ಅದೆಂತಾ ಸಹೃದಯಿ ಎಂದರೆ ಸಭೆಯಲ್ಲಿದ್ದ ಅನೇಕರನ್ನು ವೇದಿಕೆಗೆ ಕರೆದು 'He is the top wild life photographer' 'ಈತ ಮೀನುಗಳ ಬಗ್ಗೆ ತುಂಬಾ ತಿಳಿದಿದ್ದಾನೆ'... ಎಂದೆಲ್ಲಾ ಪರಿಚಯಿಸಿದರು. ತನಗಿಂತ ಉತ್ತಮ ಕೆಲಸ ಮಾಡಿದವರನ್ನು ನೆನೆದು ಅಂಥವರ ಬಗ್ಗೆ ಮೊದಲು ಹೇಳುವ ಈ ಡಾನ್‌ನಿಂದಾಗಿಯೇ ನಮಗೆ ಕೆಲವು ಅಸಾಮಾನ್ಯ ಜನರ ಬಗ್ಗೆ ಮಾಹಿತಿ ಸಿಕ್ಕಿತು.




ನಮ್ಮ ಕರ್ನಾಟಕದ ಕಾಡುಗಳನ್ನು ತಿರುಗಿ ಅಲ್ಲಿನ ಪ್ರಾಣಿ-ಪಕ್ಷಿ ಸಂಕುಲಗಳ ಬಗ್ಗೆ ವಿವರವಾದ ಮಾಹಿತಿ ಕೊಟ್ಟವರ ಬಗ್ಗೆ ಓದುತ್ತಾ ಹೋದರೆ ಬೆರಗೆನಿಸುತ್ತದೆ. ಎಡ್ವರ್ಡ್ ಪಿಚರ್ಡ್ ಗೀ ಎಂಬಾತ ಈಗ್ಗೆ ಆರೆಂಟು ದಶಕಗಳ ಹಿಂದೆಯೇ `The wildlife of India' ಎಂಬ ಪಕ್ಷಿಗಳ ಕುರಿತ ಪುಸ್ತಕ ಬರೆದಿದ್ದಾನೆ. ಬಿಳಿಗಿರಿರಂಗನಬೆಟ್ಟದಲ್ಲಿ 19ನೇ ಶತಮಾನದಲ್ಲೇ ಮೊದಲ ಬಾರಿಗೆ ಕಾಫಿ ತೋಟ ಮಾಡಿದ ರ್‍ಯಾಂಡಲ್ಫ್ ಮೊರೀಸ್ ಮತ್ತವನ ಮಗ ರಾಲ್ಫ್ ಮೋರಿಸ್ ಕರ್ನಾಟಕದ ವನ್ಯಜೀವಿಗಳ ಬಗ್ಗೆ ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಯ ಮ್ಯಾಗಜಿನ್‌ನಲ್ಲಿ ಡಜನ್‌ಗಟ್ಟಲೇ ಲೇಖನಗಳನ್ನು ಬರೆದಿದ್ದಾರೆ. ಪಾವೆಲ್ ಎಂಬಾತ 1923ರಲ್ಲೇ ಕರ್ನಾಟಕ-ತಮಿಳುನಾಡಿನ ದಟ್ಟಾರಣ್ಯಗಳಲ್ಲಿ ಓಡಾಡಿ ಕೆಲವು ನರಭಕ್ಷಕ ಹುಲಿಗಳನ್ನು ಶಿಕಾರಿ ಮಾಡಿದ್ದ. ಅವನ ನೆನಪಿನಲ್ಲಿ ಗ್ರಾಮಸ್ಥರು ಮರದ ಹುಲಿಯೊಂದನ್ನು ರಚಿಸಿದ್ದು ಅದು ಈಗಲೂ ಮುದಿಯನೂರಿನಲ್ಲಿ ಇದೆ. ಈ ಪಾವೆಲ್ 'ಕಾಲ್ ಆಫ್ ದಿ ಟೈಗರ್' ಎಂಬ ರೋಚಕ ಪುಸ್ತಕ ಬರೆದಿದ್ದಾನೆ. (ಇದನ್ನು ಸದ್ಯದಲ್ಲೇ ನಮ್ಮ ಸಂಸ್ಥೆ ಪ್ರಕಟಿಸಲಿದೆ). ಇನ್ನು ಸೋಜಿಗದ ಸಂಗತಿ ಜಾರ್ಜ್ ಪಿಯಾರ್ಸ್ ಸ್ಯಾಂಡರ್‌ಸನ್ ಎಂಬಾತನದ್ದು, 1878 ರಲ್ಲೇ ಆಧುನಿಕ ಖೆಡ್ಡಾ ಯೋಜನೆ ರೂಪಿಸಿದ ಸ್ಯಾಂಡರ್‌ಸನ್ "ಥರ್ಟೀನ್ ಇಯರ್ಸ್ ಅಮಾಂಗ್ ದಿ ವೈಲ್ಡ್ ಬೀಸ್ಟ್ ಆಫ್ ಇಂಡಿಯಾ" ಎಂಬ ಅದ್ಭುತ ಪುಸ್ತಕ ಬರೆದಿದ್ದಾನೆ.

ಡೋನಾಲ್ಡ್ ಸೇರಿದಂತೆ ಇವರಲ್ಲಿ ಬಹುತೇಕರು ಸ್ಕಾಟಿಶ್ ಜನ. ಅಪಾರ ಜೀವನ ಪ್ರೀತಿಯ, ತಮಾಷೆ, ಲವಲವಿಕೆಯ ಇವರು ಒಂದು ಗೀಳಿನಂತೆ ಈ ಕೆಲಸಗಳನ್ನು ಮಾಡಿದ್ದಾರೆ.

ಇವನ್ನೆಲ್ಲಾ ಕನ್ನಡಕ್ಕೆ ತರುವ ಯೋಚನೆಯಲ್ಲಿದ್ದೇವೆ ನಾವು.


ಪತ್ರಕರ್ತ ಪಾಲ್‌ನ 'Out of Eden project.'

ವೈಜ್ಞಾನಿಕ ಸಂಶೋಧನೆಗಳ ಪ್ರಕಾರ ಮಾನವ ಉಗಮವಾದದ್ದು ಆಫ್ರಿಕಾ ಖಂಡದಲ್ಲಿ. ಆದರೆ ಆತ ಅಲ್ಲಿಂದ ನಮ್ಮ ಭೂಮಿಯ ವಿವಿಧ ಖಂಡಗಳಿಗೆ ಹೋಗಿದ್ದು ಹೇಗೆ? ಯಾಕೆ? ಯಾವಾಗ? ಎಂಬೆಲ್ಲ ಪ್ರಶ್ನೆಗಳು ನಮ್ಮಲ್ಲಿ ಕುತೂಹಲವನ್ನು ಉಂಟುಮಾಡುವುದು ಸಹಜ. ಈಗ ಅಂತಹ ಕುತೂಹಲವನ್ನು ತಣಿಸಲು ಪಾಲ್ ಸಲೋಪೆಕ್ ಎಂಬ ಪತ್ರಕರ್ತ ಸಜ್ಜಾಗುತ್ತಿದ್ದಾನೆ. ಈಗಾಗಲೇ ಪ್ರತಿಷ್ಠ ಪುಲಿಟ್ಜರ್ ಪ್ರಶಸ್ತಿಯನ್ನು ಎರಡು ಬಾರಿ ಗೆದ್ದಿರುವ, ಹಲವಾರು ಇತರೆ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿರುವ ಪಾಲ್ ಪತ್ರಕರ್ತನಾಗಿ ತನ್ನ ಜೀವನದಲ್ಲೇ ಅತಿ ದೊಡ್ಡದಾದ, ದೀರ್ಘವಾದ ಮತ್ತು ಅತಿ ಮುಖ್ಯವಾದ **assignment** ಮೇಲೆ ಹೊರಡಲಿದ್ದಾನೆ.



ಸರಿಸುಮಾರು **70,000** ವರ್ಷಗಳ ಹಿಂದೆ ಆಫ್ರಿಕಾದಿಂದ ಹೊರಟ ಮಾನವನಂತೆ ಪಾಲ್ ಕೂಡ ಹೊರಟು, ವಿವಿಧ ಖಂಡಗಳನ್ನು ದಾಟಿ, ಕೊನೆಗೆ ದಕ್ಷಿಣ ಅಮೆರಿಕ ಖಂಡದ ತುತ್ತತುದಿಯನ್ನು ಮುಟ್ಟಲಿದ್ದಾನೆ. ಅಂದಹಾಗೆ ಪಾಲ್ ಈ ಪಯಣವನ್ನು ಯಾವುದೋ ವಿಮಾನದಲ್ಲಿ ಅಥವಾ ವಾಹನದಲ್ಲಿ ಮಾಡುತ್ತಿಲ್ಲ. ಬದಲಾಗಿ ಸಾವಿರಾರು ವರ್ಷಗಳ ಹಿಂದೆ ಹೇಗೆ ಮಾನವ ಕಾಲು ನಡಿಗೆಯಲ್ಲಿ ಹೋದನೋ ಹಾಗೆಯೇ ಪಾಲ್ ಕೂಡ ನಡೆದುಕೊಂಡೇ ಹೋಗಲಿದ್ದಾನೆ. ಈ ಪಯಣಕ್ಕೆ ಪಾಲ್ ತೆಗೆದುಕೊಳ್ಳಲಿರುವ ಅವಧಿ ಏಳು ವರ್ಷಗಳು! ಮಾತ್ರವಲ್ಲ ಆತ ಹಾದುಹೋಗಲಿರುವ ದೂರು **22,000** ಮೈಲಿಗಳು!!

ಶಿಲಾಯುಗದಲ್ಲಿ ಈಗಿನ ಇಥಿಯೋಪಿಯಾದಲ್ಲಿರುವ ಗ್ರೇಟ್ ರಿಫ್ಟ್ ಕಣಿವೆಯೇ 'ಈಡನ್' ಆಗಿತ್ತೆಂದೂ, ಅದುವೇ ಮನುಕುಲದ ಜನ್ಮಸ್ಥಳವಾಗಿತ್ತೆಂದೂ ಸಂಶೋಧಕರು ಹೇಳುತ್ತಾರೆ. ಆದ್ದರಿಂದ ಪಾಲ್ ಅಲ್ಲಿಂದಲೇ ತಮ್ಮ ಪ್ರಯಾಣವನ್ನು ಪ್ರಾರಂಭಿಸಲಿದ್ದಾರೆ. ಅಲ್ಲಿಂದ ಅವರು ಆಫ್ರಿಕಾದ ಪೂರ್ವ ಮತ್ತು ಉತ್ತರ ಭಾಗಗಳನ್ನು ದಾಟಿ, ಏಷ್ಯಾ ಖಂಡವನ್ನು ಪ್ರವೇಶಿಸಿ, ಹಿಮಾಲಯ ಪರ್ವತದ ಅಂಚಿನಲ್ಲಿ ಭಾರತವನ್ನು ಹಾದು, ಚೀನಾವನ್ನು ಪ್ರವೇಶಿಸಿ, ರಷ್ಯಾದ ಸರ್ಬಿಯಾ ದಾಟಿ, ಅಲಾಸ್ಕಾದಿಂದ ಉತ್ತರ ಅಮೆರಿಕ ಖಂಡವನ್ನು ಪ್ರವೇಶಿಸಿ, ಕೆನಡಾ, ಅಮೆರಿಕ, ಮೆಕ್ಸಿಕೋ ದೇಶಗಳನ್ನು ಹಾದು, ದಕ್ಷಿಣ ಅಮೆರಿಕಾ ಖಂಡದ ವಿವಿಧ ದೇಶಗಳನ್ನು ಹೊಕ್ಕು ಕೊನೆಗೆ ಅದರ ದಕ್ಷಿಣ ತುದಿಯಲ್ಲಿರುವ 'ಲ್ಯಾಂಡ್ಸ್ ಎಂಡ್' ಎಂಬ ಜಾಗವನ್ನು ಮುಟ್ಟಲಿದ್ದಾರೆ. ಈ ಪ್ರಯಾಣದಲ್ಲಿ ಅವರು ಏಷ್ಯಾ ಖಂಡದಿಂದ ಅಮೆರಿಕ ಖಂಡವನ್ನು ತಲುಪಲು ಮಾತ್ರ ಒಂದು ಹಡಗನ್ನೇರಲಿದ್ದಾರೆ. ಮಿಕ್ಕಂತೆ ಅವರದ್ದು 'ನಟರಾಜ'ನ ಸ್ಥಿತಿ. ಬರುವ ಏಳು ವರ್ಷಗಳಲ್ಲಿ ಅವರು ಮೂರು ಖಂಡಗಳನ್ನು, ಹಲವಾರು ದೇಶಗಳ ಗಡಿಗಳನ್ನು ದಾಟಲಿದ್ದಾರಲ್ಲದೆ, ನೂರಾರು ಭಾಷಿಕ ಸಮುದಾಯಗಳ ಮತ್ತು ವಿವಿಧ ಸಂಸ್ಕೃತಿಗಳೊಂದಿಗೆ ಮುಖಾಮುಖಿಯಾಗಲಿದ್ದಾರೆ.


OUT OF EDEN: The route

"ಯಾಕೆ ತಾವು ಕಾಲುನಡಿಗೆಯಲ್ಲೇ ಈ ಪ್ರಯಾಣವನ್ನು ಮಾಡಲು ಇಚ್ಛಿಸಿದ್ದೀರಿ? ಯಾಕೆ ವಾಹನವನ್ನು ಉಪಯೋಗಿಸಬಾರದು?" ಎಂದು ಪ್ರಶ್ನಿಸುವವರಿಗೆ ಪಾಲ್ ಕೊಡುವ ಉತ್ತರ ಮಾರ್ಮಿಕವಾಗಿದೆ. "ಇದಕ್ಕೆ ಎರಡು ಮುಖ್ಯ ಕಾರಣಗಳಿವೆ. ಮಾನವನಿಗೆ ಎರಡು ಮುಖ್ಯ ಗುಣಧರ್ಮಗಳಿವೆ. ಅವುಗಳೆಂದರೆ ಕತೆ ಹೇಳುವುದು ಮತ್ತು ನಡೆಯುವುದು. ಈ ಎರಡೂ ಲಕ್ಷಣಗಳು ಇತರೆ ಪ್ರಾಣಿಗಳಿಗಿಲ್ಲ. ನಮ್ಮ ಮಾನವ ಜಾತಿ ತನ್ನ ಇತಿಹಾಸದ ಶೇಕಡ **95** ಭಾಗವನ್ನು ನಡಿಗೆಯಲ್ಲೇ ಕಳೆದಿದೆ. ನಮ್ಮ ಪೂರ್ವಜರು ಪ್ರತಿ ವರ್ಷ **3,200**ರಿಂದ **3,500** ಮೈಲಿಗಳಷ್ಟು ದೂರ ನಡೆಯುತ್ತಿದ್ದರು. ನಮ್ಮ ಮಾನವ ಜಾತಿವಿಕಾಸ ಹೊಂದಿರುವುದೂ ಇಂತಹ ನಡಿಗೆಗೆ ಸೂಕ್ತವಾಗಿ. ನಾವು ಒಂದು ರೀತಿಯಲ್ಲಿ 'ನಡೆದಾಡುವ ಯಂತ್ರಗಳು'" ಎನ್ನುತ್ತಾರೆ ಪಾಲ್.



ಹಾಗೆಯೇ ಈ ಪ್ರಯಾಣದುದ್ದಕ್ಕೂ ಪಾಲ್ ತಮ್ಮ ಸುತ್ತಲಿನ ಜಾಗಗಳನ್ನು ಕುರಿತು 'ಕತೆ'ಗಳನ್ನು ಹೇಳಲಿದ್ದಾರೆ. **70,000** ವರ್ಷಗಳ ಹಿಂದೆ ಮಾನವ ಸಾಗಿದ ಹಾದಿ ಈ ಪ್ರಯಾಣಕ್ಕೆ ಹಿನ್ನೆಲೆ ಒದಗಿಸಿದರೂ, ಪಾಲ್ ಅದರೊಂದಿಗೆ ಪ್ರಸ್ತುತ ಸ್ಥಳೀಯ ಪರಿಸ್ಥಿತಿ, ಮಾನವ ಸಂಘರ್ಷ, ಭಾರಿ ವಲಸೆ, ತಂತ್ರಜ್ಞಾನದ ಅಭಿವೃದ್ಧಿ, ಪರಿಸರ, ತಾಪಮಾನದ ವಿಕಾಸ ಮತ್ತು ಸಂಸ್ಕೃತಿಯ ಅವಲೋಕನ ಕುರಿತು ವರದಿಗಳನ್ನು ಬರೆದು ವಿವಿಧ ಮಾಧ್ಯಮಗಳ ಮೂಲಕ ಬಿತ್ತರಿಸಲಿದ್ದಾರೆ.

"ಇದು ಭೂತಕಾಲಕ್ಕೆ ಹೋಗುವ ನಡಿಗೆಯಲ್ಲ, ಬದಲಾಗಿ ನಮ್ಮ ಭವಿಷ್ಯವನ್ನು ಅರಿಯುವ ನಡಿಗೆ" ಎನ್ನುತ್ತಾರೆ ಪಾಲ್.

ಬೇರೆಯವರ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ನಾನು ಚಿಕ್ಕವಳಾಗಿದ್ದಾಗ ಎಂದಾದರೊಮ್ಮೆ ಒಂದು ಕಾರ್ ಅಥವಾ ಜೀಪನ್ನೇರಿ ಈಶಾನ್ಯದಲ್ಲಿರುವ ಅರುಣಾಚಲ ಪ್ರದೇಶದಿಂದ ಪ್ರಯಾಣವನ್ನು ಪ್ರಾರಂಭ ಮಾಡಿ, ಭಾರತದ ವಿವಿಧ ರಾಜ್ಯಗಳನ್ನು ದಾಟಿ, ಕೇರಳದ ತನಕ ಹೋಗಬೇಕೆಂದು ಕನಸು ಕಂಡಿದ್ದೆ.



ಕಂಡಹಾಗೆ

editorlankesh@gmail.com • ಗೌರಿ ಲಂಕೇಶ್

ಆದರೆ ಅದೆಂದೂ ಸಾಧ್ಯವಾಗಲೇ ಇಲ್ಲ. ಈಗ ಅದು ಸಾಧ್ಯವೂ ಇಲ್ಲ. ಆದ್ದರಿಂದ ಪತ್ರಕರ್ತರಾದ ಪಾಲ್ ಅವರ ಈ ಪ್ರಯಾಣದ ಬಗ್ಗೆ ಓದಿದಾಗ ಒಂದು ರೀತಿಯಲ್ಲಿ ನನಗೆ ಸಂತೋಷವಾಯಿತು. ಅಂದಹಾಗೆ, ಪಾಲ್ ಅವರ ಈ ಪ್ರಯಾಣದ ಬಗ್ಗೆ ಆಸಕ್ತಿ ಮತ್ತು ಕುತೂಹಲ ಇರುವವರು ಆಧುನಿಕ ತಂತಜ್ಞಾನದ ನೆರವಿನಿಂದ ಪಾಲ್ ಅವರೊಂದಿಗೆ ಒಂದು ರೀತಿಯಲ್ಲಿ ನಾವೂ **'technically walk'** ಮಾಡಬಹುದು. ಅವರ ಈ ನಡಿಗೆಗೆ ಕೊಡಲಾಗಿರುವ ಹೆಸರು **'Out of Eden project.'** ■

ಬಿಬಿಎಂಪಿ: ಕೌನ್ಸಿಲರ್ ಅವ್ವೆಯ್‌ಗೆ ಮೇಕಪ್ಪು ಬೇರೆ ಕೇಡು!

ದುರಾಚಾರವೋ ಗ್ರಾಚಾರವೋ ಗೊತ್ತಿಲ್ಲ, ಬಿಬಿಎಂಪಿಯ ಕಾಂಗ್ರೆಸ್ ಕೌನ್ಸಿಲರ್‌ಗಳೆಲ್ಲ ಒಬ್ಬೊಬ್ಬರಾಗಿ ಜೈಲು ಪಾಲಾಗುತ್ತಿದ್ದಾರೆ. ಗಣೇಶ್ ಮಂದಿರ ವಾರ್ಡಿನ ಪಾಲಿಕೆ ಸದಸ್ಯ ಗೋವಿಂದರಾಜು ಲಂಚ ಪಡೆಯುವಾಗಲೇ ಸಿಕ್ಕಿಬಿದ್ದು ಜೈಲು ಪಾಲಾದರೆ, ಆಜಾದ್‌ನಗರ ವಾರ್ಡಿನ ಗೌರಮ್ಮ ಕೊಲೆ ಆರೋಪದಲ್ಲಿ ಸಿಲುಕಿ ಜೈಲಿಗೆ ಹೋಗಿದ್ದಾಯ್ತು. ಈಗ ಸುಧಾಮನಗರ ವಾರ್ಡಿನ ಲೇಡಿ ಕೌನ್ಸಿಲರ್ ಅವ್ವೆಯ್ ಸರದಿ.

ಕಲಾಸಿಪಾಳ್ಯದಲ್ಲಿ ಪುಟ್ಟ ಕ್ಯಾಂಟೀನ್ ನಡೆಸಿಕೊಂಡಿದ್ದವನನ್ನೂ ಬಿಡದೇ ಸುಲಿಗೆಗೆ ನಿಂತವಳು ಕೌನ್ಸಿಲರ್ ಅವ್ವೆಯ್. ಈಕೆಯ ತಂದೆ ಅಂಗಮುತ್ತು ಯಾವುದೋ ಕಾಲಕ್ಕೆ ಸುಧಾಮನಗರಕ್ಕೆ ಕೌನ್ಸಿಲರ್ ಆಗಿದ್ದ. ಇದಕ್ಕೂ ಮುನ್ನ ಮಾರ್ಕೆಟ್ ದೇವಿಯ ಬಲಗೈ ಬಂಟ ಪ್ರಭುವನ್ನು ಗೆಲ್ಲಿಸುವುದಕ್ಕೂ ಈತನೇ ಶ್ರಮವಹಿಸಿದ್ದ. ಆ ಕಾಲಕ್ಕೇ ದೋಚಿದ ದುಡ್ಡಿತ್ತಾದ್ದರಿಂದ ಮಗಳು ಅವ್ವೆಯನ್ನು ಚೆನ್ನಾಗೇ ಓದಿಸಿದ್ದ. ಬೆಳೆದ ಮಗಳು ಮಾರ್ಕೆಟ್ ದೇವಿಯ ಆದರ್ಶ(!), ವ್ಯಕ್ತಿತ್ವ, ಹೋರಾಟಕ್ಕೆ ಮಾರುಹೋದಳು. ತನಗಿನ್ನು ಮದುವೆಯೇ ಬೇಡ, ನಾಯಕ ದೇವಿ ಜೊತೆ ಕಾಂಗ್ರೆಸ್ ಸೇವೆಯಲ್ಲೇ ಇದ್ದು ಬಿಡುತ್ತೇನೆ ಎಂದಾಗಲೇ ತಂದೆ ಅದಕ್ಕೆ ತಡೆಯೊಡ್ಡಲಿಲ್ಲ.


ಯಾವತ್ತು ಸುಧಾಮನಗರ ವಾರ್ಡು ಪರಿಶಿಷ್ಟ ಜಾತಿಗೆ ಮೀಸಲಾಯಿತೋ ಮಾರ್ಕೆಟ್ ದೇವಿಯ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಯ್ತು. ಮನೆಯಲ್ಲೇ ಮೇಕಪ್ಪು ಮಾಡಿಕೊಂಡಿದ್ದ ಅವ್ವೆಯೇ ಕಾಂಗ್ರೆಸ್ ಕ್ಯಾಂಡಿಡೇಟು ಎಂದು ದೇವಿ ಘೋಷಿಸಿಬಿಟ್ಟರು. ಶಿಷ್ಯ ಪ್ರಭು ಕೂಡ ಗುರು ದೇವಿಯ ಆಣತಿ ಮೀರಲಾಗದವನಾಗಿದ್ದ. ಮಾಜಿ ಕೌನ್ಸಿಲರ್‌ಗಳಾದ ಅಂಗ ಮತ್ತು ಪ್ರಭು, ಧಣಿ ದೇವಿ ಎಲ್ಲರೂ ಬೆವರು ಹರಿಸಿ ಅವ್ವೆಯನ್ನು ಗೆಲ್ಲಿಸಿಕೊಟ್ಟರು.



ಅವ್ವೆ ವಿರುದ್ಧ ರೌಡಿ ಮಲೆಯಾಳಿ ಪ್ರವೀಣನೇ ಅಖಾಡಕ್ಕಿಳಿದಿದ್ದ. ಮತ್ತೊಬ್ಬ ಘಾತಕಿ ಸೈಲೆಂಟ್ ಸುನೀಲನ ಬಂಟ ಮಾರ್ಕೆಟ್ ವೇಡಿಯೂ ಸಾಕಷ್ಟು ಹೆಣಗಾಡಿದ್ದ. ಆದರೆ ದೇವಿಯ ಮುಂದೆ ರೌಡಿಗಳಿಬ್ಬರ ಯಾವ ಆಟವೂ ನಡೆಯಲಿಲ್ಲ. ಅವ್ವೆಯ್ ಐನೂರು ಚಿಲ್ಲರೆ ಮತಗಳಿಂದ ಗೆದ್ದುಬಿಟ್ಟಳು. ವಿದ್ಯಾವಂತೆ. ದಾರಿದ್ರ್ಯವಿರಲಿಲ್ಲ. ತಂದೆ ಮಾಡಿದ ಆಸ್ತಿಯೇ ಕೂತು ಉಣ್ಣುವಷ್ಟಿತ್ತು. ಮೇಕಪ್ಪಿನ ಖರ್ಚಿಗೆ ಬರುತ್ತಿದ್ದ ಕಮೀಷನ್ನೇ ಸಾಕಾಗುತ್ತಿತ್ತು. ಎಲೆಕ್ಷನ್ನಿಗೆ ಹಾಕಿದ ಬಂಡವಾಳ ಕೂಡ ಧಣಿ ದೇವಿಯ ದುಡ್ಡೇ ಆಗಿದ್ದರಿಂದ ಅವ್ವೆಯ್‌ಗೆ ಪುಡಿಕಾಸಿಗೆ ಕೈಚಾಚುವಂಥ ದುರ್ಗತಿ ಇರಲೇ ಇಲ್ಲ. ಮೊದಲೇ ಮದುವೆಯಿಲ್ಲವಾದ್ದರಿಂದ ಆ ಪಾಪದ ದುಡ್ಡಿಟ್ಟು ಏನು ಆಗಬೇಕಿರಲಿಲ್ಲ.

ಆದರೆ ದುರಾಶೆ ಬಿಡಬೇಕಲ್ಲ. ಹಡಬೆ ದುಡ್ಡು ಹುಟ್ಟುತ್ತದೆಯೆಂದರೆ ಯಾವ ಕೊಚ್ಚೆಗೆ ಬೇಕಾದರೂ ಇಳಿಯುವ ಬುದ್ಧಿಯಿರುವಾಗ ಬಡಪಾಯಿಯ ಕ್ಯಾಂಟೀನಾದರೇನು ಫುಟ್‌ಪಾತ್ ಗಾಡಿಯವನಾದರೇನು?

ಸುಲಿಗೆಗೆ ನಿಂತೇಬಿಟ್ಟಳು ಅವ್ವೆಯ್. ಕಲಾಸಿಪಾಳ್ಯದಲ್ಲಿ ಹೋಟೆಲ್ ನಡೆಸಬೇಕೆಂದರೆ ಲಂಚ ಕಕ್ಕಲೇಬೇಕೆಂದು ಹೋಟೆಲ್ ಇಟ್ಟಿದ್ದ ಚನ್ನೇಗೌಡನ ಮೇಲೆ ಪಾಲಿಕೆ ಅಧಿಕಾರಿಗಳನ್ನು ಛೂಬಿಟ್ಟಳು. ಬಡಪಾಯಿ ಚನ್ನೇಗೌಡ [illegible]



ಅದೂ 15 ಸಾವಿರ ರೂಪಾಯಿ ಲಂಚದ ಸಮೇತ ಲೋಕಾಯುಕ್ತ ಪೊಲೀಸರು "ಇನ್ನೇನು ಎಳೆದೊಯ್ಯಬೇಕು" ಅನ್ನುವಷ್ಟರಲ್ಲಿ "ಇರಿ ಸಾರ್, ಬಂದೇ ಒಂದು ನಿಮಿಷ... ಮೇಕಪ್ ಮಾಡಿಕೊಂಡು ಬರ್ತೀನಿ..." ಎಂದು [illegible]

[illegible]

■ [illegible]


ಬಿಜೆಪಿ-ಕೆಜೆಪಿ: ಯಾರ ರಾಜಕೀಯ ಲೆಕ್ಕಾಚಾರ ತಲೆಕೆಳಗಾಗುತ್ತದೆ?



ಮೊನ್ನೆ ಡಿಸೆಂಬರ್ 9 ಸೋನಿಯಾ ಗಾಂಧಿಯವರ ಹುಟ್ಟುಹಬ್ಬದ ದಿನದಂದು ಹಾವೇರಿಯಲ್ಲಿ ಕರ್ನಾಟಕ ಜನತಾ ಪಕ್ಷ ಎಂಬ ಹೊಸ ಪ್ರಾದೇಶಿಕ ಪಕ್ಷವನ್ನು ಯಡಿಯೂರಪ್ಪ ಹುಟ್ಟುಹಾಕಿದ ನಂತರ ರಾಜ್ಯದಲ್ಲಿ ರಾಜಕೀಯ ಲೆಕ್ಕಾಚಾರಗಳು ಆರಂಭವಾಗಿವೆ. ಯಡಿಯೂರಪ್ಪನ ಸಮಾವೇಶದಲ್ಲಿ ಸುಮಾರು 14 ಜನ ಶಾಸಕರು ಭಾಗವಹಿಸಿದ್ದು ಎಲ್ಲ ಹೊಸ ತರ್ಕಗಳಿಗೆ ಕಾರಣವಾಗಿದೆ.

ಜಗದೀಶ್ ಶೆಟ್ಟರ್ ನೇತೃತ್ವದ ಬಿಜೆಪಿ ಸರ್ಕಾರ 'ಸಡನ್ ಡೆತ್' ಕಂಡುಕೊಂಡು ಪತನವಾಗುತ್ತದೆಯೋ? ಅಥವಾ ತನ್ನ ಅವಧಿಯನ್ನು ಸಂಪೂರ್ಣಗೊಳಿಸುತ್ತದೆಯೋ ಎಂಬ ಕುತೂಹಲ ರಾಜಕೀಯವಲಯದಲ್ಲಿದೆ. ತಾನೇ ಮುಖ್ಯಮಂತ್ರಿ ಮಾಡಿದ್ದ ಸದಾನಂದ ಗೌಡರನ್ನು ಹೇಗೆ ತನ್ನ ರಾಜಕೀಯ ಚಾಣಾಕ್ಷತೆಯನ್ನು ಪ್ರದರ್ಶಿಸಿ ಯಡಿಯೂರಪ್ಪ ಪದಚ್ಯುತಿಗೊಳಿಸಿದ್ದರೋ ಅದೇ ರೀತಿ ಮತ್ತೊಮ್ಮೆ ತಾನೇ ಮುಖ್ಯಮಂತ್ರಿ ಮಾಡಿದ್ದ ಶೆಟ್ಟರನ್ನೂ ಪದಚ್ಯುತಿಗೊಳಿಸುತ್ತಾರೋ ಎಂಬ ಆತಂಕ ಬಿಜೆಪಿ ಶಾಸಕರಲ್ಲಿದೆ.

ಆದರೆ, ಮೊನ್ನೆ ಮೊನ್ನೆತನಕ 'ಮೌನಿಬಾಬಾ' ತರಹ ಇದ್ದ ಶೆಟ್ಟರ್ ಇದೀಗ ಮೊಟ್ಟಮೊದಲ ಬಾರಿಗೆ 'ಗಂಡು ಮೆಟ್ಟಿದ ನಾಡಿನ ಗಂಡಿನಂತೆ' ಯಡಿಯೂರಪ್ಪನ ವಿರುದ್ಧ ಅಬ್ಬರಿಸಿದ್ದಾರೆ. ಶೆಟ್ಟರ್ ಕೂಡ ಮಾಜಿ ಮುಖ್ಯಮಂತ್ರಿ ಸದಾನಂದ ಗೌಡರ ತರಹ ಇಷ್ಟು ಬೇಗನೆ 'ರೆಬೆಲ್ ಸ್ಟಾರ್' ಆಗಿ ಪರಿವರ್ತನೆಗೊಳ್ಳುತ್ತಾರೆಂದು ಸ್ವತಃ ಯಡಿಯೂರಪ್ಪ ಭಾವಿಸಿರಲಿಕ್ಕಿಲ್ಲ. "ನೀವು ನನ್ನನ್ನು ಮುಖ್ಯಮಂತ್ರಿ ಮಾಡಿದ್ದು ಅಲ್ಲ, ನನ್ನನ್ನು ಮುಖ್ಯಮಂತ್ರಿ ಮಾಡಿದ್ದು ಬಿಜೆಪಿ ಶಾಸಕರು. ನಿಮಗೆ ನನ್ನ ಮೇಲೆ ಅಷ್ಟೊಂದು ಪ್ರೀತಿ, ವಿಶ್ವಾಸವಿದ್ದಲ್ಲಿ ಮೊದಲ ಬಾರಿಗೆ ಬಿಜೆಪಿ ಅಧಿಕಾರಕ್ಕೆ ಬಂದಾಗ ನನ್ನನ್ನು ಯಾಕೆ ಸ್ಪೀಕರ್ ಹುದ್ದೆಗೆ ತಳ್ಳಿದಿರಿ. ಅಷ್ಟೇ ಅಲ್ಲ, ನೀವು ಮುಖ್ಯಮಂತ್ರಿ ಸ್ಥಾನದಿಂದ ಇಳಿಯುವಾಗ ನನ್ನನ್ನು ನಿರ್ಲಕ್ಷಿಸಿ, ಸದಾನಂದ ಗೌಡರನ್ನು ಯಾಕೆ ಮುಖ್ಯಮಂತ್ರಿ ಮಾಡಿದಿರಿ?" ಎಂದು ಶೆಟ್ಟರ್ ಪ್ರಶ್ನಿಸಿದ್ದಾರೆ. ಅಂದರೆ ಯಡಿಯೂರಪ್ಪ ಮತ್ತು ಶೆಟ್ಟರ್ ನಡುವೆ ನೇರಾನೇರ ಸಮರ ಆರಂಭವಾಗಿದೆ ಎಂದೇ ಇದರ ಅರ್ಥ.



ಹುಷಾರ್...ಕುರ್ಚಿ ಭದ್ರ...




ಕೆಜೆಪಿ ಸಮಾವೇಶ ಉದ್ಘಾಟನೆ....



ಕೋರ್ ಕಮಿಟಿ

ಶೆಟ್ಟರ್ ಈ ರೀತಿ ಬೋಲ್ಡ್ ಆಗಿ ಮಾತ ನಾಡಲು ಕೂಡ ಒಂದು ಬಲವಾದ ಕಾರಣ ವಿದೆ. ಅದೇನೆಂದರೆ ಮೊನ್ನೆ ದೆಹಲಿಯಲ್ಲಿ ನಡೆದ ಬಿಜೆಪಿಯ ಕೋರ್ ಕಮಿಟಿ ಸಭೆಯಲ್ಲಿ ಮುಂದಿನ ಚುನಾವಣೆಯಲ್ಲಿ ಪಕ್ಷದ ನಾಯಕತ್ವವನ್ನು ನೀವೇ ವಹಿಸಿಕೊಳ್ಳಬೇಕು ಎಂದು ದೆಹಲಿ ನಾಯಕರು ಶೆಟ್ಟರ್‌ಗೆ ಸೂಚಿಸಿದ್ದಾರಂತೆ. ಇದು ಅಧಿಕೃತವಾಗಿ ಕೆಲವೇ ದಿನಗಳಲ್ಲಿ ಪ್ರಕಟಣೆಗೊಳ್ಳಲಿದೆ. ದೆಹಲಿ ನಾಯಕರ ಈ ಮಾತಿಗೆ ರಾಜ್ಯದಲ್ಲಿನ ಇತರ ಎಲ್ಲಾ ನಾಯಕರೂ ಒಪ್ಪಿಗೆ ಸೂಚಿಸಿದ್ದಾರಂತೆ. ಶೆಟ್ಟರನ್ನು ಮುಂದಿನ ಚುನಾವಣೆಯ ನಾಯಕನನ್ನಾಗಿ ಮಾಡುವ ಹಿಂದೆ ಯಡಿಯೂರಪ್ಪನ ಬಲವನ್ನು ದುರ್ಬಲ ಗೊಳಿಸುವ ತರ್ಕವಿದೆ. ಅಂದರೆ, ಶೆಟ್ಟರ್ ನೇತೃತ್ವದಲ್ಲಿ ಬಿಜೆಪಿ ಚುನಾವಣೆಗೆ ಹೋದರೆ ಉತ್ತರ ಕರ್ನಾಟಕದಲ್ಲಿ ಲಿಂಗಾಯತರು ಬಿಜೆಪಿ ಪರ ಒಲವು ತೋರಿಸುವ ಸಾಧ್ಯತೆಯಿದೆ ಎಂಬುದು ದೆಹಲಿ ನಾಯಕರ ಲೆಕ್ಕಾಚಾರ. ಅಷ್ಟೇ ಅಲ್ಲ, ಉತ್ತರ ಕರ್ನಾಟಕದ ಲಿಂಗಾಯತರ ಬೆಂಬಲವನ್ನೇ ನಂಬಿಕೊಂಡಿರುವ ಯಡ್ಡಿಯ ಮತಗಳನ್ನೇ ವಿಭಾಗಿಸಿದಂತಾಗುತ್ತದೆ. ಈ ಕಾರಣಗಳಿಗೆ ಈಗ ಶೆಟ್ಟರ್‌ಗೆ ಎಲ್ಲಿಲ್ಲದ ಹುರುಪು ಮತ್ತು ಉತ್ಸಾಹ ಬಂದಿದೆ.




ಪುಟ್ಟಸ್ವಾಮಿ

ಈ ಮಧ್ಯೆ ಕೆಜೆಪಿ ಸಮಾವೇಶಕ್ಕೆ ಹೋದ ಶಾಸಕರ ಮೇಲೆ ಶಿಸ್ತುಕ್ರಮ ಕೈಗೊಳ್ಳಬೇಕೇ, ಬೇಡವೇ ಎಂಬುದರ ಬಗ್ಗೆ ಬಿಜೆಪಿಯಲ್ಲಿ ರಾಜಕೀಯ ಲೆಕ್ಕಾಚಾರಗಳು ನಡೆಯುತ್ತಿವೆ. ಒಂದು ವೇಳೆ ಹದಿನಾಲ್ಕು ಶಾಸಕರನ್ನು ಪಕ್ಷಾಂತರ ವಿರೋಧಿ ಕಾಯ್ದೆಯನ್ವಯ ಪಕ್ಷದಿಂದ ತೆಗೆದುಹಾಕಿದರೆ ಯಡಿಯೂರಪ್ಪನವರನ್ನು ಮಟ್ಟಹಾಕಿದಂತಾಗುತ್ತದೆ ಎಂಬ ಚಿಂತನೆ ನಡೆಯುತ್ತಿದೆ.

ಇದಕ್ಕೆ ತದ್ವಿರುದ್ಧವಾಗಿ ಯಡಿಯೂರಪ್ಪನವರೂ ಒಂದು ತಂತ್ರಗಾರಿಕೆಯಲ್ಲಿ ತೊಡಗಿದ್ದಾರೆ. ಅದೇನೆಂದರೆ ತಮ್ಮ ಬೆಂಬಲಿಗ ಶಾಸಕರಿಗೆ ಈ ಅಧಿವೇಶನ ಮುಗಿದ ನಂತರ ರಾಜಿನಾಮೆ ನೀಡಿ ಎಂದು ಸೂಚಿಸಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಒಂದು ವೇಳೆ ಈ ಹದಿನಾಲ್ಕು ಶಾಸಕರು ಪಕ್ಷದಿಂದ ಉಚ್ಚಾಟನೆಗೊಳ್ಳುವ ಮೊದಲೇ ಸ್ವತಂತ್ರವಾಗಿ ರಾಜೀನಾಮೆ ನೀಡಿ ನಮಗೆ ಶೆಟ್ಟರ್ ಸರ್ಕಾರದ ಮೇಲೆ ವಿಶ್ವಾಸವಿಲ್ಲ ಎಂದು ರಾಜ್ಯಪಾಲರಿಗೆ ಹೇಳಿದರೆ ಆಗ ರಾಜ್ಯಪಾಲರು 'ಅಧಿವೇಶನದಲ್ಲಿ ವಿಶ್ವಾಸಮತ ಕೇಳಿ' ಎಂದು ಶೆಟ್ಟರ್‌ಗೆ ಹೇಳಬಹುದು. ಆಗ ಕಾಂಗ್ರೆಸ್ ನಾಯಕರು ಅವಿಶ್ವಾಸ ಮತ ಮಂಡಿಸಿದರೆ ಏನೇನಾಗಬಹುದು ಎಂಬಿತ್ಯಾದಿ ವಿಷಯಗಳ ಬಗ್ಗೆ ಈಗ ತೆರೆಮರೆಯಲ್ಲಿ ಲೆಕ್ಕಾಚಾರಗಳು ನಡೆಯುತ್ತಿವೆ.

ಆದರೆ ಸದ್ಯದ ಪರಿಸ್ಥಿತಿಯಲ್ಲಿ ಶೆಟ್ಟರ್ ನೇತೃತ್ವದ ಸರ್ಕಾರಕ್ಕೆ ಯಾವುದೇ ತೊಂದರೆಯಿಲ್ಲ ಎನಿಸುತ್ತಿದೆ. ಏಕೆಂದರೆ ಯಾವ ಕಾರಣಕ್ಕೂ ಈ ಸರ್ಕಾರವನ್ನು ಪತನಗೊಳಿಸುವ ದುಸ್ಸಾಹಸಕ್ಕೆ ಯಡಿಯೂರಪ್ಪ ಕೈಹಾಕುವ ಸಾಧ್ಯತೆಯಿಲ್ಲ. ಈ ಹಿಂದೆ ತಾನೇ ಮುಖ್ಯಮಂತ್ರಿ ಮಾಡಿದ್ದ ಸದಾನಂದ ಗೌಡರನ್ನು ಪದಚ್ಯುತಿಗೊಳಿಸಿ ತನ್ನ ಇಮೇಜ್‌ಗೆ ಧಕ್ಕೆ ತಂದುಕೊಂಡಿದ್ದ ಯಡಿಯೂರಪ್ಪ ಚುನಾವಣೆ ಸಮೀಪಿಸುತ್ತಿರುವ ಈ ಕಾಲದಲ್ಲಿ ಮತ್ತೊಮ್ಮೆ ಅಂತಹುದೇ ತಪ್ಪನ್ನು ಮಾಡುವ ಸಾಧ್ಯತೆಗಳು ತುಂಬಾ ಕಡಿಮೆ. ಅದರಲ್ಲೂ ಶೆಟ್ಟರನ್ನು ಪದಚ್ಯುತಗೊಳಿಸಿದರೆ ಲಿಂಗಾಯತ ಮುಖ್ಯಮಂತ್ರಿಯನ್ನು ಅಧಿಕಾರದ ಕುರ್ಚಿಯಿಂದ ಕೆಳಗಿಳಿಸಿದ ಅಪಖ್ಯಾತಿಗೆ ಒಳಗಾಗಿ, ಇದರಿಂದಾಗಿ ಲಿಂಗಾಯತ ಮತದಾರರೇ ತಮ್ಮ ವಿರುದ್ಧ ತಿರುಗಿಬೀಳಬಹುದೆಂಬ ಅಂಜಿಕೆಯೂ ಯಡಿಯೂರಪ್ಪನವರಿಗಿದೆ. ಈ ಕಾರಣಕ್ಕಾಗಿ ತಾಕತ್ತಿದ್ದರೆ ನಮ್ಮ ಶಾಸಕರನ್ನು ಉಚ್ಚಾಟಿಸಿ ಎಂದು ಯಡಿಯೂರಪ್ಪ ಸರ್ಕಾರಕ್ಕೆ ಸವಾಲು ಹಾಕುತ್ತಾರೆಯೇ ವಿನಃ ಯಾವುದೇ ಕಾರಣಕ್ಕೂ ಸರ್ಕಾರ ಬೀಳಿಸುವ ಕೃತ್ಯಕ್ಕೆ ಕೈ ಹಾಕಲಾರರು. ಅದೇ ಮಾದರಿಯಲ್ಲಿ ಬಿಜೆಪಿ ಶಾಸಕರನ್ನು ಉಚ್ಚಾಟಿಸುವ ಬದಲು ಅವರಿಗೆ ನೋಟಿಸ್ ನೀಡಿ ಅವರಿಂದ ಉತ್ತರ ಬರುವತನಕ ಕಾದು ಕುಳಿತು ನೋಡುವ ತಂತ್ರಗಾರಿಕೆಗೆ ಬಿಜೆಪಿ ನಾಯಕರು ಅಂಟಿಕೊಂಡಿದ್ದಾರೆ. ಅಂದರೆ, ಉಚ್ಚಾಟಿಸುವ ಧೈರ್ಯ ರಾಜ್ಯಾಧ್ಯಕ್ಷ ಈಶ್ವರಪ್ಪನವರಿಗಿಲ್ಲ, ಹಾಗೆಯೇ ತನ್ನ ಹಿಂಬಾಲಕರಿಗೆ ರಾಜೀನಾಮೆ ನೀಡಲು ಹೇಳಿ ಸರ್ಕಾರವನ್ನು ಪದಚ್ಯುತಗೊಳಿಸುವ ಧೈರ್ಯ ಯಡಿಯೂರಪ್ಪನವರಿಗೂ ಇಲ್ಲ. ಹೀಗಾಗಿ ಸದ್ಯಕ್ಕೆ ಜಗದೀಶ್ ಶೆಟ್ಟರ್ ನೇತೃತ್ವದ ಸರ್ಕಾರಕ್ಕೆ ಯಾವುದೇ ಅಪಾಯವಿಲ್ಲ.



ಬಸವರಾಜ್

ಬಿಜೆಪಿ ಮೂಲಗಳ ಪ್ರಕಾರ ಇನ್ನೆರಡು ವಾರದೊಳಗೆ ಮಂಗಳೂರಿನ ಲೋಕಸಭಾ ಸದಸ್ಯರಾದ ನಳೀನ್‌ಕುಮಾರ್ ಕಟೀಲ್ ಅವರನ್ನು ಪಕ್ಷದ ರಾಜ್ಯಾಧ್ಯಕ್ಷ ಸ್ಥಾನದಲ್ಲಿ ಕೂರಿಸಲಾಗುತ್ತದೆ. ಸದಾನಂದ ಗೌಡರನ್ನು ಅಧ್ಯಕ್ಷರನ್ನಾಗಿ ಮಾಡುವ ಬಗ್ಗೆ ಉಪಮುಖ್ಯಮಂತ್ರಿ ಆರ್.ಅಶೋಕ್ ಸಮೇತ ಅನೇಕ ಒಕ್ಕಲಿಗ ನಾಯಕರ ವಿರೋಧವಿರುವುದರಿಂದ ದಕ್ಷಿಣ ಕನ್ನಡದವರೇ ಆದ, ಅದರಲ್ಲೂ ಆರೆಸ್ಸೆಸ್‌ನಿಂದ ಬಂದಿರುವ ಕಟೀಲ್ ವಾಸಿ ಎಂಬ ತೀರ್ಮಾನಕ್ಕೆ ಬಿಜೆಪಿ ಮತ್ತು ಆರೆಸ್ಸೆಸ್ ಬಂದಿವೆ.



'ಅಪ್ಪ'ರೊಂದಿಗೆ ಸಮಾಲೋಚನೆ....

ಈ ಮಧ್ಯೆ ಬಿಜೆಪಿಯ ನೇತಾರರು ಗುಜರಾತ್ ಫಲಿತಾಂಶಕ್ಕೆ ಅತ್ಯಂತ ಕಾತರದಿಂದ ಕಾದುಕುಳಿತಿದ್ದಾರೆ. ಗುಜರಾತ್‌ನ ಹಾಲಿ ಮುಖ್ಯಮಂತ್ರಿ ನರೇಂದ್ರ ಮೋದಿ ಗೆದ್ದರೆ ದೆಹಲಿ ಬಿಜೆಪಿಯಲ್ಲೂ ಸಾಕಷ್ಟು ಬದಲಾವಣೆಗಳಾಗುವುದು ಖಂಡಿತ. ದೆಹಲಿ ಬಿಜೆಪಿಯಲ್ಲಿ ಒಂದು ವರ್ಗ ಮೋದಿಯನ್ನು ಪಕ್ಷದ ಅಧ್ಯಕ್ಷರನ್ನಾಗಿ ಮಾಡಲು ತೆರೆಮರೆಯಲ್ಲಿ ಭಾರೀ ಕೆಲಸ ಮಾಡುತ್ತಿದೆ. ಒಂದು ವೇಳೆ ನರೇಂದ್ರ ಮೋದಿ ಬಿಜೆಪಿಯ ರಾಷ್ಟ್ರಾಧ್ಯಕ್ಷರಾದರೆ ಕರ್ನಾಟಕದ ಬಿಜೆಪಿ ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು ಮರುಕಳಿಸಬಹುದು ಎಂಬ ಆಶೆ ಹಲವು ಚಡ್ಡಿಗಳದ್ದು.

ಯಡಿಯೂರಪ್ಪ ಆಗಾಗ್ಗೆ ಸರ್ಕಾರದ ವಿರುದ್ಧ ಹೇಳಿಕೆಗಳನ್ನು ನೀಡುವುದನ್ನು ಅತ್ಯಂತ ಗಂಭೀರವಾಗಿ ಸ್ಟಡಿ ಮಾಡಲು ಬಿಜೆಪಿ ಮತ್ತು ಆರೆಸ್ಸೆಸ್ ಒಂದು ಸಣ್ಣ ಸಮಿತಿಯನ್ನು ರಚಿಸಿದೆ. ಯಡಿಯೂರಪ್ಪ ಸರ್ಕಾರದ ವಿರುದ್ಧ ಅಬ್ಬರಿಸಿದಾಗಲೆಲ್ಲ ಅವರ ರೆಕ್ಕೆಪುಕ್ಕವನ್ನು ಕತ್ತರಿಸಬೇಕೆಂದು ಬಿಜೆಪಿ ನಿರ್ಧರಿಸಿದೆ. ಆ ಪ್ರಕಾರವೇ ಮೊದಲ ಬಾರಿಗೆ ಯಡಿಯೂರಪ್ಪನ ಹಿಂಬಾಲಕರಾದ ದೆಹಲಿ ಪ್ರತಿನಿಧಿ ಧನಂಜಯ್‌ಕುಮಾರ್ ಮತ್ತು ಪಕ್ಷದ ವಕ್ತಾರ ಆಯನೂರ್ ಮಂಜುನಾಥರನ್ನು ತಮ್ಮ ಹುದ್ದೆಗಳಿಂದ ರಾಜ್ಯಾಧ್ಯಕ್ಷ ಈಶ್ವರಪ್ಪ ಉಚ್ಚಾಟಿಸಿದ್ದರು. ಅದಾದ ನಂತರ ಮೊನ್ನೆ ಹಾವೇರಿ ಸಮಾವೇಶದ ಮುನ್ನಾದಿನ ಯಡಿಯೂರಪ್ಪನ ಬಲಗೈ ಬಂಟರೆಂದೇ ಕು-ಖ್ಯಾತಿ ಗಳಿಸಿರುವ ಸಚಿವ ಪುಟ್ಟಸ್ವಾಮಿ ಮತ್ತು ತುಮಕೂರಿನ ಲೋಕಸಭಾ ಸದಸ್ಯ ಬಸವರಾಜ್ ಅವರನ್ನು ಪಕ್ಷದಿಂದ ಉಚ್ಚಾಟಿಸಿ, ಯಡಿಯೂರಪ್ಪನ ಬೆಂಬಲಿಗರಿಗೆ ಈಶ್ವರಪ್ಪ ಶಾಕ್ ನೀಡಿದ್ದರು. ವಾಸ್ತವವಾಗಿ ಅಂದು ಯಡಿಯೂರಪ್ಪನ ಆತ್ಮೀಯರಾದ ಸಚಿವೆ ಶೋಭಾ ಕರಂದ್ಲಾಜೆ ಅಥವಾ ಸಚಿವ ರೇಣುಕಾಚಾರ್ಯನನ್ನು ಸಂಪುಟದಿಂದ ಕೈಬಿಡಬೇಕೆಂದು ಚರ್ಚೆಯಾಗಿತ್ತಂತೆ. ಆದರೆ ಶೋಭಾ ಕರಂದ್ಲಾಜೆಯನ್ನು ಸಂಪುಟದಿಂದ ಕೈಬಿಟ್ಟು, ಪಕ್ಷದಿಂದ ಉಚ್ಚಾಟಿಸಿದರೆ ಸಂಪುಟದಲ್ಲಿರುವ ಏಕೈಕ ಮಹಿಳೆಗೆ ಅವಮಾನ ಮಾಡಿದಂತಾಗುತ್ತದೆ, ಇದರಿಂದಾಗಿ ಮಹಿಳಾ ಮತದಾರರು ಬಿಜೆಪಿಯ ವಿರುದ್ಧ ತಿರುಗಿ ಬೀಳಬಹುದೆಂಬ ಭಯದಿಂದ ಕೊನೆಕ್ಷಣದಲ್ಲಿ ವಿಧಾನ ಪರಿಷತ್ ಸದಸ್ಯರಾದ ಪಾಪದ ಪ್ರಾಣಿ ಪುಟ್ಟಸ್ವಾಮಿಯವರನ್ನು ಈಶ್ವರಪ್ಪನವರು ಬಲಿತೆಗೆದುಕೊಂಡರು.

ಈಗ ಯಡಿಯೂರಪ್ಪನ ಜೊತೆ ಗುರುತಿಸಿಕೊಂಡಿದ್ದ ಶಾಸಕರಲ್ಲಿ ನಾಲ್ವರು ಬಿಜೆಪಿಯಲ್ಲೇ ಉಳಿದುಕೊಳ್ಳುತ್ತೇವೆಂದು ಈಶ್ವರಪ್ಪನಿಗೆ ಹೇಳಿ "ದಯವಿಟ್ಟು ನಮ್ಮ ಮೇಲೆ ಪಕ್ಷ ವಿರೋಧಿ ಚಟುವಟಿಕೆ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಬೇಡಿ" ಎಂದು ಮನವಿ ಮಾಡಿದ್ದಾರಂತೆ. ಜೊತೆಗೆ ಮುಂದಿನ ಚುನಾವಣೆಯಲ್ಲಿ ತಮಗೇ ಟಿಕೆಟ್ ನೀಡಬೇಕೆಂಬ ಷರತ್ತನ್ನೂ ಈ ಶಾಸಕರು ಹಾಕಿದ್ದಾರಂತೆ. ಒಟ್ಟಾರೆಯಾಗಿ ಸಾಕಷ್ಟು ಸಂಖ್ಯೆಯ ಶಾಸಕರನ್ನು ಪಕ್ಷದಲ್ಲಿ ಉಳಿಸಿ ಕೊಳ್ಳಲು ಯಾವ್ಯಾವ ತಂತ್ರಗಾರಿಕೆಯನ್ನು ಮಾಡಬೇಕೋ ಅದನ್ನೆಲ್ಲ ಆರೆಸ್ಸೆಸ್ ಚಿಂತಕರು ತೆರೆಮರೆಯಲ್ಲಿ ಮಾಡುತ್ತಲೇ ಇದ್ದಾರೆ.

ಯಡಿಯೂರಪ್ಪನ ಬಣದಲ್ಲಿ ಸರಿಯಾದ ಐಡಿಯಾ ಮತ್ತು ಮಾರ್ಗದರ್ಶನ ನೀಡುವ ಹಿರಿಯ ರಾಜಕಾರಣಿಗಳು ಇಲ್ಲದ ಕಾರಣ ಅವರದ್ದು ಏನಿದ್ದರೂ ಏಕವ್ಯಕ್ತಿ ನಿರ್ಧಾರವಾಗಿದೆ. ಆದರೆ ಬಿಜೆಪಿಯ ಮತ್ತು ಆರೆಸ್ಸೆಸ್ಸಿನ ನಾಯಕರು ಜೊತೆಗೂಡಿ ತರ್ಕಗಳನ್ನು ಹಾಕುತ್ತಾ ಒಂದೊಂದೇ ಹೆಜ್ಜೆಯನ್ನು ಮುಂದಿಡುತ್ತಿದ್ದಾರೆ. ಯಡಿಯೂರಪ್ಪನನ್ನು ದುರ್ಬಲಗೊಳಿಸುವ ಮತ್ತೊಂದು ಅಸ್ತ್ರವಾಗಿ ಅವರ ಹಿಂಬಾಲಕರು ಅಲಂಕರಿಸಿರುವ ವಿವಿಧ ನಿಗಮ ಮಂಡಳಿಗಳಿಗೆ ಹೊಸಬರನ್ನು ಆಯ್ಕೆ ಮಾಡುವ ಕೆಲಸಕ್ಕೂ ಚಾಲ್ತಿ ದೊರೆತಿದೆ. ಹೀಗೆ ರಾಜ್ಯ ರಾಜಕೀಯದಲ್ಲಿ ಈಗ ಯಡಿಯೂರಪ್ಪ ಮತ್ತು ಜಗದೀಶ್ ಶೆಟ್ಟರ್ ನಡುವಿನ ಸಮರ ಒಂದು ಹೊಸ ಮಜಲನ್ನು ತಲುಪಿದೆ. ಸದ್ಯಕ್ಕೆ ಅತ್ಯಂತ ಸುರಕ್ಷಿತವಾಗಿರುವ ಜಗದೀಶ್ ಶೆಟ್ಟರ್ ಯಾವುದೇ ಆತಂಕವಿಲ್ಲದೆ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯುವುದು ಗ್ಯಾರಂಟಿ.

■ ಶೆಣೈ

ಸರಳ, ಸಜ್ಜನ ರಜನೀಕಾಂತ್


12/12/12ರಂದು ಜಗತ್ತಿನ ಬೇರೆ ಕಡೆ ಪ್ರಳಯ ಸಂಭವಿಸದಿದ್ದರೂ ತಮಿಳು ನಾಡಿನಲ್ಲಂತೂ ಒಂದು ಪುಟ್ಟ ಪ್ರಳಯವೇ ನಡೆದುಹೋಯಿತು. ಯಾಕೆಂದರೆ ಅದು ಸೂಪರ್ ಸ್ಟಾರ್ ರಜನೀಕಾಂತ್ ಅವರ 63ನೇ ಹುಟ್ಟುಹಬ್ಬದ ದಿನವಾಗಿತ್ತು! ಅವತ್ತು ಅವರ ಅಭಿಮಾನಿಗಳು ತಮಿಳುನಾಡಿನಲ್ಲಿ ಮಾತ್ರವಲ್ಲ, ಜಗತ್ತಿನ ವಿವಿಧ ನಗರಗಳಲ್ಲೂ ನೂರಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. 'ದಿ ಹಿಂದೂ' ತರಹದ ಗಂಭೀರ ದಿನಪತ್ರಿಕೆಯೂ ರಜನಿಕಾಂತ್ ಅವರನ್ನು ಕುರಿತು ಒಂದು ವಿಶೇಷ ಸಂಚಿಕೆಯನ್ನೇ ಹೊರತಂದಿತು. ಅದೇ ದಿನ ನಾಮನ್ ರಾಮಚಂದ್ರನ್ ಎಂಬ ಪತ್ರಕರ್ತರು ರಜನಿಕಾಂತ್, ಅವರ ಕುಟುಂಬ ಮತ್ತು ಸ್ನೇಹಿತರ ಸಹಯೋಗದೊಂದಿಗೆ ಬರೆದಿರುವ 'ರಜನೀಕಾಂತ್ - ದಿ ಡೆಫನೆಟಿವ್ ಬಯೋಗ್ರಾಫಿ' ಎಂಬ ಇಂಗ್ಲಿಷ್ ಪುಸ್ತಕದ ಬಿಡುಗಡೆ ಇತ್ತು. ಆ ಪುಸ್ತಕದಲ್ಲಿ ರಜನಿ ಅವರ ವ್ಯಕ್ತಿತ್ವವನ್ನು ಬಿಂಬಿಸುವ ಹಲವು ಆಯ್ದ ಭಾಗಗಳ ಅನುವಾದ ನಮ್ಮ ಓದುಗರಿಗಾಗಿ ಇಲ್ಲಿದೆ.



RAJINIKANTH
THE DEFINITIVE BIOGRAPHY

1975ರಲ್ಲಿ ಕಮಲ್ ಹಾಸನ್ ಅವರು ಎಷ್ಟು ದೊಡ್ಡ ಸ್ಟಾರ್ ಆಗಿದ್ದರು ಎಂಬುದು ಈಗಿನ ಪೀಳಿಗೆಗೆ ಗೊತ್ತಿಲ್ಲ. ಅವರು ಅಂದು ಈಗಿನಗಿಂತಲೂ ದೊಡ್ಡ ಸ್ಟಾರ್ ಆಗಿದ್ದರು. ಅವರಂತೆ ಇದೀ ಭಾರತದ ಸಿನಿಮಾ ಜಗತ್ತನ್ನು ಅಲುಗಾಡಿಸಿದವರೇ ಇಲ್ಲ. ನಾನು ಆಗತಾನೆ ಸಿನಿಮಾ ಜಗತ್ತನ್ನು ಪ್ರವೇಶಿಸಿದ್ದೆ. ನನ್ನ ಗುರು ಕೆ. ಬಾಲಚಂದರ್ ಅವರು ನಿರ್ದೇಶಿಸಿದ್ದ 'ಅಪೂರ್ವ ರಾಗಂಗಳ್', 'ಮೂನ್ರು ಮುಡಿಚ್ಚು' ಮತ್ತು 'ಅವರ್ಗಲ್' ಎಂಬ ಸಿನಿಮಾಗಳಲ್ಲಿ ನಟಿಸುವ ಮೂಲಕ ಹೀರೋ ಆಗಿದ್ದೆ.

ಆನಂತರದ ದಿನಗಳಲ್ಲಿ '16 ವಯದಿನಿಲೆ', 'ಇಳಮೈ ಊಂಜಲ್ ಆಡುಕಿರಥು', 'ಆಡು ಪುಲಿ ಆಟ್ಟ', 'ಅವಳ್ ಅಪಾದಿಥಾನ್' ತರಹದ ದೊಡ್ಡ ಸಿನಿಮಾಗಳು ಬಂದವು. ಅವೆಲ್ಲ ಹಿಟ್ ಸಿನಿಮಾಗಳೇ. ಆ ಸಿನಿಮಾಗಳಲ್ಲಿ ನಾನು ಮತ್ತು ಕಮಲ್ ಹಾಸನ್ ನಟಿಸಿದ್ದೆವು. ಅಕಸ್ಮಾತ್ ಆಗ ಕಮಲ್ ಹಾಸನ್ ಅವರು "ಈ ಚಿತ್ರಗಳಿಗೆ ರಜನಿಯನ್ನು ತೆಗೆದುಕೊಳ್ಳಬೇಡಿ" ಎಂದು ಹೇಳಿದ್ದರೆ ಯಾರೂ ಅವರ ಮಾತನ್ನು ಮೀರುತ್ತಿರಲಿಲ್ಲ. ಆದರೆ ಕಮಲ್ ಅವರು ಎಂದೂ ಹಾಗೆ ಹೇಳಲಿಲ್ಲ. ಮಾತ್ರವಲ್ಲ ನನಗೆ 'ಇಳಮೈ ಊಂಜಲ್ ಆಡುಕಿರಥು' ಸಿನಿಮಾದಲ್ಲಿ ಪಾತ್ರ ಸಿಕ್ಕಿದ್ದೇ ಕಮಲ್ ಹಾಸನ್ ಅವರ ಶಿಫಾರಸಿನ ಮೇರೆಗೆ. ನಾನು ಹೀಗೆ ಹಲವಾರು ಸಿನಿಮಾಗಳಲ್ಲಿ ಅವರೊಂದಿಗೆ ನಟಿಸುತ್ತಾ ಬೆಳೆದೆ. ಒಂದು ದಿನ ನನ್ನನ್ನು ಕರೆದ ಕಮಲ್ ಹಾಸನ್



ಕಮಲಹಾಸನ್ ಮತ್ತು ರಜನಿ ಗುರು ಬಾಲಚಂದರ್ ಜೊತೆ...

ಅವರು "ರಜನಿ, ನೀನು ಸ್ವತಂತ್ರವಾಗಿ ಇತರೆ ಸಿನಿಮಾಗಳಲ್ಲಿ ನಟಿಸದಿದ್ದರೆ ನೀನು ಎಂದೂ ನಿನ್ನದೇ ಆತ ಪ್ರತ್ಯೇಕ ಸ್ಥಾನವನ್ನು ಪಡೆಯುವುದಿಲ್ಲ. ನೀನು ಹೀಗೇ ಮುಂದುವರೆದರೆ ಈ ಸಿನಿಮಾ ಜಗತ್ತು ನಮ್ಮಿಬ್ಬರನ್ನು ಬಳಸಿಕೊಳ್ಳುತ್ತದೆ ಮತ್ತು ನೀನು ಬೆಳೆಯುವುದೇ ಇಲ್ಲ" ಎಂದು ಹೇಳಿದರು. ಅವರು ಹೇಳಿದ್ದನ್ನೆಲ್ಲ ಕೇಳಿಸಿಕೊಂಡ ನಾನು ಪ್ರತ್ಯೇಕವಾಗಿ ಸಿನಿಮಾಗಳಲ್ಲಿ ನಟಿಸಲಾರಂಭಿಸಿದೆ. ಇನ್ನಷ್ಟು ಎತ್ತರಕ್ಕೆ ಬೆಳೆದ. ಆಗ ಮತ್ತೊಮ್ಮೆ ನನ್ನನ್ನು ಕರೆಸಿಕೊಂಡ ಕಮಲ್ ಹಾಸನ್ ಅವರು "ತಮಿಳು ಚಿತ್ರರಂಗದ ಬಗ್ಗೆ ನೀನು ಎಚ್ಚರಿಕೆಯಿಂದ ಇರಬೇಕು. ನಾನು ಚಿಕ್ಕವನಾಗಿದ್ದಾಗಿನಿಂದಲೂ ಇಲ್ಲಿ ಎಲ್ಲವನ್ನು ಗಮನಿಸಿದ್ದೇನೆ. ಎಂಜಿಆರ್ ಮತ್ತು ಶಿವಾಜಿ ಗಣೇಶನ್ ಅವರ ನಡುವೆ ವೈರತ್ವ ಇರಲೇ ಇಲ್ಲ. ಆದರೂ ಚಿತ್ರೋದ್ಯಮದವರು ಅವರ ನಡುವೆ ಕಂದಕವನ್ನು ತಂದಿಟ್ಟರು. ಅವರಿಬ್ಬರೂ ಬೇರೆಬೇರೆ ಆಗಿದ್ದರಿಂದ ಅವರ ಅಭಿಮಾನಿಗಳೂ ಬೇರೆ ಬೇರೆಯಾದರು. ನಮ್ಮಿಬ್ಬರ ನಡುವೆ ಎಂದೂ ಹಾಗೆ ಆಗಕೂಡದು. ನಾನು ಯಾವ ನಿರ್ಮಾಪಕರು ಮತ್ತು ನಿರ್ದೇಶಕರ ಜೊತೆ ಕೆಲಸ ಮಾಡುತ್ತೇನೋ ಅವರೆಲ್ಲರ ಜೊತೆ ನೀನೂ ಕೆಲಸ ಮಾಡಬೇಕು" ಎಂದರು. ಅವರಿಗೆ ಹೇಗೆ ಧನ್ಯವಾದಗಳನ್ನು ಹೇಳಬೇಕು ಎಂದು ನನಗೆ ತೋಚಲೇ ಇಲ್ಲ.

ಇತರೆ ಭಾಷೆಯ ಸಿನಿಮಾ ಜಗತ್ತಿನ ದಿಗ್ಗಜರಾದ ಮಮ್ಮುಟಿ, ಮೋಹನ್ ಲಾಲ್, ವೆಂಕಟೇಶ್, ಚಿರಂಜೀವಿ, ಅಮಿತಾಭ್ ಬಚ್ಚನ್ ಮತ್ತು ದಿಲೀಪ್ ಕುಮಾರ್ ಸಹಿತ ತಮಿಳು ಸಿನಿಮಾ ಜಗತ್ತಿನಲ್ಲಿ ಕಮಲ್ ಹಾಸನ್ ತರಹದ ಪ್ರತಿಭೆ ಇರುವಾಗ ಅದು ಹೇಗೆ ನಾನು ನಟನಾಗಿ ಬೆಳೆದೆ ಎಂದು ಅಚ್ಚರಿ ಪಡುತ್ತಾರೆ. ಆದರೆ ಅದಕ್ಕೆ ಕಾರಣ ತುಂಬಾ ಸರಳ. ನಾನು ನಟನಾಗಿ ಬೆಳೆದದ್ದು ಕಮಲ್ ಹಾಸನ್ ಅವರ ನಟನೆಯನ್ನು ಗಮನಿಸುತ್ತಾ. ಅವರ ನಟನೆಯನ್ನು ಹತ್ತಿರದಿಂದ ನೋಡುವ ಅದೃಷ್ಟ ನನಗೆ ಸಿಕ್ಕಿತು.

ಒಮ್ಮೆ 'ಅವರ್ಗಲ್' ಎಂಬ ಸಿನಿಮಾದ ಶೂಟಿಂಗ್ ನಡೆಯುತ್ತಿದ್ದಾಗ ನಾನು ಹೊರಗೆ ಕೂತಿದ್ದನ್ನು ಗಮನಿಸಿದ ನಿರ್ದೇಶಕ ಬಾಲಚಂದರ್ ಅವರಿಗೆ ಕೋಪ ಬಂತು. ಅವರು ಕೂಡಲೆ ನನ್ನನ್ನು ಸೆಟ್‌ಗೆ ಕರೆಸಿಕೊಂಡರು. "ಏನು ಸಿಗರೇಟು ಸೇದಲು ಹೊರಗೆ ಹೋಗಿದ್ದೆಯಾ? ಕಮಲ್ ನಟಿಸುತ್ತಿದ್ದಾನೆ. ಅವನನ್ನು ಗಮನಿಸು. ಆಗಲೇ ನಿನ್ನ ನಟನೆಯೂ ಉತ್ತಮವಾಗುತ್ತೆ" ಎಂದರು. ಅವತ್ತಿನಿಂದ ಕಮಲ್ ನಟಿಸುತ್ತಿರುವಾಗ ನಾನು ಎಲ್ಲೂ ಹೋಗುವುದಿಲ್ಲ. ಸುಮ್ಮನೆ ಕೂತು ಅವರನ್ನು ಗಮನಿಸುತ್ತೇನೆ. ಇದು ಪ್ರಾಮಾಣಿಕ ಸತ್ಯ.


* * *

'ಶಿವಾಜಿ' ಚಿತ್ರವನ್ನು ನಿರ್ಮಿಸಿದ್ದ ಎವಿಎಮ್ ಸ್ಟುಡಿಯೋದ ಎಮ್. ಸರವಣನ್ ಅವರು ಹೇಳುವಂತೆ:

ಒಮ್ಮೆ ರಜನಿ ನನ್ನ ರೂಮಿಗೆ ಬಂದು "ಒಂದು ದೊಡ್ಡ ಸಿನಿಮಾ ಮಾಡೋಣ" ಎಂದರು. ಅದಕ್ಕೆ ನಾನು "ದೊಡ್ಡ ಸಿನಿಮಾ ಮಾಡಬೇಕೆಂದರೆ ನಾವು ನಿರ್ದೇಶಕ ಶಂಕರ್ ಅವರ ಬಳಿ ಹೋಗಬೇಕು" ಎಂದೆ. ನಾವಿಬ್ಬರೂ ಶಂಕರ್ ಅವರಲ್ಲಿಗೆ ಹೋದೆವು. ಆದರೆ ರಜನಿಗೆ ಶಂಕರ್ ಅವರನ್ನು ಮಾತನಾಡಿಸಲು ಹಿಂಜರಿಕೆ. ಹಾಗೆಯೇ ಶಂಕರ್ ಅವರಿಗೂ ರಜನಿ ತಮ್ಮ ಸಿನಿಮಾವನ್ನು ಒಪ್ಪುತ್ತಾರೋ ಇಲ್ಲವೋ ಎಂಬ ಅನುಮಾನ. ಯಾಕೆಂದರೆ ಹಿಂದೊಮ್ಮೆ ಶಂಕರ್ ಒಂದು ಕತೆಯನ್ನು ರಜನಿಗೆ ಹೇಳಿದ್ದರೂ ರಜನಿ ಅದಕ್ಕೆ ಕಾಲ್‌ಶೀಟ್ ನೀಡಿರಲಿಲ್ಲ. ಅದು 'ಶಿವಾಜಿ' ಚಿತ್ರದ್ದೇ ಕತೆ. ಆಗ ನನ್ನ ಮಗ ಅವರಿಬ್ಬರನ್ನೂ ಪ್ರತ್ಯೇಕವಾಗಿ ಮಾತನಾಡಿಸಿ ಒಪ್ಪಿಸಿದ. ಆ ಚಿತ್ರ ಎಷ್ಟು ದೊಡ್ಡದೆಂದರೆ ಅದಕ್ಕೆ ಬಡ್ಜೆಟ್ ಎಂಬುದು ನಿಗದಿಯಾಗಿರಲಿಲ್ಲ. ನಮ್ಮ ಬಳಿ ಅಷ್ಟು ಹಣವಿರಲಿಲ್ಲ. ಆಗ ನಾವು ಬ್ಯಾಂಕಿನಿಂದ ಸಾಲ ಪಡೆದು ಆ ಸಿನಿಮಾ ನಿರ್ಮಿಸಲು ನಿರ್ಧರಿಸಿದೆವು. ಅದು ನಾವು ತೆಗೆದುಕೊಂಡ ಬಹು ದೊಡ್ಡ ರಿಸ್ಕ್.

'ಶಿವಾಜಿ' ಚಿತ್ರಕ್ಕಾಗಿ ನಾವು ರಜನಿ ಅವರ ಸಂಭಾವನೆ ಕುರಿತು ಚರ್ಚಿಸಲಾರಂಭಿಸಿದಾಗ ರಜನಿ ಅವರು "ನೀವು ಬ್ಯಾಂಕಿನಿಂದ ಸಾಲ ಪಡೆದು ಇಂತಹ ಅದ್ದೂರಿ ಸಿನಿಮಾ ಮಾಡುತ್ತಿದ್ದೀರಿ. ಅದು ದೊಡ್ಡ ರಿಸ್ಕ್. ಆದ್ದರಿಂದ ನಾನು ಈಗಲೇ ನನ್ನ ಸಂಭಾವನೆಯನ್ನು ಪಡೆಯುವುದಿಲ್ಲ. ಚಿತ್ರ ಮುಗಿದು ಹಿಟ್ ಆದನಂತರ ನೀವು ನನಗೆ ಹಣ ನೀಡಿ" ಎಂದರಲ್ಲದೆ ಆ ಚಿತ್ರಕ್ಕೆ ಸಂಪೂರ್ಣವಾಗಿ ಸಹಕರಿಸಿದರು. ರಜನಿ ಹಾಗೆಯೇ. ಅವರು ಒಂದು ಚಿತ್ರವನ್ನು ಒಪ್ಪುವುದಕ್ಕೆ ಬಹಳ ಸಮಯ ತೆಗೆದುಕೊಳ್ಳುತ್ತಾರೆ, ಆದರೆ ಒಮ್ಮೆ ಒಪ್ಪಿದ ನಂತರ ಹೊಸದಾಗಿ ಸಿನಿಮಾ ರಂಗವನ್ನು ಪ್ರವೇಶಿಸಿರುವ ಹೊಸ ನಟನಿಗಿಂತ ಹೆಚ್ಚಾಗಿ ನಿರ್ಮಾಪಕರೊಂದಿಗೆ, ನಿರ್ದೇಶಕರೊಂದಿಗೆ ಸಹಕರಿಸುತ್ತಾರೆ.

ಒಮ್ಮೆ ಈ ಚಿತ್ರದ ಶೂಟಿಂಗಿಗೆಂದು ಪುಣೆಗೆ ಹೋಗಿದ್ದಾಗ ನಮ್ಮ ಸ್ಟುಡಿಯೋದವರು ನಿರ್ದೇಶಕ ಶಂಕರ್ ಅವರಿಗೆ ಬುಕ್ ಮಾಡಿದ್ದ ಕೊಠಡಿಗಿಂತ ದೊಡ್ಡ ರೂಮನ್ನು ರಜನಿ ಅವರಿಗೆ ಬುಕ್ ಮಾಡಿದ್ದರು. ಆದರೆ ಸೂಪರ್ ಸ್ಟಾರ್ ರಜನಿ ತನಗೆ ಅಷ್ಟು ದೊಡ್ಡ ರೂಮಿನ ಅಗತ್ಯವಿಲ್ಲವೆಂದು ನಿರಾಕರಿಸಿದರು. ಅಷ್ಟೇ ಅಲ್ಲ, "ನನಗೊಂದು ಸಿಂಗಲ್ ರೂಮ್ ಸಾಕು. ಆ ರೂಮಿನಲ್ಲಿ ನನಗೆ ನಿದ್ದೆ ಮಾಡಲು, ಯೋಗ ಮತ್ತು ಧ್ಯಾನ ಮಾಡಲು, ಒಂದಿಷ್ಟು ಊಟ ಮಾಡಲು ಜಾಗವಿದ್ದರೆ ಸಾಕು" ಎಂದರು. ಅವರು ಎಲ್ಲಿಗೆ ಹೋದರೂ ಅಷ್ಟೇ. ದೊಡ್ಡದಾದ ಅಥವಾ ಐಶಾರಾಮಿಯಾದ ರೂಮು ತನಗೆ ಬೇಡ ಎನ್ನುತ್ತಾರೆ.



ಶಿವಾಜಿ ಚಿತ್ರದಲ್ಲಿ ರಜನಿ

ರಜನಿ ಅವರದ್ದು ಹಲವು ಕಂಡೀಷನ್‌ಗಳಿವೆ. ಉದಾಹರಣೆಗೆ ಅವರ ರೂಮಿನ ಬಾಗಿಲ ಮುಂದೆ ಹಾಟ್ ಕೇಸಿನಲ್ಲಿ ಅವರ ಊಟವನ್ನು ಇಟ್ಟಿರಬೇಕು. ಅವರು ತಮ್ಮ ಯೋಗ, ಧ್ಯಾನ, ಡ್ರಿಂಕ್ಸ್ ಎಲ್ಲವನ್ನೂ ಮುಗಿಸಿದ ಮೇಲೆ ಹಾಟ್ ಕೇಸನ್ನು ತಮ್ಮ ರೂಮಿಗೆ ತೆಗೆದುಕೊಂಡು ಹೋಗುತ್ತಾರೆ. ಊಟ ಮಾಡಿದ ನಂತರ ತಟ್ಟೆ, ಲೋಟ ಮತ್ತು ಹಾಟ್ ಕೇಸನ್ನೂ ಅವರೇ ಸ್ವತಃ ತೊಳೆದು ಹೊರಗಿಡುತ್ತಾರೆ. ಅವರೆಂದೂ ಊಟ ಮಾಡಿದ ನಂತರ ತಟ್ಟೆಯನ್ನು ತೊಳೆಯದೆ ಹೊರಗೆ ಇಡುವುದಿಲ್ಲ.

ಹಾಗೆಯೇ ಅವರು ಹೋಟೆಲ್ ರೂಮನ್ನು ಪ್ರವೇಶಿಸಿದ ನಂತರ ಯಾರನ್ನೂ ಒಳಗೆ ಬಿಟ್ಟುಕೊಳ್ಳುವುದಿಲ್ಲ. ಶೂಟಿಂಗ್ ಸಮಯಕ್ಕೆ ಸರಿಯಾಗಿ ಅವರು ರೆಡಿಯಾಗಿ ರೂಮಿನಿಂದ ಹೊರಕ್ಕೆ ಬರುತ್ತಾರೆ. ಕುಡಿಯುವಾಗ ಅಥವಾ ಊಟ ಮಾಡುವಾಗ ಅವರಿಗೆ ಸಂಗಾತಿಗಳ ಅವಶ್ಯಕತೆ ಇಲ್ಲವೇ ಇಲ್ಲ.

* * *



ಮೊದಲ ಬಾರಿ ಕ್ಯಾಮರಾ ಮುಂದೆ ನಿಂತಾಗ

ಒಂದು ಗುರುವಾರ ಶಿವಾಜಿ ರಾವ್ ಎಂಬಾತನಿಗೆ ಕ್ಯಾಮರಾದ ಮುಂದೆ ಪ್ರಥಮ ಬಾರಿಗೆ ನಟಿಸುವ ಅವಕಾಶ ಸಿಕ್ಕಿತು. ಆದರೆ ಅದಕ್ಕೂ ಮುನ್ನ ಆತನ ಹೆಸರಿನ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಿತ್ತು. ದಕ್ಷಿಣ ಭಾರತದ ಸಿನಿಮಾ ಲೋಕದಲ್ಲಿ ಓರ್ವ ಮಾತ್ರ 'ಶಿವಾಜಿ' ಆಗಿರಲು ಸಾಧ್ಯವಿತ್ತು. ಆ ಜಾಗೆಯನ್ನು ಅಷ್ಟು ಹೊತ್ತಿಗಾಗಲೇ ಹಿರಿಯ ನಟ ಶಿವಾಜಿ ಗಣೇಶನ್ ಅವರು ಆಕ್ರಮಿಸಿಕೊಂಡಿದ್ದರು. ತಮ್ಮ ಹೊಸ ನಟನಿಗೆ ಯಾವ ಹೆಸರು ಕೊಡಬೇಕೆಂದು ನಿರ್ದೇಶಕ ಬಾಲಚಂದರ್ ತುಂಬಾ ತಲೆ ಕೆಡಿಸಿಕೊಳ್ಳಲಿಲ್ಲ. ಅವರು ಅದಕ್ಕೂ ಮುನ್ನ 'ಮೇಜರ್ ಚಂದ್ರಕಾಂತ್' ಎಂಬ ಸಿನಿಮಾ ನಿರ್ದೇಶಿಸಿದ್ದರು. ಆ ಸಿನಿಮಾದಲ್ಲಿ ಎ.ವಿ.ಎಂ. ರಾಜನ್ ಎಂಬುವವರು ರಜನಿಕಾಂತ್ ಎಂಬ ಹೆಸರಿನ ಪಾತ್ರದಲ್ಲಿ ನಟಿಸಿದ್ದರು. ಆದ್ದರಿಂದ ಬಾಲಚಂದರ್ ಅವರು ಶಿವಾಜಿ ರಾವ್ ಎಂಬ ಹೊಸ ನಟನಿಗೆ ರಜನಿಕಾಂತ್ ಎಂದೇ ನಾಮಕರಣ ಮಾಡಿದರು. ರಜನಿಕಾಂತ್ ಎಂದರೆ 'ರಾತ್ರಿಯ ಬಣ್ಣ' ಎಂದರ್ಥ. ಶಿವಾಜಿ ರಾವ್‌ನ ಮೈಬಣ್ಣವನ್ನು ಗಮನದಲ್ಲಿಟ್ಟುಕೊಂಡೇ ಆತನಿಗೆ ರಜನಿಕಾಂತ್ ಎಂದು ಮರುನಾಮಕರಣ ಮಾಡಿದ್ದರು. ಹೀಗೆ ಶಿವಾಜಿ ಎಂಬ ವ್ಯಕ್ತಿ ರಜನಿಕಾಂತ್ ಆದ ದಿನ ಹೋಳಿಹಬ್ಬವನ್ನು ಆಚರಿಸಲಾಗುತ್ತಿತ್ತು. ಇವತ್ತಿಗೂ ಬಾಲಚಂದರ್ ಮತ್ತು ರಜನಿಕಾಂತ್ ಹೋಳಿ ಹಬ್ಬದ ದಿನವನ್ನು ತುಂಬಾ ಆತ್ಮೀಯವಾಗಿ ನೆನಪು ಮಾಡಿಕೊಳ್ಳುತ್ತಾರೆ.



■ ನಾಮತಿ

ಸೂಪರ್ ಹೀರೋನ ಸೂಪರ್ ಹಾರ್ಟ್

ಕಾರ್ತಿಕ್ ಎಂಬ ಯುವಕ ರಜನಿಕಾಂತ್ ಅವರ ಅಪ್ಪಟ ಅಭಿಮಾನಿಯಾಗಿದ್ದ. ಅಂತಹ ಅಭಿಮಾನಿಗೆ ಕ್ಯಾನ್ಸರ್ ಆಗಿದೆ ಎಂದು ಗೊತ್ತಾದಾಗ ಆತನನ್ನು ಆಸ್ಪತ್ರೆಯಲ್ಲಿ ಭೇಟಿಯಾಗಲು ರಜನಿ ಮುಂದಾದರು. ಆದರೆ ತಾವು ಆಸ್ಪತ್ರೆಗೆ ಬರಬೇಡಿ ನಾವೇ ನಿಮ್ಮಲ್ಲಿಗೆ ಬರುತ್ತೇವೆಂದು ಕಾರ್ತಿಕನ ತಂದೆತಾಯಂದಿರು ವಿನಂತಿಸಿಕೊಂಡರು. ಅದರಂತೆ ಕಾರ್ತಿಕ್ ತನ್ನ ಕುಟುಂಬದವರೊಂದಿಗೆ ರಜನಿ ಅವರ ಕಚೇರಿಗೆ ಬಂದಾಗ ಸ್ವತಃ ರಜನಿಯೇ ಕಾರಿನ ಬಾಗಿಲನ್ನು ತೆರೆದು ಕಾರ್ತಿಕ್‌ನನ್ನು ಬರಮಾಡಿಕೊಂಡಿದ್ದರು. ಆತನನ್ನು ಅಪ್ಪಿಕೊಂಡು ಆತ್ಮೀಯವಾಗಿ ಮಾತನಾಡಿಸಿದ್ದರು. ತಮ್ಮದೊಂದು ಫೋಟೋಗೆ ಸಹಿ ಹಾಕಿ ಕೊಟ್ಟರಲ್ಲದೆ ಬಾಕ್ಸ್ ಆಫೀಸಿನಲ್ಲಿ ಅಭೂತಪೂರ್ವ ಹಿಟ್ ಆಗಿದ್ದ ತಮ್ಮ 'ಶಿವಾಜಿ' ಚಿತ್ರದ ನೆನಪಿನಾರ್ಥ ಇಟ್ಟುಕೊಂಡಿದ್ದ ಪುಟ್ಟ ಪ್ರತಿಮೆಯನ್ನೂ ಕಾರ್ತಿಕನಿಗೆ ಉಡುಗೊರೆಯಾಗಿ ನೀಡಿದ್ದರು. ಇದೆಲ್ಲದರಿಂದ ಅಂದು ಕಾರ್ತಿಕ್ ಹಿರಿಹಿರಿ ಹಿಗ್ಗಿದ್ದ. ಸಂತೋಷದಿಂದ ಪುಲಕಿತನಾಗಿದ್ದ. ಕಾರ್ತಿಕನ ಕುಟುಂಬದವರು ಕಣ್ಣೀರು ಹಾಕುತ್ತಾ ರಜನಿ ಅವರಿಗೆ ಧನ್ಯವಾದಗಳನ್ನು ಹೇಳಿದ್ದರು.

ಇತ್ತೀಚೆಗೆ ಕಾರ್ತಿಕ್ ಕ್ಯಾನ್ಸರ್ ರೋಗಕ್ಕೆ ಬಲಿಯಾದ...

ರಜನಿಕಾಂತ್ ಅವರು ಓರ್ವ ಅದ್ಭುತ ನಟ ಮಾತ್ರವಲ್ಲ, ಅವರು ಅಪಾರ ಮಾನವೀಯ ಗುಣವನ್ನು ಹೊಂದಿರುವ ವ್ಯಕ್ತಿ ಕೂಡ ಹೌದು.

ರಜನಿಕಾಂತ್ ಅವರ ಕಪೋಲಕಲ್ಪಿತ 'ಸೂಪರ್ ಶಕ್ತಿ'ಯನ್ನು ಕುರಿತು ಸಾವಿರಾರು ಜೋಕ್‌ಗಳಿವೆ. ಅವುಗಳಲ್ಲಿ ಹಲವನ್ನಾದರೂ ನಾವು ಕೇಳಿ ಆನಂದಿಸಿದ್ದೇವೆ. ಹಾಗೆಯೇ ರಜನಿ ಅವರ 'ಸೂಪರ್ ಹಾರ್ಟ್' ಅನ್ನು ತೋರುವ ಇಂತಹ ನಿಜವಾದ ಕತೆಯನ್ನೂ ನಾವು ಇತರರೊಂದಿಗೆ ಹಂಚಿಕೊಳ್ಳಬೇಕಲ್ಲವೇ?



ಕೇರಳದಲ್ಲಿ ಯಡ್ಡಿ ಅಮಾವಾಸ್ಯೆ ವಾಮಾಚಾರ!



ಕೆಜೆಪಿ ಅಧ್ಯಕ್ಷ ಬಿ.ಎಸ್.ಯಡಿಯೂರಪ್ಪ ಅವರು ಕೇರಳದ ಕಣ್ಣೂರು ಸಮೀಪದ ತಳಿಪರಂಬ ಶ್ರೀ ರಾಜರಾಜೇಶ್ವರಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ವಿಧಾನ ಪರಿಷತ್ ಸದಸ್ಯ ಎಂ.ಡಿ.ಲಕ್ಷ್ಮೀನಾರಾಯಣ ಜತೆಗಿದ್ದರು.

ಇದನ್ನೇನು ತಿಕ್ಕಲುತನ ಎನ್ನಬೇಕಾ ಇಲ್ಲಾ ವಿಕೃತಿ ಎನ್ನಬಹುದು ಗೊತ್ತಿಲ್ಲ. ಮತ್ತೆ ಕರ್ನಾಟಕದ ಮುಖ್ಯಮಂತ್ರಿಯಾಗುವ ಆಸೆ ಇಟ್ಟುಕೊಂಡಿರುವ ಯಡಿಯೂರಪ್ಪ ತಮ್ಮ ಗುರಿ ಸಾಧಿಸಲು ಈಗ ವಾಮಾಚಾರದ ಮೊರೆ ಹೋಗಿದ್ದಾರೆ.

ಎಲ್ಲರಿಗೂ ಕಾಣುವಂತೆ ಡಿಸೆಂಬರ್ 11 ರ ಸಂಜೆ ಬೆಂಗಳೂರಿನಿಂದ ಮಂಗಳೂರಿಗೆ ಹೋದ ಯಡ್ಡಿ ಅಲ್ಲಿಂದ ಅದೇ ದಿನರಾತ್ರಿ ಕೇರಳದ ಕಣ್ಣೂರಿನ ಹತ್ತಿರದ ತಳಿಪರಂಬಗೆ ಹೋಗಿ ಸೇರಿಕೊಂಡಿದ್ದಾರೆ.

ಅಲ್ಲಿ ಸುಪ್ರಸಿದ್ಧ ರಾಜರಾಜೇಶ್ವರಿ ದೇವಿಯ ದೇವಸ್ಥಾನವಿದೆ....!

ಅದರ ಹತ್ತಿರವೇ ದುರ್ಗಿಯ ದೇವಳವೂ ಇದೆ.

ಇವುಗಳಲ್ಲಿ ಮೊದಲನೆಯದು ಶಾಂತ ದೇವತೆಯಾದರೆ ಇನ್ನೊಂದು ರೌದ್ರ ದೇವತೆ.

ಒಂದು ಯಶಸ್ಸಿಗೂ ಇನ್ನೊಂದು ನಾಶಕ್ಕೂ ಅಸೈನ್‌ಮೆಂಟ್ ನೀಡಲ್ಪಡುವ ದೇವಿಯರು.

ಇಷ್ಟು ಹೇಳಿದ ಮೇಲೆ ಯಡ್ಡಿ ಅಲ್ಯಾಕೆ ಹೋಗಿ ಬಂದರೆಂಬುದು ನಿಮಗೂ ಅರ್ಥವಾಗಿರಬಹುದು. ಶ್ರೀಮಾನ್ ಯಡ್ಡಿಯೂರಪ್ಪನವರು ಮುಂಬರುವ ಅಸೆಂಬ್ಲಿ ಚುನಾವಣೆಯಲ್ಲಿ ತಮ್ಮ ನೂತನ ಕರ್ನಾಟಕ ಜನತಾ ಪಾರ್ಟಿಯ ಯಶಸ್ಸಿಗೂ ಹಾಗೂ ಅದೇ ವೇಳೆ ತಮ್ಮ ರಾಜಕೀಯ ವಿರೋಧಿಗಳ ಸರ್ವನಾಶಕ್ಕೂ ಒಂದು ಸ್ಪೆಷಲ್ ಪೂಜೆ ಸಲ್ಲಿಸಿ ಬಂದಿದ್ದಾರೆ.

ಇದರಲ್ಲಿ ಒಂದು ಶಿಷ್ಟ ಪೂಜೆಯಾದರೆ ಇನ್ನೊಂದು ವಾಮಾಚಾರದ ಪೂಜೆ.

ಇದೇ ಡಿಸೆಂಬರ್ 13ರ ಅಮಾವಾಸ್ಯೆಯ ದಿನ ಯಡ್ಡಿ ಸೀಕ್ರೆಟ್ಟಾಗಿ ಈ ವಾಮಾಚಾರ ಮುಗಿಸಿ ಹುಳ್ಳಗೆ ನಗುತ್ತಾ ಮರಳಿ ಕರ್ನಾಟಕಕ್ಕೆ ಕಾಲಿಟ್ಟಿದ್ದಾರೆ.

ಇಂಡಿಯಾ ದೇಶದ ಬೇರೆಲ್ಲಾ ರಾಜ್ಯಗಳ ರಾಜಕಾರಣಿಗಳಿಗೆ ಹೋಲಿಸಿದರೆ ಕರ್ನಾಟಕದ ರಾಜಕಾರಣಿಗಳ ಮಟ್ಟ ಕೊಂಚ ಕೆಳಗೇ ಇದೆ. ಇದಕ್ಕೆ ಪ್ರಜಾಪ್ರಭುತ್ವದ ಮೌಲ್ಯಗಳು, ಆಚರಣೆಗಿಂತಾ ಯಂತ್ರ-ಮಂತ್ರ-ತಂತ್ರಗಳ ಬಗ್ಗೆ ಇವರಿಗಿರುವ ಕೆಟ್ಟ ನಂಬಿಕೆಗಳೇ ಕಾರಣ.

ಯಡ್ಡಿ ಕೂಡಾ ಇದಕ್ಕೆ ಹೊರತಾಗಿಲ್ಲ.

ಪ್ರತಿ ವರ್ಷ ಅಮಾವಾಸ್ಯೆ ಪೂಜೆ

ತಳಿಪರಂಬು ಅಥವಾ ಪೆರಿಚೆಲ್ಲೂರ್ ಎನ್ನುವ ಈ ಸ್ಥಳ ಕೇರಳದ 108 ಪ್ರಸಿದ್ಧ ಶಿವ ದೇವಾಲಯಗಳಲ್ಲಿ ಒಂದು. 2008 ರಲ್ಲಿ ಮೊದಲ ಬಾರಿಗೆ ಇಲ್ಲಿಗೆ ಯಡ್ಡಿ ಓಡಿಬಂದಾಗ 19 ಭಿನ್ನಮತೀಯರು ಸರ್ಕಾರಕ್ಕೆ ಬೆಂಬಲ ಹಿಂತೆಗೆದುಕೊಂಡು ಬಳ್ಳಾರಿ ರೆಡ್ಡಿಗಳ ಕೋಟೆಯೊಳಗೆ ಸೇರಿಕೊಂಡಿದ್ದರು. ಆಗ ಅವರನ್ನು ಬಿಡಿಸಿಕೊಂಡು ಬರಲೂ ಆಗದೆ, ರೆಡ್ಡಿ ಕೋಟೆಗೆ ಮುತ್ತಿಗೆ ಹಾಕಲೂ ಆಗದೆ ಅಸಹಾಯಕ ಸ್ಥಿತಿಯಲ್ಲಿದ್ದ ಯಡ್ಡಿ ಯಾವನೋ ಪುರೋಹಿತ ಹೇಳಿದನೆಂದು ತಳಿಪರಂಬುನ ರಾಜರಾಜೇಶ್ವರಿ ದೇವಸ್ಥಾನಕ್ಕೆ ಓಡಿಹೋಗಿದ್ದರು. ಆಗಲೇ 'ಗಣಪತಿ' ಎನ್ನುವ ಆನೆಮರಿಯೊಂದನ್ನು ಉಡುಗೊರೆಯಾಗಿ ನೀಡಿ ಅದೂ ವಿವಾದವಾಗಿತ್ತು. ಆನಂತರ ಏನೇನೊ ಗೋಲ್‌ಮಾಲ್ ಮಾಡಿ ವಿಶ್ವಾಸಮತ ಗಿಟ್ಟಿಸಿಕೊಂಡ ಯಡ್ಡಿ ಅಲ್ಲಿಂದಾಚೆಗೆ ಪ್ರತಿ ವರ್ಷದ ಕೊನೆಯ ಹೊತ್ತಿಗೆ ಅಥವಾ last but one ಅಮಾವಾಸ್ಯೆಯಂದು ಅಲ್ಲಿಗೆ ಹೋಗಿ ತರಹೇವಾರಿ ಪೂಜೆ ಹಾಗೂ ವಾಮಾಚಾರ ಮಾಡಿಸಿ ಬರುತ್ತಿದ್ದಾರೆ.

ಈ ಬಗ್ಗೆ ಇನ್ನು ಖಚಿತವಾಗಿ ಹೇಳಬೇಕೆಂದರೆ 26.12.2009, 6.10.2010, 7.10.2012 ರಲ್ಲಿ ಯಡ್ಡಿ ಇದೇ ಸ್ಥಳಕ್ಕೆ ಹೋಗಿ ಶತ್ರು ಸಂಹಾರ ಹೋಮ ಮಾಡಿಸಿದ್ದರು. 2011 ರ ವರ್ಷದಲ್ಲಿ ಮಾತ್ರ ಅಲ್ಲಿಗೆ ಹೋಗದೆ ಮಂಗಳೂರಿನ ಕಲ್ಲಡ್ಕದಲ್ಲೇ ಡಿಸೆಂಬರ್ 6 ರಂದು ರಾತ್ರಿ 'ವಾಜಪೇಯ ಯಾಗ' ಮಾಡಿಸಿದ್ದರು.

ಅದು ರಾಜರುಗಳು ಮಾಡಿಸುತ್ತಿದ್ದ ಪುರಾತನ ಯಾಗವಂತೆ.

ಪ್ರಶ್ನಾ ಹಾಗೂ ಬಲಿಪೂಜೆ

ಅತ್ತ ಬೆಳಗಾವಿಯಲ್ಲಿ ಶಾಸನಸಭೆಯ ಅಧಿವೇಶನ ನಡೆದಿರುವಾಗಲೇ, ಆಳುವ ಹಾಗೂ ವಿರೋಧ ಪಕ್ಷಗಳ ಮಧ್ಯೆ ಪ್ರಶ್ನೋತ್ತರಗಳು ಆಗುತ್ತಿರುವಾಗಲೇ ಇವರೆಲ್ಲರ ವಿರೋಧಿಯಾದ ಯಡ್ಡಿ ತಳಿಪರಂಬುವಿನಲ್ಲಿ ಶ್ರದ್ಧೆಯಿಂದ ಕೂತು 'ಪ್ರಶ್ನೆ' ಕೇಳುತ್ತಿದ್ದರು.

ಅಷ್ಟಮಂಗಲ ಪ್ರಶ್ನೆ ಎಂತಲೂ ಹೇಳಲ್ಪಡುವ ಈ 'ಪ್ರಶ್ನೆ' ಗೋಷ್ಠಿಯಲ್ಲಿ ಕವಡೆ ಹಾಕುತ್ತಾ ಮೂರು ಅಥವಾ ಐದರ ಸಂಖ್ಯೆ ಬೀಳುವವರೆಗೂ ತಂತ್ರಿ, ಬ್ರಾಹ್ಮಣ ಪುರೋಹಿತರು ಪೂಜಾ ಕಾರ್ಯ ನಡೆಸುತ್ತಲೇ ಇರುತ್ತಾರೆ. ಇದೊಂದು ತರದ ಕಳ್ಳಾಟವಿದ್ದಂತೆ.

ನ್ಯೂಮರಾಲಜಿಸ್ಟ್‌ಗಳು ಆಡುವ ಅಂಕಿಸಂಖ್ಯೆಯ ನಾಟಕದಂತೆಯೇ ಇರುತ್ತದೆ. ಅಲ್ಲಿ ವಾಸುದೇವ ನಂಬೂದರಿ ಎಂಬ ಪ್ರಚಂಡ ಪುರೋಹಿತನ ಲೀಡರ್‌ಶಿಪ್‌ನಲ್ಲಿ ಇದೆಲ್ಲಾ ನಡೆಯುತ್ತಿದೆ. ಇವನೊಂದಿಗೆ ಪಾಂಡುರಂಗ ನಂಬೂದರಿ, ಹಂಜಯಂದನ್ ನಂಬೂದರಿ, ಕುಬೇರನ್ ನಂಬೂದರಿಯೆಂಬ ದುಷ್ಟ ಚತುಷ್ಟಯದಂತಹ ಗುಂಪಿದೆ. ಇವರೆಲ್ಲರ ಇನಿಷಿಯಲ್ ಪಿ.ಪಿ. ಎಂದಿದೆ. ಜೊತೆಗೆ ಈ ಎಲ್ಲರು ತಮ್ಮನ್ನು ತಾವೇ ಬ್ರಹ್ಮರ್ಷಿ ಎಂತಲೂ ಕರೆದುಕೊಳ್ಳುತ್ತಾರೆ.

ಒಂದು ಶತ್ರುಸಂಹಾರ ಯಾಗಕ್ಕೆ ಕನಿಷ್ಠ 50 ಲಕ್ಷ ರೂಪಾಯಿ ಖರ್ಚು ಮಾಡಿಸುತ್ತಾರೆ. ಒಂದು ಕಡೆ ಪೂಜೆ ಮಾಡುತ್ತಲೇ ಮತ್ತೊಂದು ಮೂಲೆಯಲ್ಲಿ ಅಕ್ಕಿಹಿಟ್ಟಿನ ಬೊಂಬೆ ರೆಡಿ ಮಾಡಿ ಕಲ್ಪಿತ ಶತ್ರುವಿನಂತೆ ಬಿಂಬಿಸುತ್ತಾ ವಾಮಾಚಾರ ನಡೆಸುತ್ತಾರೆ. ಯಡ್ಡಿ ಈ ಹೋಮದಲ್ಲಿ ಕನಿಷ್ಠ ಐದು ಕ್ವಿಂಟಾಲ್ ಅಕ್ಕಿ, ಅನೇಕ ರೇಷ್ಮೆ ಸೀರೆ-ಪಂಚೆಗಳು, ಕೊಬ್ಬರಿ-ಗಂಧದ ತುಂಡುಗಳು, ಮಡಿಕೆಗಟ್ಟಲೆ ತುಪ್ಪವನ್ನು ಬೆಂಕಿಗೆ ಹಾಕಿ ಇನ್ನು 'ಶತ್ರು ಸಂಹಾರ' ಆಗಿಯೇ ಹೋದಂತೆ ಭಾವಿಸಿ ತೃಪ್ತಿಯಿಂದ ಹಿಂತಿರುಗಿದ್ದಾರೆ.

ಇದಲ್ಲದೆ 12.12.2012 ರ ದಿನಕ್ಕೆ ಅದೆಂತದ್ದೋ ವಿಶಿಷ್ಟ ಶಕ್ತಿ ಇದೆ ಎಂತಲೂ ನಂಬಿ ಮಡಂದಿಕಾವು ಎಂಬಲ್ಲಿಗೂ ಹೋಗಿ ನಟ್ಟ ನಡುರಾತ್ರಿ ಭದ್ರಕಾಳಿಗೆ ಇನ್ನೊಂದು ವಾಮಾಚಾರದ ಪೂಜೆಯನ್ನು ಮಾಡಿಬಂದಿದ್ದಾರೆ.

ಈ ಟ್ರಿಪ್‌ನಲ್ಲಿ ಯಡ್ಡಿಯ ಜೊತೆಗಿದ್ದದ್ದು ಥೇಟ್ ರಿಟೈರ್ಡ್ ಮಂತ್ರವಾದಿಯಂತೆ ಕಾಣುವ ಎಂ.ಡಿ. ಲಕ್ಷ್ಮೀನಾರಾಯಣ.

ಇದೊಂಥರಾ ಪುಕ್ಕಲು!

ಕರ್ನಾಟಕದಲ್ಲಿ ವಾಮಾಚಾರಿ ರಾಜಕಾರಣಿಗಳಿಗೇನೂ ಕೊರತೆ ಇಲ್ಲ. ಚಾಂಪಿಯನ್ ಸೀನಿಯರ್ ಮಾಂತ್ರಿಕ ದೇವೇಗೌಡರದೊಂದು ತೂಕವಾದರೆ ರೇವಣ್ಣ, ಕುಮಾರಸ್ವಾಮಿ, ಡಿ.ಕೆ. ಶಿವಕುಮಾರ್ ಕೂಡ ಈ ಶಾಲೆಯ ವಿದ್ಯಾರ್ಥಿಗಳೇನೆ. ಇವರೆಲ್ಲ ತನ್ನ ವಿರುದ್ಧ ಮಾಟ ಮಾಡಿಸುತ್ತಿದ್ದಾರೆಂದು ನಂಬಿ ಹೆದರಿ ಹೆದರಿಯೇ ಯಡ್ಡಿಯೂ ಈಗ ವಾಮಾಚಾರಿಯಾಗಿ ಹೋಗಿದ್ದಾರೆ.



2007 ರ ಮಾರ್ಚ್ 10 ರಿಂದ 26 ರವರೆಗೂ ತಮಿಳುನಾಡಿನ ತಿರುಚೆಂಡೂರಿನಲ್ಲಿ ಶ್ರೀಮಾನ್ ದೇವೇಗೌಡರು ನಡೆಸಿದ್ದ ಶತ್ರುಸಂಹಾರ ಹೋಮದ ಸುದ್ದಿಯು ಕರ್ನಾಟಕದ ರಾಜಕಾರಣಿಗಳ ನಡುವೆ ತಲ್ಲಣ ಎಬ್ಬಿಸಿತ್ತು. ಪಕ್ಕಾ ಗ್ಯಾಂಗ್‌ಸ್ಟರ್‌ಗಳಂತೆ ಕಾಣುವ ಅಲ್ಲಿನ ಪುರೋಹಿತರು ಅವತ್ತು ಗೌಡರಿಂದ 50 ಲಕ್ಷ ರೂಪಾಯಿತನಕ ಕಿತ್ತು ತಿಂದಿದ್ದರು. ತಿರುಚೆಂಡೂರಿನ ಶಕ್ತಿಶಾಲಿ ದೇವರಾದ ಮುರುಗನ್‌ನನ್ನು ದೇವೇಗೌಡರ ಕುಟುಂಬದ ಶತ್ರುಗಳ ವಿರುದ್ಧ ಆವತ್ತು ಛೂ ಬಿಡಲಾಗಿತ್ತು. ಆ ಹೋಮಕುಂಡದಲ್ಲಿ ಬೆಂಕಿಗಾಹುತಿ ನೀಡಿದ ರೇಷ್ಮೆ, ಗಂಧ, ತುಪ್ಪವೆಲ್ಲಾ ಸುಟ್ಟು ಬೂದಿಯಾದ ನಂತರ ಅದೇ ಬೂದಿಯನ್ನು ದೇವೇಗೌಡ, ಕುಮಾರ ಸ್ವಾಮಿ, ರೇವಣ್ಣ ಕೆಲದಿನ ತಮ್ಮ ಹಣೆಗಳಿಗೆ ಮೆತ್ತಿಕೊಂಡು ಓಡಾಡುತ್ತಿದ್ದರು.

ಇದನ್ನೆಲ್ಲ ಗಮನಿಸಿದ ಯಡ್ಡಿಗೆ ಅದೇನು ಭೀತಿಯಾಯಿತೊ ತಾನೂ ಒಂದು ಶತ್ರುಸಂಹಾರ ಹೋಮ

ಭೂಗಳ್ಳರ ಅತ್ಯಾಚಾರಕ್ಕೆ ತುತ್ತಾದ ಉದ್ಯಾನಿಯ ಆತ್ಮನಿವೇದನೆ

ನನಗೆ ನನ್ನದೇ ಆದ ಒಂದು ಹೆಸರಿಲ್ಲ! ಆದರೆ ಒಂದಷ್ಟು ಸಾಮಾಜಿಕ ಪ್ರಜ್ಞೆಯ ನಾಗರಿಕರು ನನ್ನನ್ನು 'ಉದ್ಯಾನಿ' ಎಂದು ಕರೆಯುತ್ತಾರಾದರೂ ಅದು ನನ್ನ ಸ್ವಂತ ಹೆಸರಲ್ಲ. ಬೆಂಗಳೂರಿನ ಜೆ.ಪಿ.ನಗರದ 4ನೇ ಹಂತದ ನಿವೇಶನ 9ರಲ್ಲಿ ಸುಮಾರು ಒಂದೂವರೆ ಎಕರೆಯಷ್ಟು ವಿಸ್ತಾರಕ್ಕೆ ಮೈಚಾಚಿ ಬಿದ್ದುಕೊಂಡಿರುವ ನನ್ನ ಎದೆ ಮೇಲೆ 'ಬಿಬಿಎಂಪಿ ಉದ್ಯಾನವನ' ಎಂಬ ನಿರ್ಲಕ್ಷ್ಯದ ನಾಮಫಲಕವೊಂದನ್ನು ಬಿಟ್ಟರೆ ಸೌಂದರ್ಯದ ಯಾವ ಕುರುಹೂ ಇಲ್ಲ. ಆದರೆ ದಿನಂಪ್ರತಿ ದಾಳಿಯಿಡುವ ಭೂಗಳ್ಳರ ಅತ್ಯಾಚಾರದ ಗುರುತುಗಳು ಮಾತ್ರ ದಂಡಿಯಾಗಿ ಕಾಣಸಿಗುತ್ತವೆ. ಒಂದಲ್ಲ, ಎರಡಲ್ಲ, ಸತತ ಮೂವತ್ತಾರು ವರ್ಷಗಳಿಂದಲೂ ನಿತ್ಯ ನಿರ್ಲಕ್ಷ್ಯ, ಸರಣಿ ಅತ್ಯಾಚಾರಕ್ಕೆ ತುತ್ತಾದ ಕಾರಣದಿಂದ ಹಸಿರು ನೆರಿಗೆಯನುಟ್ಟು ದಣಿದ ಮನಗಳಿಗೆ ವಿಶ್ರಾಂತ ತಾಣವಾಗಿ ಬದುಕಬೇಕೆಂದು ಹಂಬಲಿಸಿದ್ದ ನನ್ನ ಕನಸುಗಳೆಲ್ಲ ಇವತ್ತು ಬಣ್ಣಗೆಟ್ಟು ಮೂಲೆ ಹಿಡಿದಿವೆ. ಕೆಲ ಸ್ಪಂದನೆಯ ಮನಸ್ಸುಗಳು ನನ್ನ ರೋದನೆಯನ್ನು ನ್ಯಾಯಾಲಯದ ಮೆಟ್ಟಿಲಿನವರೆಗೂ ಒಯ್ದದ್ದುಂಟು. ಖುದ್ದು ನ್ಯಾಯಾಧೀಶರೇ ನನ್ನ ದುರ್ಗತಿಯನ್ನು ಕಂಡು ಮುಮ್ಮಲ ಮರುಗಿ, ಈ ಕೂಡಲೇ ನನ್ನ ಮೈಮೇಲಿನ ಅತ್ಯಾಚಾರದ ಕುರುಹುಗಳನ್ನು ಅಳಿಸಿ, ನನಗೆ ಹಸಿರು ಸೌಂದರ್ಯ ನೀಡುವಂತೆ ಬಿಬಿಎಂಪಿಗೆ ಆದೇಶವನ್ನೂ ನೀಡಿದ್ದರು. ಆದರೆ ಇವತ್ತಿಗೂ ಅದು ಆದೇಶವಾಗಿ ಉಳಿದಿದೆಯೇ ಹೊರತು, ಕಾರ್ಯರೂಪಕ್ಕೆ ತರುವ ಇಚ್ಛೆ ಯಾರಿಗೂ ಇದ್ದಂತೆ ಕಾಣುತ್ತಿಲ್ಲ.

ಅಷ್ಟಕ್ಕೂ ನನ್ನ ದುರಾದೃಷ್ಟದ ಬದುಕು ಆರಂಭವಾದದ್ದು 1976ರಲ್ಲಿ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಲಿಯಾಸ್ ಬಿ.ಡಿ.ಎ ಎನ್ನುವ ಸಂಸ್ಥೆ ಬೆಂಗಳೂರನ್ನು ವಿಸ್ತರಿಸುವ ನೆಪದಲ್ಲಿ ಜೆ.ಪಿ. ನಗರದ ಮೂರು ಮತ್ತು ನಾಲ್ಕನೇ ಹಂತದ ಬಡಾವಣೆಗಳನ್ನು ಸೃಷ್ಟಿಸುವಾಗ ನಾಗರಿಕರ ಹಿತದೃಷ್ಟಿಯ ಸಲುವಾಗಿ ನನಗೂ ಒಂದು ಸೀಲನ್ನೊತ್ತಿ ಬರೆದಿತ್ತು. ನಂತರ ಅಲ್ಲಿ ಸುಂದರ ಉದ್ಯಾನವೊಂದನ್ನು ರೂಪಿಸಿ ಸಾರ್ವಜನಿಕರ ಉಪಯೋಗಕ್ಕೆ ಮೀಸಲಿಟ್ಟುಬಿಡಿ ಎಂದು ನನ್ನ ಅಸ್ತಿತ್ವದ ಹಕ್ಕನ್ನೆಲ್ಲ ಸಂಪೂರ್ಣವಾಗಿ ಬೆಂಗಳೂರು ಮಹಾನಗರ ಪಾಲಿಕೆ ಅರ್ಥಾತ್ ಇವತ್ತಿನ ಬಿಬಿಎಂಪಿಗೆ ವಹಿಸಿತ್ತು. ಆದರೆ ಅವತ್ತಿನಿಂದ ಇವತ್ತಿನವರೆಗೆ ಬಿಬಿಎಂಪಿಗೆ ನನ್ನ


ಶಾಸಕ ವಿಜಯಕುಮಾರ್, ಬಿ.ಎಸ್. ಕೃಷ್ಣಕುಮಾರ್, ಚಂದ್ರಶೇಖರ್ ರಾಜು

ಮೇಲೆ ಕಿಂಚಿತ್ತೂ ಕಾಳಜಿ ಹುಟ್ಟಿಲ್ಲ. ಈ ವಿಚಾರದಲ್ಲಿ ನಾನು ಬಿಬಿಎಂಪಿಗೆ ಮಾಡಿರುವ ದ್ರೋಹವಾದರೂ ಏನು? ಎಂಬುದು ನನಗಿನ್ನೂ ಅರ್ಥವಾಗಿಲ್ಲ.

ಬಿಬಿಎಂಪಿಗೆ ಬೇಡವಾದರೇನಂತೆ ಬೇವರ್ಸಿಯಾಗಿ ಬಿದ್ದಿದ್ದ ನನ್ನ ಮೇಲೆ ಭೂಗಳ್ಳರ ಕಣ್ಣುಗಳು ನೆಟ್ಟಿದ್ದವು. ಕೋಟ್ಯಾಂತರ ರೂಪಾಯಿಗೆ ಮಾರಾಟವಾಗುವ ನನ್ನ ಮಾರ್ಕೆಟ್ ಬೆಲೆಯೇ ಇದಕ್ಕೆ ಕಾರಣ ಎನ್ನುವುದನ್ನು ನಿಮಗೆ ಮತ್ತೊಮ್ಮೆ ವಿವರಿಸುವ ಅಗತ್ಯವಿಲ್ಲ ಅಲ್ಲವೆ. ನನ್ನ ದುರಂತ ಎಂತಹದ್ದೆಂದರೆ ನನಗೆ ರಕ್ಷಣೆ ನೀಡಬೇಕಿದ್ದವರೇ ನನ್ನನ್ನು ಅತ್ಯಾಚಾರದ ಕೂಪಕ್ಕೆ ತಳ್ಳಲು ಹವಣಿಸಿದ್ದರು.

ಬಹುಶಃ ಅದು 1993-94ನೇ ಇಸವಿ ಇರಬಹುದು. ಆಗ ಬಿ.ಡಿ.ಎ ಚೇರ್ಮನ್ ಆಗಿದ್ದ ಮುದ್ದಪ್ಪ ಎಂಬ ಲಿಂಗಾಯತ ಆಸಾಮಿ ಮೈಸೂರಿನ ಅನ್ನದಾನೇಶ್ವರ ಮಠದ ಶಿವಸ್ವಾಮಿಯ ಸ್ವಜಾತಿ ಭಕ್ತೀಸಿಗೋಸ್ಕರ ಅವರಿಗೆ ದಕ್ಷಿಣೆಯನ್ನಾಗಿ ಸಾರ್ವಜನಿಕರ ಸ್ವತ್ತಾದ ನನ್ನನ್ನೇ ಪರಭಾರೆ ಮಾಡಿ ಪುಣ್ಯ ಸಂಪಾದಿಸಿಕೊಳ್ಳಲು ಮುಂದಾಗಿದ್ದ. ಆ ಸ್ವಾಮಿಯಾದರೂ ತಡಮಾಡದೆ ನನ್ನ ಅಂಗಳದಲ್ಲೊಂದು ಗುಡಿ ಕಟ್ಟಿ ಅತ್ಯಾಚಾರಕ್ಕೆ ಅಣಿಯಾಗಿದ್ದ. ಗುಡಿ ನಿರ್ಮಾಣದ ಹಿಂದೆ ಅತಿಕ್ರಮದ ದುರುದ್ದೇಶವಿದ್ದದ್ದು ನನಗೆ ಮಾತ್ರವಲ್ಲ, ನನ್ನ ಆಸುಪಾಸಿನಲ್ಲಿದ್ದ ಜನರಿಗೂ ಗೊತ್ತಾಗಿತ್ತು. ಆಗಿನ ಕಾಲ ಇವತ್ತಿನಷ್ಟು ಭಂಡಗೆಟ್ಟಿರಲಿಲ್ಲ. ನ್ಯಾಯಪರದ ಕೂಗುಗಳಿಗೆ ಅಲ್ಪಸ್ವಲ್ಪ ಬೆಲೆ ಇದ್ದ ಕಾಲ ಅದು. ಹಾಗಾಗಿ ಸ್ವಚ್ಛ ಮನಸ್ಸಿನ ನಾಗರಿಕರೆಲ್ಲ ಸೇರಿ ನನ್ನ ಪರವಾಗಿ ಹೋರಾಟಕ್ಕಿಳಿದಿದ್ದರು. ಇದರಿಂದ ಬೆದರಿದ ಆ ಸ್ವಾಮಿ ನನ್ನನ್ನು ತನ್ನ ವಶ ಮಾಡಿಕೊಳ್ಳುವ ಯೋಜನೆಯನ್ನು ಅಲ್ಲಿಗೇ ಕೈಬಿಟ್ಟು ಮೈಸೂರು ಸೇರಿಕೊಂಡಿದ್ದ.

ಸರ್ಕಾರಿ ಯಂತ್ರವನ್ನೇ ನಂಬಿ ಕೂತರೆ 'ಉದ್ಯಾನಿ'ಯನ್ನು ಕಳೆದುಕೊಳ್ಳಬೇಕಾಗುತ್ತದೆ ಎಂಬುದನ್ನರಿತ ಆ ನಾಗರಿಕರೆ ಸ್ವತಃ ಕಾಸು ಸೇರಿಸಿ ನನ್ನ ಸುತ್ತ ಸಣ್ಣ ಬೇಲಿ ನೆಟ್ಟು ಒಂದೆರಡು ಕಲ್ಲು ಬೆಂಚು ಹಾಕಿ ತಕ್ಕಮಟ್ಟಿಗೆ ನನಗೊಂದು ರೂಪ ಕೊಡಲು ಯತ್ನಿಸಿದ್ದರು. ಅಲ್ಲದೆ ಬಿಬಿಎಂಪಿ ಆಯುಕ್ತರಿಗೆ ಸತತ ದುಂಬಾಲು ಬಿದ್ದ ನಾಗರಿಕರು ನನ್ನ ಅಭಿವೃದ್ಧಿಗೆ ಅಂತ 27 ಲಕ್ಷವನ್ನೂ ಮಂಜೂರು ಮಾಡಿಸಿದ್ದರು. ಅದರ ಮೊದಲ ಕಂತಾಗಿ ಬಿಡುಗಡೆ ಆದ 10 ಲಕ್ಷದಲ್ಲಿ ಒಂದಷ್ಟು ನೆಪ ಮಾತ್ರದ ಕಾಮಗಾರಿ ನಡೆಸಿದ ಪಾಲಿಕೆಯ ಜನ ನನ್ನ ಎದೆ ಮೇಲೊಂದು ಬೋರ್ಡ್ ನೆಟ್ಟು ಅದರಲ್ಲಿ 'ಪಾಲಿಕೆ ಉದ್ಯಾನವನದ ಜಾಗ, ಅತಿಕ್ರಮಣ ನಿಷೇಧಿಸಿದೆ' ಎಂಬುದಾಗಿ ಬರೆಸಿದ್ದರು. ಅಲ್ಲಿಗೆ ನನ್ನ ಭಂಗ ಬಗೆಹರಿಯಿತೆಂದೇ ಭಾವಿಸಿದ್ದೆ.

ಒಂದು ಪಾರ್ಕಿನ ಕಥೆ

ನಿರೂಪಣೆ: **ಗಿರೀಶ್ ತಾಳಿಕಟ್ಟೆ**

ಆದರೆ ಅತ್ಯಾಚಾರ ಎಸಗಲು ಹೊಂಚು ಹಾಕಿದ್ದ ಭೂಗಳ್ಳ ವಿಕೃತ ಮನಸ್ಸುಗಳು ಅಷ್ಟು ಸುಲಭಕ್ಕೆ ನನ್ನನ್ನು ಬಿಟ್ಟು ಕೊಡಲು ಸಿದ್ಧರಿರಲಿಲ್ಲ. ಹೊಂಚು ಹಾಕಿ ಕಾಯುತ್ತಲೇ ಇದ್ದರು. ಈ ಹಿಂದೆ ನನ್ನ ಎದೆಗೆ ಕೈಹಾಕಿ ಮಲಿನ ಮಾಡಿದ್ದ ಸ್ವಾಮಿ ಉಳಿಸಿ ಹೋದ 'ಗುಡಿ'ಯೇ ಹೊಸ ಹೊಸ ಭೂಗಳ್ಳರಿಗೆ ಸ್ಫೂರ್ತಿಯಾಗಿ ಕಂಡಿತ್ತು. ಈ ಬಾರಿ ನನ್ನನ್ನು ವಶ ಮಾಡಿಕೊಳ್ಳಲು ವ್ಯವಸ್ಥಿತ ಸಂಚನ್ನು ರೂಪಿಸಿಕೊಂಡು ದಾಳಿಗೆ ಇಳಿದಿದ್ದರು. ಅದರ ಅಂಗವಾಗಿ 'ಜೆ.ಪಿ. ನಗರ 4ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ' ಎನ್ನುವ ಹೆಸರಿನ ಸಂಘಟನೆಯನ್ನು ಸ್ಥಾಪಿಸಿಕೊಂಡು ಅಖಾಡಕ್ಕೆ ಧುಮುಕಿದ್ದರು. ಮೇಲ್ನೋಟಕ್ಕಿದು ಸದುದ್ದೇಶದ ಸಮೂಹ ಇರಬೇಕು ಅಂತನ್ನಿಸುತ್ತದಾದರೂ ಇದರ ಅಸಲಿ ಅಜೆಂಡಾ ನನ್ನನ್ನು ಲಪಟಾಯಿಸುವುದೇ ಆಗಿತ್ತು. ಭೂಗಳ್ಳರ ವಿರುದ್ಧ ನೆಪಮಾತ್ರಕ್ಕೆ ಎಂ. ರಾಜಣ್ಣ, ಕೆ.ಎಂ. ಸಿದ್ದರಾಜು, ಕೆಸ್ವಾಮಿ, ಕೆ.ಎ. ರಾಮಸುಂದರ್, ಶ್ರೀಧರ್ ಉಪಾಧ್ಯ ಮೊದಲಾದವರು ಹುಟ್ಟುಹಾಕಿದ್ದ ಸಂಘ ಅದು. ಇವರು ಮೊದಲು ಮಾಡಿದ ಕೆಲಸವೆಂದರೆ ಬಿಬಿಎಂಪಿ ನೆಟ್ಟು ಹೋಗಿದ್ದ ಬೋರ್ಡ್‌ನಲ್ಲಿದ್ದ 'ಅತಿಕ್ರಮಣ ನಿಷೇಧ' ಎನ್ನುವ ಅಕ್ಷರಗಳನ್ನು ಅಳಿಸಿಹಾಕಿದ್ದು. ಈ 'ಕಿಡಿಗೇಡಿ'ತನಕ್ಕೆ ಪಾಲಿಕೆಯಿಂದ ಯಾವ ಪ್ರತಿರೋಧವೂ ವ್ಯಕ್ತವಾಗದಿದ್ದಾಗ ಮೆಲ್ಲಗೆ ತಮ್ಮ ಸಂಘದ ಫಲಕವೊಂದನ್ನು ತಂದು ನನ್ನ ಎದೆ ಮೇಲೆ ನಿಲ್ಲಿಸಿಯೇ ಬಿಟ್ಟರು. ಆಗಲೂ ಪಾಲಿಕೆಯವರು ಏನೊಂದು ಕ್ರಮಕ್ಕೂ ಮುಂದಾಗಲಿಲ್ಲ. ಅಲ್ಲಿಯವರೆಗೆ ನನಗೂ ಈ ಮುದಿ ಮನಸ್ಸುಗಳ (ಸಮಾನ ಮನಸ್ಕರಂತೆ ಅವರೆಲ್ಲ ಸಮಾನ ವಯಸ್ಕರೂ ಆಗಿದ್ದರು-ಮುದುಕರು) ಮರ್ಮ ಅರಿವಾಗಿರಲಿಲ್ಲ. ಆದರೆ ರಾತ್ರೋರಾತ್ರಿ ನನ್ನ ಅಂಗಳದಲ್ಲಿ ಸಣ್ಣ ಗುಡಿಯೊಂದನ್ನು ಕಟ್ಟಿ ಅರಿಷಿಣ, ಕುಂಕುಮ, ಹೂವುಗಳನ್ನೆಲ್ಲ ಚೆಲ್ಲಾಡಿ ನನ್ನನ್ನು ಗೆಜ್ಜೆಪೂಜೆಗೆ ಅಣಿಗೊಳಿಸುವಂತೆ ಭಾಸಿಗೊಳಿಸಿ ದಾಗಲೇ ಸಂಪೂರ್ಣ ಹುನ್ನಾರ ನನಗೆ ಅರ್ಥವಾದದ್ದು. ಆ ಕ್ಷಣಕ್ಕೆ ನನ್ನ ಅಸ್ತಿತ್ವವೇ ನನಗೆ ಪ್ರಶ್ನಾರ್ಥಕ ಚಿಹ್ನೆಯಂತೆ ಕಂಡುಬಂದಿತ್ತು.

ಹಾಗೆ ನೋಡಿದರೆ ನನ್ನ ಅಂಗಳದಲ್ಲಿ ಗುಡಿ ಕಟ್ಟುವ ಕುರಿತು ನನಗೆ ಯಾವ ತಕರಾರು ಇಲ್ಲ. ಆದರೆ ಇಲ್ಲಿ ಎದ್ದ ಎರಡೂ ಗುಡಿಗಳ ಹಿಂದೆ ಇದ್ದದ್ದು ಮತ್ತು ಇರುವುದು ಭೂಕಬಳಿಕೆಯ ದುರುದ್ದೇಶ ಮಾತ್ರ. ತಮ್ಮ ಕಾರ್ಯಸಾಧನೆಗಾಗಿ ಜನರ ಭಾವನೆಗಳನ್ನು ಹೀಗೆ ಬಳಸಿಕೊಳ್ಳುವ ವಂಚಕರು ನನ್ನ ನೆರಿಗೆಗೆ ಕೈ ಹಾಕುತ್ತಿರುವುದೇ ದೊಡ್ಡ ಚಿಂತೆ. ಅಷ್ಟಕ್ಕೂ ಬಡವನಿಗೆ ಆಶ್ರಯವಾಗದ ಗುಡಿಗಿಂತ ಬಡಪಾಯಿಗಳಿಗೆ



ಮಾಡಿಸಲು ಹೊರಟರು. ಗೌಡರ ಹೋಮ ಮುಗಿದ ಮುಂದಿನ ಅಮಾವಾಸ್ಯೆಯಂದೇ ಅಂದರೆ 2007ರ ಏಪ್ರಿಲ್ ಮೊದಲ ವಾರದಲ್ಲೇ ಯಡ್ಡಿಯೂ ಒಂದು ಗೆರಿಲ್ಲಾ ದಾಳಿಯಂತಹ ಹೋಮ ಮಾಡಿಸಿಯೇ ಬಿಟ್ಟರು.

ಇದು ನಡೆದದ್ದು ತಿರುಪತಿಯಲ್ಲಿ, ಯಡ್ಡಿಯ ಈ ಹೋಮಕ್ಕೆ 'ಮಹಾಗಣಪತಿ ಹೋಮ' ಎನ್ನಲಾಗಿತ್ತು, ಮಜಾ ಅಂದರೆ ಈ ಸುದ್ದಿ ಕಿವಿಗೆ ಬಿದ್ದ ತಕ್ಷಣ ದೇವೇಗೌಡರ ಫ್ಯಾಮಿಲಿಯು ಯಡ್ಡಿಯ ಹೋಮ ಫಲಕೊಡದಂತೆ ಮಾಡಲು ಮಧುರೈ, ಮಂಗಳೂರು, ಕಟೀಲುಗಳಿಗೆ ಹೋಗಿ ಪರ್ಯಾಯ ಹೋಮ ಮಾಡಿಸಿ ಬಂದರು. ಇದರಿಂದ ಇನ್ನಷ್ಟು ಗಾಬರಿಯಾದ ಯಡ್ಡಿ 2008 ರಿಂದ ಕೇರಳದ ಹಾದಿ ಹಿಡಿದು ತಳಿಪರಂಬುಗೆ ಹೋಗಿ ರಾಜರಾಜೇಶ್ವರಿ ಹಾಗೂ ಭದ್ರಕಾಳಿಯರ ಕಾಲು ಹಿಡಿದರು. ಈಗ ನೋಡಿದರೆ ಅಲ್ಲಿನ ಭೂತಪ್ರೇತಗಳೇ ಯಡ್ಡಿಯನ್ನು ವಶ ಮಾಡಿಕೊಂಡು ವರ್ಷಕ್ಕೊಂದಾವರ್ತಿ ಬಂದುಹೋಗುವಂತೆ ವ್ಯವಸ್ಥೆ ಮಾಡಿಕೊಂಡಿರುವಂತೆ ಕಾಣುತ್ತಿದೆ.

ಕಳೆದ ಐದಾರು ವರ್ಷದಿಂದಲೂ ಕರ್ನಾಟಕದ ರಾಜಕಾರಣದಲ್ಲಿ ಜನಾಭಿಪ್ರಾಯಕ್ಕಿಂತ ವಾಮಾಚಾರ, ಮಾಟ-ಮಂತ್ರಗಳ ಮೂಲಕವೇ ಅಧಿಕಾರ ಪಡೆಯುವುದು ಸಲೀಸು ಎಂಬ ನಂಬಿಕೆ ಹರಡುತ್ತಿರುವುದು ಕಾಣುತ್ತಿದೆ. ಏನೇನೊ ಕಾರಣಕ್ಕೆ ಸಿಕ್ಕ ಅಧಿಕಾರವನ್ನು ಉಳಿಸಿಕೊಳ್ಳಲು ಸಹ ಈ ಪುಢಾರಿಗಳಿಗೆ ಮಾಟ-ಮಂತ್ರವೇ ಬೇಕಾಗಿದೆ. ಈಗ್ಗೆ ಎರಡು ವರ್ಷಗಳ ಹಿಂದೆ ಯಡ್ಡಿ ಸಿಎಂ ಆಗಿದ್ದಾಗ ವಿಧಾನಸೌಧದ ಕಾಂಪೌಂಡ್ ಒಳಗಡೆಯೇ ಯಾರೋ ಮಂತ್ರಿಸಿದ್ದ ನಿಂಬೆಹಣ್ಣು ಹಾಳುಮೂಳು ತಂದೆಸೆದಿದ್ದರು. ಅದನ್ನು ತನ್ನ ವಿರುದ್ಧದ ಸಂಚೆಂದು ಯಡ್ಡಿ ನಂಬಿದರೆ, ಯಡ್ಡಿಯೇ ವಿರೋಧಿಗಳನ್ನು ಮುಗಿಸಲು ಮಾಡಿದ್ದ ಕೆಲಸವೆಂದು ಇನ್ನಿತರರು ಆರೋಪಿಸಿದ್ದರು.

ಒಟ್ಟಿನಲ್ಲಿ ಕರ್ನಾಟಕದ ರಾಜಕಾರಣಕ್ಕೆ ಮಾಟ ಮಂತ್ರಗಳಿಂದ ಸದ್ಯಕ್ಕೆ ಬಿಡುಗಡೆ ಸಿಗುವಂತೆ ಕಾಣುತ್ತಿಲ್ಲ.

ಡಿಸೆಂಬರ್‌ನ ಕೊನೆಯ ಅಮಾವಾಸ್ಯೆಯ ದಿನ ಯಡ್ಡಿ ರಹಸ್ಯವಾಗಿ ಮುಗಿಸಿ ಬಂದಿರುವ 'ಶತ್ರು ವಿನಾಶ ಹೋಮ' ನೋಡಿಕೊಂಡು ಅವರ ವಿರೋಧಿಗಳು ಸುಮ್ಮನೆ ಕೈಕಟ್ಟಿ ಕೂರುತ್ತಾರಾ?

ತಿಕ್ಕಲುತಿಕ್ಕಲಾಗಿ ವರ್ತಿಸುವ ಅವಕಾಶವನ್ನು ನಮ್ಮ ರಾಜಕಾರಣಿಗಳು ಕಳೆದುಕೊಳ್ಳುತ್ತಾರಾ?

ಯಡ್ಡಿ ವಿರೋಧಿಗಳಿಂದ ಸಧ್ಯದಲ್ಲೇ ಇನ್ನೊಂದು ಪ್ರತಿಬಂಧಕ ಹೋಮ ನಡೆಯದಿದ್ದರೆ ಕೇಳಿ!?


■ ಪಾರ್ವತೀಶ

ವಿಜಯ ಸಂಕೇಶ್ವರ್ ಹೇಳಿದ್ದು

'ಸರ್ಕಾರದ ಆಯಕಟ್ಟಿನ ಜಾಗಗಳಲ್ಲೆಲ್ಲ RSSನವರೇ ಇದ್ದಾರೆ'

ಈಗ ಬಿಜೆಪಿ ತ್ಯಜಿಸಿರುವ ವಿಜಯ ಸಂಕೇಶ್ವರ ಸದ್ಯದಲ್ಲೇ ಕರ್ನಾಟಕ ಜನತಾ ಪಾರ್ಟಿ ಸೇರುವುದು ಖಚಿತವಾಗಿದೆ. ಸಂಕೇಶ್ವರ್ ಅವರೇ ಹೇಳಿರುವಂತೆ ಕಳೆದ ಐದು ದಶಕಗಳಿಂದ ಅವರಿಗೆ ಸಂಘ ಪರಿವಾರದೊಂದಿಗೆ ನಿಕಟ ಸಂಪರ್ಕವಿತ್ತು, ಈಗ್ಗೆ ಎರಡು ದಶಕಗಳಿಂದ ಅವರು ಬಿಜೆಪಿಯಿಂದ ಸ್ಪರ್ಧಿಸಿ ಮೂರು ಬಾರಿ ಸಂಸತ್ತಿಗೂ ಆಯ್ಕೆಯಾಗಿದ್ದರು.

RSS, ಬಿಜೆಪಿ ಹಾಗೂ ಕೆಜೆಪಿ ಬಗ್ಗೆ ಸಂಕೇಶ್ವರ್ 'ಲಂಕೇಶ್'ನೊಂದಿಗೆ ಮಾತಾಡಿದ್ದು ಇಲ್ಲಿದೆ.



ಲಂ- ಕರ್ನಾಟಕದ ಇವತ್ತಿನ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಏನನ್ನಿಸುತ್ತಿದೆ?

ವಿ.ಸಂ- Transformation ಕಂಡುಬರುತ್ತಿದೆ. Polarisation ಆಗ್ತಾ ಇದೆ. ಜನ ಬದಲಾವಣೆ ಬಯಸುತ್ತಿದ್ದಾರೆ. ಹೊಸ ಮುಖಗಳು ಬೇಕು. ಜನರಿಗೆ ಬೇಸರ ಆಗಿದೆ. ಅವರಿಗೆ ಒಳ್ಳೆ ಸರ್ಕಾರ ಬೇಕು.

ಲಂ- ನೀವು ಬಿಜೆಪಿ ಬಿಡಲು ನಿಜವಾದ ಕಾರಣ ಏನು?

ವಿ.ಸಂ- ನಾನೀಗಾಗಲೇ ಹೇಳಿದ್ದೀನಿ. ನನಗೆ ಅಲ್ಲಿ comfortable ಆಗಿ ಇರಲಿಲ್ಲ ಅಷ್ಟೆ.

ಲಂ- RSSನವರು ಬಿಜೆಪಿ ಸರ್ಕಾರದಿಂದ ದುಡ್ಡು ಅನೇಕ ಭೂಮಿ, ಸರ್ಕಾರಿ ಕಟ್ಟಡಗಳನ್ನು ನಿಯಮಬಾಹಿರವಾಗಿ ಪಡೆದಿರುವ ಬಗ್ಗೆ ಸುದ್ದಿ ಇದೆ. ಏನಂತೀರಿ?

ವಿ.ಸಂ- ಸುದ್ದಿ ಇರೋದು ನಿಜ. ದಾಖಲೆಗಳು ಇಲ್ಲ, ನಾನು ಭ್ರಷ್ಟಾಚಾರದ ಬಗ್ಗೆ ಮಾತಾಡಲ್ಲ. ಆದರೂ Primafacie ದಲ್ಲೇ ಗೊತ್ತಾಗುತ್ತದೆ.

ಲಂ- ಯಡಿಯೂರಪ್ಪ ಒಬ್ಬ ಲಿಂಗಾಯತ ಲೀಡರ್ ಆಗಿ ಮತ್ತು ಕೆಜೆಪಿ ಕೇವಲ ಲಿಂಗಾಯತರ ಪಾರ್ಟಿಯಾಗಿಬಿಡುವ ಅಪಾಯ ಇದೆಯಾ?

ವಿ.ಸಂ- ಇಲ್ಲ, ಎರಡೂ ಇಲ್ಲ. he is clear in mind, he is secular ಅವರ ಮೂರೂವರೆ ವರ್ಷದ ಆಡಳಿತವನ್ನು ನೀವೂ ಗಮನಿಸಿರಬಹುದು. ನಾನು ಕೂಡಾ ಸೆಕ್ಯುಲರ್ ಆಗಿದ್ದೇ ಸಂಘ ಪರಿವಾರದಿಂದ.

ಲಂ- RSSನವರು ಯಡಿಯೂರಪ್ಪ ಸರ್ಕಾರದ ಮೇಲೆ ಯಾವ ತರದ ಕಂಟ್ರೋಲ್ ಹೊಂದಿದ್ದರು?

ವಿ.ಸಂ- ಎಲ್ಲಾ Key pointಗಳಲ್ಲೂ ಅವರ ಜನ ಇರ್ತಿದ್ದರು. ಸದಾ ಕಿರಿಕಿರಿ. ನಾನದನ್ನೆಲ್ಲ ಗಮನಿಸಿದ್ದೆ.

ಲಂ- ಇದಕ್ಕೆ ಕೆಲವು ಉದಾಹರಣೆ ಕೊಡಿ.

ವಿ.ಸಂ- ಹಾಗೆ ಉದಾಹರಣೆ ಕೊಡೋದು ಕಷ್ಟ.

ಲಂ- ಯಡಿಯೂರಪ್ಪ ಸರ್ಕಾರ ಜನಪರವಾಗುತ್ತಾ ಅಥವಾ ಸಂಘ ಪರಿವಾರದ ಕೈಗೊಂಬೆಯಾಗುತ್ತಾ?

ವಿ.ಸಂ- ಅವರು ಒಳ್ಳೇ ಕೆಲಸ ಮಾಡಿದ್ದಾರೆ. ಆದರೆ ಸಂಘ ಪರಿವಾರ ಪಕ್ಷಪಾತ ಮಾಡಿತು. ನಿತಿನ್ ಗಡ್ಕರಿ ಬಚಾವ್ ಪ್ರಹಸನ ನೋಡಿ ನನಗೆ ಬೇಜಾರಾಗಿದೆ. ಅದು ಇಮೇಜಿಗೆ ಧಕ್ಕೆ ಆಗುತ್ತೆ, ಅಲ್ಲಿ double standard ಇದೆ ಅಂತಾರೆ ಕೆಲವರು. ಆದರೆ ಅಲ್ಲಿ (ಬಿಜೆಪಿ) no standard ಅಂತ ಅನಿಸುತ್ತೆ.

ಲಂ- ಈ ಸರ್ಕಾರ ಉಳಿಯುತ್ತಾ?

ವಿ.ಸಂ- ನನಗೆ ಗೊತ್ತಿಲ್ಲ, ಅದು ಯಾರ ಕೈಲಿದೆಯೋ ಗೊತ್ತಿಲ್ಲ. ಇದು difficult question. I am already out of BJP.

ಲಂ- ಈಗಿನ ಶೆಟ್ಟರ್ ಸರ್ಕಾರದಿಂದಲೂ RSS ಬೆನಿಫಿಟ್ ಪಡೀತಿದೆ ಅಲ್ವಾ?

ವಿ.ಸಂ- ಕೆಲವು ಆಯ್ದ ಜನರಿಗೆ ಸಿಕ್ತಿದೆ, ರಾಜಕಾರಣಿಗಳ ಹತ್ತಿರ ಇರೋರಿಗೆ ಸಿಕ್ತಿದೆ.

ಲಂ- ಬಾಬರಿ ಮಸೀದಿ ಕೆಡವಿದ ಬಗ್ಗೆ ಈಗ ನಿಮಗೆ ಏನನ್ನಿಸುತ್ತಿದೆ?

ವಿ.ಸಂ- ಅದಕ್ಕೆ ಇಂತವರೆ ಹೊಣೆ ಅಂತ ಹೇಳಕ್ಕಾಗಲ್ಲ, ನಾನು ಅದನ್ನ ಉಲ್ಲೇಖಾನು ಮಾಡಲ್ಲ.

ಲಂ- ಕೆಜೆಪಿ ಬರಿ ಲಿಂಗಾಯತರ ಪಾರ್ಟಿನ. ಈಗ ಅಲ್ಲಿರುವ ಬಹುತೇಕ ಶಾಸಕರು, ಲೀಡರ್‌ಗಳೆಲ್ಲಾ ಲಿಂಗಾಯತರೆ ಅಲ್ವಾ?

ವಿ.ಸಂ- ನಿಮ್ಮದು ತಪ್ಪು ಕಲ್ಪನೆ, ಕೆಜೆಪಿಯಲ್ಲಿ ಎಲ್ಲಾ ವರ್ಗದ ಜನರೂ ಇದ್ದಾರೆ, ಬರುತ್ತಾರೆ.

ಲಂ- ಮುಂದಿನ ಚುನಾವಣೇಲಿ ನಿಲ್ತೀರಾ?

ವಿ.ಸಂ- ನನಗೆ ಇಚ್ಚೆ ಇಲ್ಲ.

ಲಂ- ಒತ್ತಾಯ ಬಂದರೆ...?

ವಿ.ಸಂ- It is too early to say... ■

ಆಸರೆಯಾಗುವ ನಡೆತೋಟ ಆಗಬೇಕೆಂದು ಹಂಬಲಿಸಿದ್ದ ನನಗೆ ಭೂವಂಚಕರ ಕ್ರೌರ್ಯ ವಿಪರೀತ ನೋಯಿಸಿತ್ತು. ಆದರೆ ನನ್ನ ಅದೃಷ್ಟಕ್ಕೆ ಮಾಜಿ ಸಂಸದ ಪಿ.ಕೋದಂಡ ರಾಮಯ್ಯ, ಜನಪರ ಹೋರಾಟಗಾರ ಬಿ.ಎಸ್.ಕುಮಾರ ಸ್ವಾಮಿ ಮೊದಲಾದ ಸಜ್ಜನರು ಭೂವಂಚಕರ ವಿರುದ್ಧ ಸಣೆಸಾಟಕ್ಕೆ ನಿಂತು ಪ್ರಕರಣವನ್ನು ನ್ಯಾಯಾಲಯಕ್ಕೆ ಹೊತ್ತೊಯ್ದಿದ್ದರು.

ಅವತ್ತು ವಿಚಾರಣೆ ಕೈಗೆತ್ತಿಕೊಂಡದ್ದು ಹೈಕೋರ್ಟ್‌ನ ಮುಖ್ಯನ್ಯಾಯಮೂರ್ತಿಗಳಾಗಿದ್ದ ಪಿ.ಡಿ.ದಿನಕರನ್ ಮತ್ತು ಕೆ.ಎಲ್. ಮಂಜುನಾಥ್‌ರ ವಿಭಾಗೀಯ ಪೀಠ. ದೇವಸ್ಥಾನದ ಹೆಸರಲ್ಲಿ ಸಾರ್ವಜನಿಕ ಸ್ವತ್ತಾದ ನನ್ನನ್ನು ನುಂಗಿಹಾಕಲು ಯೋಜನೆ ರೂಪಿಸಿದ್ದ ಕ್ಷೇಮಾಭಿವೃದ್ಧಿ ಸಂಘದ ಪಿತೂರಿಯನ್ನು ಅರ್ಥಮಾಡಿಕೊಂಡ ಅವರು ಸಂಘಕ್ಕೆ ಛೀಮಾರಿ ಹಾಕಿ, ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಟ್ಟ ಉದ್ಯಾನವನದ ಸ್ಥಳದಲ್ಲಿ ಉದ್ಯಾನವಲ್ಲದೆ ದೇವಸ್ಥಾನವನ್ನಾಗಲಿ, ಮತ್ತಾವುದೇ ಧಾರ್ಮಿಕ ಕಟ್ಟಡಗಳನ್ನಾಗಲಿ ಕಟ್ಟಲೇಬಾರದು ಎಂದು ತೀರ್ಪು ನೀಡಿದ್ದರು. ಅಷ್ಟೇ ಅಲ್ಲ, ಇನ್ನು ಒಂದು ತಿಂಗಳ ಒಳಗಾಗಿ ಅತಿಕ್ರಮ ಕಟ್ಟಡಗಳನ್ನೆಲ್ಲ ಖಾಲಿ ಮಾಡಿಸಿ ಪೂರ್ಣ ಪ್ರಮಾಣದ ಉದ್ಯಾನವನ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವಂತೆ ಪಾಲಿಕೆಗೂ ಆದೇಶ ರವಾನಿಸಿದ್ದರು.

ಈಗಲಾದರೂ ಪಾಲಿಕೆ ನನ್ನ ಕಡೆ ಮುತುವರ್ಜಿ ವಹಿಸಬಹುದು ಎಂದುಕೊಂಡಿದ್ದ ನನಗೆ ಮತ್ತೊಂದು ಆಘಾತ ಕಾದಿತ್ತು. ಕೋರ್ಟ್ ಆದೇಶ ಪಾಲಿಸುವ ಉದ್ದೇಶದಿಂದ ಮಾತ್ರ ಪಾಲಿಕೆ ನನ್ನ ಅಂಗಳದಲ್ಲಿ ಗಿಡ ನೆಡುವ, ಹುಲ್ಲು ಹಾಸು ಹಾಕಿಸುವ, ನೀರಿಗಾಗಿ ಬೋರ್ ಕೊರೆಯಿಸುವ, ಸುತ್ತಲೂ ಬೇಲಿ ಸುತ್ತುವ ಕೆಲಸಕ್ಕೆ ಕೈ ಹಾಕಿತಾದರು ಅವ್ಯಾವುವನ್ನೂ ಪೂರ್ಣಗೊಳಿಸಲಿಲ್ಲ. ಅದಕ್ಕಿಂತಲೂ ಅಚ್ಚರಿಯೆಂದರೆ ಸ್ವತಃ ನ್ಯಾಯಾಲಯವೇ ಅತಿಕ್ರಮ ಕಟ್ಟಡಗಳನ್ನು ತೆರವುಗೊಳಿಸುವಂತೆ ಆದೇಶ ಇತ್ತಿತ್ತಾದರೂ ಗುಡಿ ಹಾಯದ ಒಂದೇ ಒಂದು ಕಲ್ಲಿಗೂ ಪಾಲಿಕೆ ಕೈ ಹಾಕಲಿಲ್ಲ. ಅದ್ಯಾವುದೋ ರಾಷ್ಟ್ರಮಟ್ಟದ ಸಂಘವಿದೆಯಂತೆ, ಜನೋಪಕಾರದ ಉದ್ದೇಶದಿಂದಲೇ ಗುಡಿಗಳನ್ನು ತೆರವುಗೊಳಿಸಲು ಮುಂದಾದರೆ "ಹಿಂದೂ ಭಾವನೆಗೆ ಧಕ್ಕೆ" ಅಂತೆಲ್ಲ ಬೊಬ್ಬಿರಿದು ಶಾಂತಿಯನ್ನೆ ಕದಡಿ ಬಿಡುವುದಂತೆ. ಅದಕ್ಕೆ ಬೆದರಿದ ಬೆರಳೆಣಿಕೆಯಷ್ಟು ಸಜ್ಜನರೂ ಗುಡಿಗಳ ವಿಷಯಕ್ಕೆ ಅಷ್ಟಾಗಿ ತಲೆಕೆಡಿಸಿಕೊಳ್ಳಲಿಲ್ಲ. ಹೇಗೋ ಉದ್ಯಾನಿ ಉಳಿದುಕೊಂಡಳಲ್ಲ ಅಷ್ಟು ಸಾಕು ಅಂತ ಅವರು ಸುಮ್ಮನಾಗಿದ್ದರು. ನನಗೂ ಹಾಗೇ ಅನ್ನಿಸಿತ್ತು. ಅರ್ಧ ಮಾನವಾದರೂ ಉಳಿಯಿತಲ್ಲ, ಗುಡಿ ಇದ್ದರೆ ಇರಲಿ ಬಿಡು ಅಂತ ಸಮಾಧಾನ ಪಟ್ಟುಕೊಂಡೆ.

ಆದರೆ ಈಗ ಆ ಸಮಾಧಾನವೂ ಇಲ್ಲದಂತಾಗಿದೆ. ತೀರ್ಪು ಬಂದ ಸ್ವಲ್ಪ ದಿನ ಪಾಲಿಕೆ ವಾಹನಗಳು ಓಡಾಡಿದ್ದು ಬಿಟ್ಟರೆ ಎಲ್ಲವೂ ಅರ್ಧಂಬರ್ಧವಾಗಿ ಉಳಿದಿವೆ. ಶತಾಯ ಗತಾಯ ನನ್ನನ್ನು ಖಾಸಗಿ ಸ್ವತ್ತಾಗಿ ಮಾಡಿಕೊಳ್ಳಲೇಬೇಕೆಂದು ತೀರ್ಮಾನಿಸಿಕೊಂಡ ಧೂರ್ತರು ಕೋರ್ಟ್ ಆದೇಶದ ನಂತರ ಗೂಂಡಾಗಿರಿ, ಪುಂಡಾಟಿಕೆಗೆ ಇಳಿದುಬಿಟ್ಟಿದ್ದಾರೆ. ಪೋಲಿ ಹುಡುಗರನ್ನು ಬಿಟ್ಟು ನನ್ನ ಸುತ್ತ ಸಜ್ಜನರು, ವಯಸ್ಸಾದವರು, ಹೆಂಗುಸರು, ಮಕ್ಕಳು ಓಡಾಡದಂತಹ ವಾತಾವರಣ ಸೃಷ್ಟಿಸುತ್ತಿದ್ದಾರೆ. ನನ್ನ ಪರವಾಗಿ ನಿಂತು ಹೋರಾಟ ಮಾಡಿದವರ ಮೇಲೆ ಹಲ್ಲೆ ಮಾಡುವುದು, ಸಾಯಿಸುವ ಬೆದರಿಕೆ ಹಾಕುವುದು, ಮನೆ ಮುಂದೆ ದಾಂಧಲೆ ನಡೆಸುವುದು ಇವೇ ಮೊದಲಾದ ಕಿರಿಕಿರಿಗೆ ಮುಂದಾಗಿದ್ದರೆ. ಸ್ಥಳೀಯ ಪೊಲೀಸರೂ ಇದೆಲ್ಲವನ್ನು ಕಂಡೂಕಾಣದಂತೆ ಮೌನಕ್ಕೆ ಶರಣಾಗಿದ್ದಾರೆ.

ಈ ನಡುವೆ ಈ ಭೂವಂಚಕರು ನನ್ನ ಅತ್ಯಾಚಾರಕ್ಕೆ ಮತ್ತೊಂದು ಹೊಸ ದಾರಿ ಹುಡುಕಿಕೊಂಡಿದ್ದಾರೆ. ಈ ಬಾರಿ ಅದ್ಯಾವನೋ ಬಿ.ಎಸ್. ಕೃಷ್ಣಮೂರ್ತಿ ಎಂಬಾತ ಭೂಗಳ್ಳರ ಸಾರಥ್ಯ ವಹಿಸಿದ್ದಾನೆ. ದೇವಾಲಯದ ಮೂಲಕ ಸಾಧ್ಯವಾಗುವುದಿಲ್ಲ ಎನ್ನುವುದು ಖಾತ್ರಿಯಾಗುತ್ತಿದ್ದಂತೆ ಈತ ಬಿಬಿಎಂಪಿ ತೋಟಗಾರಿಕೆ ಇಲಾಖೆಗೆ ಪತ್ರ ಬರೆದು ಈ ಉದ್ಯಾನಿ ಇಲ್ಲಿ ಅಪ್ರಯೋಜಕ, ಇದನ್ನು ತೆಗೆದು ಇಲ್ಲೊಂದು ಮಕ್ಕಳಾಡುವ ಮೈದಾನ ನಿರ್ಮಿಸಿದರೆ ಉತ್ತಮ ಎಂಬ ಸಲಹೆ ನೀಡಿದ್ದಾನೆ. ಇದು ಕಬಳಿಕೆಯ ಮಗದೊಂದು ಹುನ್ನಾರ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಈ ಮೈದಾನದ ಬೇಡಿಕೆ ನನ್ನ ಮೈಮೇಲೆ ಅದಾಗಲೇ ಬೆಳೆದು ನಿಂತಿರುವ ಮರಗಳನ್ನು ಕಡಿದು ನನ್ನನ್ನು ಬೆತ್ತಲು ಮಾಡುವ ಹಂತದವರೆಗೆ ಮಾತ್ರ ಇರುತ್ತದೆ. ಒಮ್ಮೆ ನಾನು ನಿರ್ವಸ್ತ್ರಳಾದೆನೆಂದರೆ ಮೈದಾನದ ಯೋಜನೆ ನೆನೆಗುದಿಗೆ ಬಿದ್ದುಬಿಡುತ್ತೆ. ಹೇಗೂ ನಾನು ಬೆತ್ತಲಿರುತ್ತೇನಾದ್ದರಿಂದ ಅತ್ಯಾಚಾರ ಮಾಡುವುದು ಕಷ್ಟದ ಕೆಲಸವೇನಲ್ಲ ಎಂಬುದು ಈ ವಿಕೃತ ಮನಸ್ಸುಗಳ ಲೆಕ್ಕಾಚಾರ. ನನ್ನಿಂದ ರೋಸಿಹೋಗಿರುವ ಪಾಲಿಕೆಯೂ ಇದಕ್ಕೆ ಎಲ್ಲಿ ಅಸ್ತು ಎಂದು ಬಿಡುತ್ತೋ ಎನ್ನುವುದೇ ನನ್ನ ಭಯ.

ಇತ್ತೀಚೆಗೆ ಇದಕ್ಕಿಂತಲೂ ಆಘಾತಕಾರಿ ವಿಷಯವೊಂದು ನನ್ನ ಗಮನಕ್ಕೆ ಬಂತು. ಅದೇನೆಂದರೆ ಇಲ್ಲಿಯ ಕಾರ್ಪೊರೇಟರ್ ಒಬ್ಬ ಇದ್ದಾನೆ. ಆತನ ಹೆಸರು ಚಂದ್ರಶೇಖರ್ ರಾಜು ಅಂತೆ. ಅವನೇ ಮುಂದೆ ನಿಂತು ಈ ರೀತಿ ಹುನ್ನಾರ ನಡೆಸುತ್ತಿದ್ದಾನೆ ಎಂಬರ್ಥದ ಮಾತುಗಳನ್ನು ನನ್ನಲ್ಲಿಗೆ ಬಂದು ಕುಳಿತುಹೋಗುವ ಪ್ರತಿಯೊಬ್ಬರೂ ಮಾತನಾಡಿಕೊಳ್ಳುತ್ತಿದ್ದಾರೆ. ಅಂದಹಾಗೆ ನಿಮಗೊಂದು ವಿಷಯ ಹೇಳುವುದನ್ನು ಮರೆತಿದ್ದೆ. ಈಗೆ ಒಂದೆರಡು ತಿಂಗಳ ಹಿಂದೆ ಮಧ್ಯರಾತ್ರಿಯ ಹೊತ್ತು ನನ್ನ ಮೇಲೆ ದಾಳಿ ಮಾಡಿದ ಕೆಲ ಪುಂಡರ ಗುಂಪು ಸುಮಾರು 60 ಕ್ಕೂ ಹೆಚ್ಚು ವಿವಿಧ ಬಗೆಯ ಮರಗಳನ್ನು ಕತ್ತರಿಸಿ ಹಾಕಿ ಅಟ್ಟಹಾಸಗೈದು ಹೋಗಿದ್ದರು. ಅವತ್ತು ಇದೇ ಕಾರ್ಪೊರೇಟರ್ "ಉದ್ಯಾನಿಯಲ್ಲಿ ಮರಗಳು ದಟ್ಟವಾಗಿ ಬೆಳೆದು ಓಡಾಡಲು ತೊಂದರೆಯಾಗುತ್ತಿತ್ತು. ಹಾಗಾಗಿ ಪಾಲಿಕೆಯೇ ಅವುಗಳಲ್ಲಿ ಕೆಲವೊಂದನ್ನು ಕತ್ತರಿಸಿ ಹಾಕಿದೆ" ಎಂದು ಸಮರ್ಥಿಸಿಕೊಂಡಿದ್ದ ನನ್ನಾಣೆಗೂ ಅವತ್ತು ಬಂದವರು ಪಾಲಿಕೆಯವರಂತು ಅಲ್ಲವೇ ಅಲ್ಲ. ಹಗಲು ಹೊತ್ತೇ ನನ್ನ ಬಗ್ಗೆ ಮುತುವರ್ಜಿ ಮಾಡದ ಬಿಬಿಎಂಪಿ ರಾತ್ರೋರಾತ್ರಿ ಬಂದು ನನ್ನ ಚಾಕರಿ ಮಾಡುತ್ತದೆಂದರೆ ಯಾರಾದರು ನಂಬಲು ಸಾಧ್ಯವೇ, ನೀವೇ ಹೇಳಿ? ಮತ್ತೂ ಒಂದು ಆಘಾತಕಾರಿ ವಿಷಯವೆಂದರೆ ಈ ಎಲ್ಲಾ ಭೂಗಳ್ಳರ ಹಿಂದೆ ಸ್ಥಳೀಯ ಶಾಸಕ ಬಿ.ಎನ್. ವಿಜಯ್‌ಕುಮಾರ್ ಕೂಡಾ ಕೈಜೋಡಿಸಿ ನಿಂತಿದ್ದಾನೆ ಎನ್ನುವುದು. ಇದೂ ಸಹಾ ಇಲ್ಲಿಗೆ ಬಂದು ಕೂತು ಹೋಗುವ ಜನ ಆಡಿಕೊಳ್ಳುವ ಮಾತು. ನನಗೆ ಕುತ್ತು ಬಂದರೆ ಹೋರಾಡಲು ಕೋದಂಡರಾಮಯ್ಯ, ಕುಮಾರಸ್ವಾಮಿ ಮೊದಲಾದವರು ಇದ್ದಾರಲ್ಲಾ ಎನ್ನುವ ನಂಬಿಕೆಯಾದರೂ ಇಲ್ಲಿಯವರೆಗೆ ಇತ್ತು. ಆದರೆ ಇಂತಹ ಘಟಾನುಘಟಿಗಳೇ ನನ್ನ ಮೇಲೆ ಎರಗಿ ಬೀಳಲು ಕಾಯುತ್ತಿದ್ದಾರೆ ಎನ್ನುವ ಸಂಗತಿ ತಿಳಿದಾಗಿನಿಂದ ನಿತ್ರಾಣಳಾಗಿದ್ದೇನೆ. ಪಾಪ, ಈ ಸಜ್ಜನರಾದರು ಎಷ್ಟು ಅಂತ ಈ ರಕ್ಕಸರ ಜೊತೆ ಹೋರಾಡಿಯಾರು? ಆಳುವವರೇ ಮದೋನ್ಮತ್ತರಾಗಿ ನಿಂತಿರುವಾಗ, ನ್ಯಾಯಾಲಯದ ಆದೇಶವನ್ನು ಬಿಬಿಎಂಪಿಯೇ ನಿರ್ಲಕ್ಷಿಸಿ ಮಲಗಿರುವಾಗ ನನ್ನ ರಕ್ಷಣೆಯನ್ನು ಯಾರು ತಾನೆ ಮಾಡಿಯಾರು?


ಹಾಳಾಗಲಿ, ನೀವು ಮನುಷ್ಯರಂತೆ ಅತ್ಯಾಚಾರಕ್ಕೆ ದೂರು ಕೊಡುವ ಭಾಗ್ಯವೂ ನನಗಿಲ್ಲ! ಅತ್ಯಾಚಾರಕ್ಕೆ ಮುನ್ನ ಇಂತೆ ಗುಟ್ಟು ಮಾಡಿಕೊಳ್ಳಬೇಕಷ್ಟೆ.

ನತದೃಷ್ಟೆ ಉದ್ಯಾನಿ



ಭೂಗಳ್ಳರಿಗ ತುತ್ತಾದ ಜೆ.ಪಿ.ನಗರದ ಪಾರ್ಕ್





ಲೈಫ್ ಆಫ್ ಪೈ

ಹುಲಿಯೆಂಬ ಸಾವಿನ ಧೂತ ಅದರೊಳಗೂ ಒಬ್ಬ ಸಂತ!

ಒಂದು ಭಯಾನಕ ಹುಲಿ. ಜೊತೆಗೊಬ್ಬ ಹುಡುಗ ಮತ್ತು ಪುಟ್ಟದೊಂದು ಹಾಯಿದೋಣಿ. ಸುತ್ತ ಕರಾಳ ಜಲಸಾಗರ ಮಾತ್ರ. ಇದಿಷ್ಟನ್ನೇ ಇಟ್ಟುಕೊಂಡು ಎಂಥ ದೃಶ್ಯಕಾವ್ಯವೊಂದನ್ನು ಸೃಷ್ಟಿಸಬಹುದು?

ಬಹುಶಃ ಕನ್ನಡಿಗರನೇಕರು 2002ರ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ವಿಜೇತ ಕೃತಿಯಾದ 'ಲೈಫ್ ಆಫ್ ಪೈ' ಯನ್ನು ಓದಿರಲಿಕ್ಕಿಲ್ಲ. ಕನ್ನಡಕ್ಕೆ ಅದನ್ನು ತರ್ಜುಮೆ ಮಾಡುವವರಾದರೂ ಯಾರು?

'ಸತ್ಯವೇ ಭಗವಂತನೆಂಬ ಪುಣ್ಯಕೋಟಿಯ ಕತೆಯಿದು' ಎಂಬ ಹಾಡಿಗೆ ತಕ್ಕಂತೆ ಇಲ್ಲಿ ಪುಣ್ಯಕೋಟಿಯ ಸ್ಥಾನದಲ್ಲಿರುವವನು ಓರ್ವ ಹದಿನಾರರ ಬಾಲಕನಾದರೆ ಆತನೆದುರು ಚಂಡ ವ್ಯಾಘ್ರನಂತಿರುವವನು ರಿಚರ್ಡ್ ಪಾರ್ಕರ್. ರಿಚರ್ಡ್ ಪಾರ್ಕರ್ ಎಂಬುದು ಇಲ್ಲಿ ಭಯಾನಕ ಹುಲಿಯೊಂದರ ಹೆಸರು. ಸದ್ಯ ಬೆಂಗಳೂರಿನ ಮೂವತ್ತಕ್ಕೂ ಅಧಿಕ ಸಿನಿಮಾ ಮಾಲುಗಳಲ್ಲಿ ಕಿಕ್ಕಿರಿದ ಪ್ರೇಕ್ಷಕರಿಂದ 'ಹೌಸ್‌ಫುಲ್' ಬೋರ್ಡು ಹೊತ್ತು ಓಡುತ್ತಲೇ ಇದೆ 'ಲೈಫ್ ಆಫ್ ಪೈ' ಎಂಬ ಇಂಗ್ಲಿಷ್ ಸಿನಿಮಾ. ಎಲ್ಲೋ ಕಾಡಾನೆಯೊಂದು ಊರಂಚಿನ ತೋಟಕ್ಕೆ ನುಗ್ಗಿದ್ದನ್ನೇ ಮಹಾನ್ ಕೆಡುಕೆಂಬಂತೆ ಪತ್ರಿಕೆಗಳು ವರದಿ ಪ್ರಕಟಿಸುತ್ತವೆ. ಹಸಿದ ಚಿರತೆಯೊಂದು ಊರತುದಿಯ ತೋಪಿನಲ್ಲಿ ಕಾಣಿಸಿದ್ದೇ ತಡ ಜನ ಅಟ್ಟಾಡಿಸಿ ಕೊಲ್ಲುತ್ತಾರೆ. ಯಾವುದೋ ಹಳ್ಳಿಯಲ್ಲಿ ಕರಡಿ ಪ್ರತ್ಯಕ್ಷವಾಯಿತೆಂದರೆ ಅದರ ಹೊಟ್ಟೆ ಸಂಕಟದ ಬದಲಿಗೆ ಹಾವಳಿಯೆಂಬ ಹೆಡ್ಡಿಂಗು ಪತ್ರಿಕೆಗಳಲ್ಲಿ ಅಚ್ಚಾಗುತ್ತದೆ.


ಹಸಿವಿನ ಆಧ್ಯಾತ್ಮವನ್ನು ಕಾಣುವ ಕಣ್ಣುಗಳನ್ನೇ ಮನುಷ್ಯ ಕಳಕೊಂಡು ಕಾಲಘಟ್ಟದಲ್ಲಿ 'ಲೈಫ್ ಆಫ್ ಪೈ' ಎಂಬ ಹಾಲಿವುಡ್ ಚಿತ್ರವೊಂದಕ್ಕೆ ವಿಶ್ವಾದ್ಯಂತ ಸಿಗುತ್ತಿರುವ ಮನ್ನಣೆ, ಜನಪ್ರಿಯತೆ ಮತ್ತು ಯಶಸ್ಸು- ಮನುಷ್ಯ ಮತ್ತು ವನ್ಯಮೃಗಗಳ ಸಂಘರ್ಷಕ್ಕೊಂದು ಹೊಸದೇ ಪರಿವ್ಯಾಖ್ಯೆ ಕಲ್ಪಿಸಬಹುದೆ? ಕನಿಷ್ಠ ತಲೆಮಾರೊಂದರ ರವಷ್ಟಾದರೂ ಅಂತರಾತ್ಮಗಳಿಗಿದು ಮದ್ದಾಗಬಹುದೆ?

ಜೇಮ್ಸ್ ಕೆಮರೂನ್‌ನ 'ಟೈಟಾನಿಕ್' ಮತ್ತು 'ಅವತಾರ್'ನಂಥ ವಿಶಿಷ್ಟ ಹಾಲಿವುಡ್ ಚಿತ್ರಗಳನಂತರ ಸಿನಿಮಾ ಜಗತ್ತು ಶಹಬ್ಬಾಷ್ ಎಂದದ್ದು 'ಲೈಫ್ ಆಫ್ ಪೈ'ಗೇನೇ. ಮೊನ್ನೆ ಡಿಸೆಂಬರ್ 21 ಕ್ಕೆ ಅಮೆರಿಕವೊಂದರಲ್ಲೇ 2902 ಚಿತ್ರಮಂದಿರಗಳಲ್ಲಿ ತೆರೆಕಂಡ ಲೈಫ್ ಆಫ್ ಪೈ ಸರಿಸುಮಾರು 120 ಮಿಲಿಯನ್ ಡಾಲರ್‌ಗಳು ಅಂದರೆ ಹೆಚ್ಚೂಕಮ್ಮಿ 600 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸೃಷ್ಟಿಯಾದ ವಿಶಿಷ್ಟ ಚಿತ್ರ ಮತ್ತು ನಮ್ಮ ದೇಶದ್ದೇ ಆದ ಕತೆಯನ್ನಾಧರಿಸಿದ ಚಿತ್ರ. ಭಾರತಕ್ಕೂ ಅದರಲ್ಲೂ ಬೆಂಗಳೂರಿಗೂ ಈ ಚಿತ್ರಕ್ಕೂ ಇರುವ ಸಂಬಂಧ ಮಾತ್ರವಲ್ಲದೆ ಮನುಷ್ಯ ಮತ್ತು ವನ್ಯಜೀವಿಗಳ ನಡುವಿನ ಕಾಲಾತೀತ ಕ್ಷೋಭೆಯ ಹೊಸ ಸಾಧ್ಯತೆಯ ಕಾರಣಕ್ಕಾದರೂ ಕನ್ನಡ ಜನತೆ ಇದನ್ನು ನೋಡಲೇಬೇಕಿದೆ. ಕನಿಷ್ಠ ಆತ್ಮತೃಪ್ತಿಗಾದರೂ...

ಇದು ಪುಣ್ಯಕೋಟಿಯ ಗೋವಿನ ಹಾಡಿನಂಥದ್ದೇ ಸರಳ ಕತೆ. ವ್ಯಾಘ್ರ ಮತ್ತು ಗೋವಿನ ಬದಲಾಗಿ ಇಲ್ಲಿರುವುದು ಮನುಷ್ಯ ಮತ್ತು ಮೃಗ. 2001 ರಲ್ಲಿ ಯಾನ್ ಮಾರ್ಟೆಲ್ ರಚಿಸಿದ 'ಲೈಫ್ ಆಫ್ ಪೈ' ಎಂಬ ಬೂಕರ್ ಪ್ರಶಸ್ತಿ ವಿಜೇತ ಕೃತಿಯೇ ಇಲ್ಲಿ ದೃಶ್ಯದೌತಣವಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಫ್ರೆಂಚ್ ವಸಾಹತಾಗಿದ್ದ ಪಾಂಡಿಚೇರಿಯ ಮೂಲಕವೇ ಕತೆ ಶುರುವಾಗುತ್ತದೆ.



ಕಥಾನಾಯಕ ಪೈ ಬೇರೆಲ್ಲ ಮಕ್ಕಳಂತಲ್ಲ. ಹುಟ್ಟುತ್ತಾ ಬ್ರಾಹ್ಮಣನಾಗಿ ಹಿಂದೂ ಪುರಾಣದ ಅಸಂಖ್ಯಾತ ಚಂದಮಾಮ ಕತೆಗಳನ್ನು ಮೈಗೂಡಿಸಿಕೊಂಡೇ ಬೆಳೆದವನಿಗೆ ದೇವರ ಸರ್ವಾಂತರ್ಯಾಮಿತ್ವದ ಬಗ್ಗೆ ಅದೆಂಥದೋ ಕುತೂಹಲ. ಯಶೋಧೆ ಬಾಯಿ ತೆರೆಯೆಂದರೆ ಇಡೀ ಭೂಮಂಡಲವೇ ಶ್ರೀಕೃಷ್ಣ ಪರಮಾತ್ಮನ ಬಾಯೊಳಗೆ ಕಾಣಿಸಿದ ಹಾಗೆ ದೈವಸುತ: ಏಸುಕ್ರಿಸ್ತ ಪಾಪಿಗಳಿಗಾಗಿ ಶಿಲುಬೆಗೇರಿ ದೈವಸಾಕ್ಷಾತ್ಕಾರ ಸಾಧಿಸಿದ್ದು ಮತ್ತು ಪರಮ ದಯಾಳು ಅಲ್ಲಾಹುವೇ ಭೂಮ್ಯಾಕಾಶಗಳ ಒಡೆಯ ಮಾತ್ರನೆಂಬ ಇಸ್ಲಾಮ್‌ನ ಸಾರವು ಮನುಷ್ಯ ಮತ್ತು ದೇವರ ಸಂಬಂಧದ ಬಗ್ಗೆ ಆತನಲ್ಲಿ ಅಸಂಖ್ಯಾತ ಪ್ರಶ್ನೆಗಳ ಸರಮಾಲೆಯನ್ನೇ ಹುಟ್ಟಿಹಾಕುತ್ತದೆ.



ಆ್ಯಂಗ್ ಲೀ

ಆತನಿಗೊಬ್ಬ ಅಣ್ಣನಿದ್ದಾನೆ. ಆತನ ಹೆಸರು ರವಿ. ತಂದೆ ಪಾಂಡಿಚೇರಿಯಲ್ಲಿ ನಡೆಸುತ್ತಿದ್ದ ಮೃಗಾಲಯದಲ್ಲಿ ದೈತ್ಯ ಉಡದಿಂದ ಹಿಡಿದು ಚಿಂಪಾಂಜಿ, ಪಕ್ಷಿಗಳು ಜಿರಾಫೆ, ಹುಲಿ, ಚಿರತೆ ಎಲ್ಲವೂ ಇದೆ. ತಾಯಿ ಕರ್ಮಠ ಬ್ರಾಹ್ಮಣಳಾದರೆ ತಂದೆ ದೇವರನ್ನು ನಂಬದ ವಿಚಾರವಾದಿ. ಕಥಾನಾಯಕ ಪೈ ಬಾಲಕನಾಗಿ ದೇವಾಲಯ, ಚರ್ಚು, ಮಸೀದಿಗಳ ನಿರರ್ಥಕ ನಂಬಿಕೆಗಳ ಕುರಿತಂತೆ ತಲೆಕೆಡಿಸಿಕೊಂಡಷ್ಟೂ ತಂದೆ ಆತನನ್ನು ವೈಜ್ಞಾನಿಕವಾಗಿ ಯೋಚಿಸುವಂತೆ ಪ್ರೇರೇಪಿಸುತ್ತಾನೆ. ತಂದೆ ನಡೆಸುವ ಮೃಗಾಲಯದಲ್ಲೊಂದು ಬೆಂಗಾಲ್ ಹುಲಿಯಿದೆ. ಅದರ ಹೆಸರೇ ರಿಚರ್ಡ್ ಪಾರ್ಕರ್.

ಯಾರೋ ರಿಚರ್ಡ್ ಪಾರ್ಕರ್ ಎಂಬ ಬ್ರಿಟಿಷ್ ಬೇಟೆಗಾರನೊಬ್ಬ ಮರಿಯಾಗಿದ್ದಾಗ ಕಾಡಿನಿಂದ ಅದನ್ನು ಹಿಡಿತಂದು ಮೃಗಾಲಯಕ್ಕೆ ಮಾರಿದ್ದರಿಂದಾಗಿ ಗುಮಾಸ್ತನೊಬ್ಬನ ಯಡವಟ್ಟಿನಿಂದಾಗಿ ಆ ಹುಲಿಗೂ ರಿಚರ್ಡ್ ಪಾರ್ಕರ್ ಎಂಬ ಹೆಸರೇ ಬಂದುಬಿಟ್ಟಿದೆ. ಅಂಥ ಭಯಾನಕ ಹುಲಿಗೆ ಮಾಂಸದ ತುಂಡೊಂದನ್ನು ತಿನ್ನಿಸಲೆತ್ನಿಸಿ ಪೈ ತಂದೆಯಿಂದ ಛೀಮಾರಿಗೀಡಾಗುತ್ತಾನೆ. ಜೀವಂತ ಆಡೊಂದನ್ನು ಅದು ಕೊಂದು ತಿನ್ನುವುದನ್ನು ಪ್ರಾತ್ಯಕ್ಷಿಕೆಯ ಮೂಲಕ ತೋರಿಸಿ ಹುಲಿಯ ಕ್ರೌರ್ಯ ಮತ್ತು ಮೃಗೀಯತೆಯನ್ನು ತಂದೆ ಮಗನಿಗೆ ಪಾಠ ಮಾಡುತ್ತಾನೆ. ಇಷ್ಟೆಲ್ಲವೂ ಪಾಂಡಿಚೇರಿಯ ಮೃಗಾಲಯದ ಸುತ್ತಿವರಿದ ಪ್ರಸಂಗಗಳಾದರೆ ಕತೆಗೆ ತಿರುವು ಬರುವುದೇ ಇಲ್ಲಿಂದ.

ಬದಲಾದ ಪರಿಸ್ಥಿತಿಯಲ್ಲಿ ತಂದೆಗೆ ತನ್ನ ಮೃಗಾಲಯವನ್ನು ಮುಚ್ಚದೇ ವಿಧಿಯೇ ಇಲ್ಲ. ಏಕೆಂದರೆ ಮೃಗಾಲಯವಿದ್ದದ್ದು ಸರ್ಕಾರದ ಜಾಗದಲ್ಲಿ. ಒಂದಷ್ಟು ಮೃಗಗಳನ್ನು ದೂರದ ಕೆನಡಾ ದೇಶದಲ್ಲಿ ಮಾರಿ ಹಾಕುವುದು ತಂದೆಯ ಉದ್ದೇಶ. ಅದಕ್ಕೆಂದೇ ಜಪಾನಿನ ಹಡಗೊಂದರಲ್ಲಿ ಮೃಗಾಲಯದ ಪ್ರಾಣಿಗಳನ್ನೆಲ್ಲ ಹಾಕಿಕೊಂಡು ಪೈ ಕುಟುಂಬ ತನ್ನ ಸಮುದ್ರಯಾನವನ್ನು ಆರಂಭಿಸುತ್ತದೆ. ಕರಾಳ ಸಾಗರದ ಮಧ್ಯೆ ನಡುರಾತ್ರಿಯಲ್ಲಿ ಸಾಗುತ್ತಿದ್ದ ಹಡಗು ಭೀಕರ ಚಂಡಮಾರುತಕ್ಕೆ ಸಿಲುಕುತ್ತದೆ. ಪ್ರಯಾಣಿಕರು, ಸರಕು, ಮೃಗಾಲಯದ ಸಮೇತ ಹಡಗು ಮುಳುಗಿ ಜೀವರಕ್ಷಕ ಹಾಯಿದೋಣಿಯೊಂದರಲ್ಲಿ ಪೈ ಆಕಸ್ಮಿಕವಾಗಿ ಬಚಾವಾಗುತ್ತಾನಾದರೂ ಅಲ್ಲಿಂದಾಚೆಗೆ ದುರಂತಗಳ ಸರಮಾಲೆಯನ್ನೇ ಪೈ ಎದುರಿಸಬೇಕಾಗುತ್ತದೆ.

ಚಂಡಮಾರುತಕ್ಕೆ ಸಿಲುಕಿದ ಹಡಗು ಮುಳುಗಿಹೋಗಿದೆ. ಪೈನ ತಂದೆ-ತಾಯಿ, ಅಣ್ಣ ಪ್ರಯಾಣಿಕರು ಯಾರೂ ಬದುಕಿಲ್ಲ. ಆದರೆ ಪೈ ಬಚಾವಾದ ಹಾಯಿದೋಣಿಗೆ ಮುಳುಗುತ್ತಿದ್ದ ಹೇಸರಗತ್ತೆಯೊಂದು ಹತ್ತಿಕೊಳ್ಳುತ್ತದೆ. ಜೊತೆಗೇ ಒಂದು ಕತ್ತೆ ಕಿರುಬ (ಕುರ್ಕ) ಮತ್ತೊಂದು ಚಿಂಪಾಂಜಿ ಮತ್ತು ಬಂಗಾಳಿ ಹುಲಿಯೂ ಮುಳುಗಲಾರದೇ ಬಂದು ದೋಣಿಯನ್ನು ಹೊಕ್ಕಿಬಿಡುತ್ತವೆ. ಪದೇ ಪದೇ ದಾಳಿಯಿಕ್ಕುವ ಚಂಡಮಾರುತ, ಸುತ್ತ ಭಯಾನಕ

ಕಂಪ್ಯೂಟರ್ ವ್ಯಾಘ್ರ, ಕಡಲಾಳದ ಚಿತ್ತಾರ, ರೌದ್ರ ಸಾಗರ ಮತ್ತು ಹಸಿವಿನ ದೈವ ಸಾಕ್ಷಾತ್ಕಾರ

ಕೇವಲ ಕತೆಯ ಕಾರಣಕ್ಕಷ್ಟೇ ಅಲ್ಲ 'ಲೈಫ್ ಆಫ್ ಪೈ' ಹಲವಾರು ಕಾರಣಗಳಿಂದಾಗಿ ವಿಶ್ವದ ಗಮನ ಸೆಳೆದಿದೆ. ಪೈ ಪಾತ್ರಧಾರಿ ಸೂರಜ್ ಶರ್ಮ ಬೆಂಗಳೂರಿನ ಹುಡುಗ. ಆತನ ತಾಯಿ ಪಾತ್ರದಲ್ಲಿ ಹಿಂದಿಯ ಖ್ಯಾತ ನಟಿ ಟಬು ಗಮನ ಸೆಳೆದರೆ ತಂದೆ, ಅಣ್ಣ- ಹೀಗೆ ಬಹುತೇಕ ಪಾತ್ರಧಾರಿಗಳೆಲ್ಲ ಭಾರತೀಯರೆ. ಖ್ಯಾತ ಹಿಂದಿ ನಟ ಇರ್ಫಾನ್ ಖಾನ್ ಕೂಡ ಪೈ ಪಾತ್ರದಲ್ಲೇ ನಟಿಸಿರುವುದು ಈ ಚಿತ್ರದ ಮತ್ತೊಂದು ವೈಶಿಷ್ಟ್ಯ.

ಇದೆಲ್ಲಕ್ಕೂ ಮಿಗಿಲಾಗಿ 'ಲೈಫ್ ಆಫ್ ಪೈ'ನ ಹೆಚ್ಚುಗಾರಿಕೆಯಿರುವುದು ಅದರ ತಾಂತ್ರಿಕತೆಯಿಂದ. ವಿಶಾಲ ಸಾಗರವನ್ನೇ ಒಂದು ಪಾತ್ರವನ್ನಾಗಿ ರೂಪಿಸುವಲ್ಲಿ ನಿರ್ದೇಶಕ ಆ್ಯಂಗ್ ಲೀಯ ಶ್ರಮವಿಲ್ಲಿ ಸಾರ್ಥಕಗೊಂಡಿದೆ. ರಾತ್ರಿಯ ನಿರಭ್ರ ಆಕಾಶವೇ ಇಡೀ ಸಾಗರವನ್ನು ಆವರಿಸಿಕೊಂಡಂತೆ, ಅದರ ನಕ್ಷತ್ರಪುಂಜಗಳೆಲ್ಲ ಚಿತ್ತಾರವಾಗಿ ಸತ್ತ ತಾಯಿ ಮುಗುಳುನಗೆಯನ್ನು ಬಿಡಿಸಿದಂತೆ ಜೆಲ್ಲಿ ಮೀನುಗಳೆಲ್ಲ ರಾತ್ರಿ ಕಡಲಲ್ಲಿ ದೀಪ ಬೆಳಗಿದಂತೆ, ದೈತ್ಯ ತಿಮಿಂಗಿಲ ಕಡಲಾಳದಲ್ಲಿ ರಂಗೋಲಿಯಿಟ್ಟು ಕಡಲೇ ಇಲ್ಲಿ ಕಾವ್ಯವಾಗುತ್ತದೆ.

'ಅವತಾರ್' ಮತ್ತು 'ಟೈಟಾನಿಕ್' ಸೃಷ್ಟಿಸಿದ ಹಾಲಿವುಡ್‌ನ ಖ್ಯಾತ ಚಿತ್ರ ನಿರ್ದೇಶಕ ಜೇಮ್ಸ್ ಕ್ಯಾಮರೂನ್ ಚಿತ್ರದ ಪ್ರೀಮಿಯರ್ ಶೋ ನೋಡಿದ್ದೇ, 'a magical vision... a master piece and Lee is a master filmmaker...!' ಎಂದು ಕೊಂಡಾಡು ವುದಕ್ಕೂ ಕಾರಣವಿದೆ. ಇದು ಆ್ಯಂಗ್ ಲೀ ಬಯಸಿ ಮಾಡಿದ ಚಿತ್ರವಲ್ಲ. ಈ ಹಿಂದೆ 'ಕ್ರೌಚಿಂಗ್ ಟೈಗರ್ ಹಿಡನ್ ಡ್ರ್ಯಾಗನ್' ಮತ್ತು 'ಬ್ರೋಕ್‌ಬ್ಯಾಕ್ ಮೌಂಟೇನ್' ಚಿತ್ರಗಳಿಗೆ ಆಸ್ಕರ್ ಪಡೆದಿದ್ದ ಆ್ಯಂಗ್ ಲೀ ಮೂಲತಃ ತೈವಾನ್ ದೇಶದವನು. ಹಲ್ಕ್ ಎಂಬ ಕಾಮಿಕ್ ಚಿತ್ರ ಬಿಟ್ಟರೆ ಹಾಲಿವುಡ್ ಮಟ್ಟಿಗೆ ಆ್ಯಂಗ್ ಲೀ ದೊಡ್ಡ ಹೆಸರೇನಲ್ಲ.

ಶುರುವಿನಲ್ಲಿ ಈ ಚಿತ್ರದ ನಿರ್ದೇಶನಕ್ಕೆ ಹಾಲಿವುಡ್‌ನ ಪ್ರತಿಷ್ಠಿತ ಟ್ವೆಂಟಿಯತ್ ಸೆಂಚುರಿ ಫಾಕ್ಸ್ ಕಂಪೆನಿ ಆಯ್ಕೆ ಮಾಡಿದ್ದು ಹೆಸರಾಂತ ಡೈರೆಕ್ಟರ್ ನೈಟ್ ಶ್ಯಾಮಲನ್ ಅನ್ನು. ಏಕೆಂದರೆ ಶ್ಯಾಮಲನ್‌ನ ಪೂರ್ವಿಕರು ಮೂಲತಃ ಪಾಂಡಿಚೇರಿಯವರೇ ಆಗಿದ್ದು ಆದರೆ ಶ್ಯಾಮಲನ್ 'ಲೇಡಿ ಇನ್ ದ ವಾಟರ್' ಚಿತ್ರದ ನಿರ್ಮಾಣದತ್ತ ಆಸಕ್ತಿ ವಹಿಸಿ ಲೈಫ್ ಆಫ್ ಪೈ ಬಗ್ಗೆ ನಿರಾಸಕ್ತನಾದ. ಚಿತ್ರದ ಕಥಾವಸ್ತುವೇ ಅನಿರೀಕ್ಷಿತ ಅಂತ್ಯದಲ್ಲಿ ಮುಗಿಯುತ್ತದೆ. ಆದ್ದರಿಂದ ಸಿನಿಮಾಕ್ಕಿದು ಸೂಕ್ತ ಕತೆಯೇ ಅಲ್ಲ ಎಂದು ಶ್ಯಾಮಲನ್ ತಿರಸ್ಕರಿಸಿದ.


ಆ ನಂತರ ಅಲ್ಫಾನ್ಸೋ ಕಾರೋನ್ ಎಂಬ ನಿರ್ದೇಶಕನಿಗೆ ಜವಾಬ್ದಾರಿ ವಹಿಸಿ ಕೊಟ್ಟರೆ ಆತನೂ ಅಸಾಧ್ಯವೆಂದು ಜಾರಿಕೊಂಡ. ತದನಂತರ ಜೀನ್ ಪಿಯರ್ರೆ ಜಾನೆಟ್ ಕೈಗೆ ನಿರ್ದೇಶನದ ಹೊಣೆ ಒಪ್ಪಿಸಲಾಯ್ತು. ಆತನೂ ಕೈಚೆಲ್ಲಿದ ನಂತರವೇ ನಿರ್ಮಾಪಕರು ಆ್ಯಂಗ್ ಲೀ ಯನ್ನು ಒಲ್ಲೈಸಿದ್ದು. ಈ ಹೊತ್ತಿಗಾಗಲೇ ಮೂವರು ಖ್ಯಾತ ಡೈರೆಕ್ಟರ್‌ಗಳು, ನಾಲ್ವರು ಸ್ಕ್ರೀನ್ ಪ್ಲೇರೈಟರ್‌ಗಳೂ ಲೈಫ್ ಆಫ್ ಪೈಗೆ ಕೈಹಾಕಿ ಅಸಾಧ್ಯವೆಂದು ಹಿಮ್ಮೆಟ್ಟಿ ಆಗಿತ್ತು, ಅಂತಿಮವಾಗಿ ಸವಾಲನ್ನು ಸ್ವೀಕರಿಸಿದ್ದು ಆ್ಯಂಗ್ ಲೀ!



ಡೇವಿಡ್ ಮ್ಯಾಗೀ ಎಂಬ ಚಿತ್ರಕಥಾ ರಚನೆಕಾರನ ಮೂಲಕ ಸ್ಕ್ರೀನ್ ಪ್ಲೇ ಬರೆಸಿದ ಆ್ಯಂಗ್ ಲೀ 2008 ರಲ್ಲಿ ನಿರ್ಮಾಣಕ್ಕಿಳಿದು ಚಿತ್ರ ಮುಗಿಸುವ ಹೊತ್ತಿಗೆ ನಾಲ್ಕು ವರ್ಷಗಳಾಗಿದ್ದವು. ಜೀವಂತ ಹುಲಿ ಹೇಗೆ ತಾನೇ ಕ್ಯಾಮರಾ ದೆದುರು ನಟಿಸಲು ಸಾಧ್ಯ? ಅದರಲ್ಲೂ ಪ್ರಾಣಿಗಳನ್ನು ಶೂಟಿಂಗ್‌ಗೆ ಬಳಸುವುದೇ ಭಾರತದಲ್ಲಿ ಶಿಕ್ಷಾರ್ಹ. ಅದಕ್ಕೆಂದು ವಿಷುವಲ್ ಎಫೆಕ್ಟ್ಸ್ ಕಂಪೆನಿಯಾದ R & H ಸ್ಟುಡಿಯೋಸ್‌ಗೆ ಕೋಟ್ಯಂತರ ರೂಪಾಯಿಗಳ ಹೊರಗುತ್ತಿಗೆ ವಹಿಸಲಾಗಿತ್ತು. ಕಂಪ್ಯೂಟರ್ ರಚಿತ ಹುಲಿಯನ್ನು ಸೃಷ್ಟಿಸಿ ಅದನ್ನು ಚಿತ್ರಕ್ಕೆ ಅಳವಡಿಸುವುದಕ್ಕೆಂದೇ ಒಂದು ವರ್ಷ ಕಾಲ ನೂರಾರು ಗ್ರಾಫಿಕ್ ಡಿಸೈನರುಗಳು ಹೆಣಗಬೇಕಾಯಿತು.

ಹಡಗು ಚಂಡಮಾರುತಕ್ಕೆ ಸಿಲುಕುವ ದೃಶ್ಯವನ್ನು ಚಿತ್ರೀಕರಿಸುವುದಕ್ಕೆಂದೇ ಆ್ಯಂಗ್ ಲೀಯ ಹುಟ್ಟೂರಾದ ತೈವಾನಿನ ಟಾಯ್‌ಚುಂಗ್ ನಗರದ ಪಾಳುಬಿದ್ದ 'ಶುಯಿನಾನ್' ವಿಮಾನ ನಿಲ್ದಾಣದ ತುಂಬ 1.7 ಮಿಲಿಯನ್ ಗ್ಯಾಲನ್ನುಗಳಷ್ಟು ನೀರು ತುಂಬಿಸಲಾಯಿತು. ಜೇಮ್ಸ್ ಕೆಮರೂನ್ ಟೈಟಾನಿಕ್‌ಗೆ ಫುಟ್‌ಬಾಲ್ ಸ್ಟೇಡಿಯಂ ಬಳಸಿದಂತೆ ನೀರು ತುಂಬಿದ್ದ ವಿಮಾನ ನಿಲ್ದಾಣದಲ್ಲಿ ಕೃತಕ ದೈತ್ಯ ಅಲೆಗಳನ್ನೆಬ್ಬಿಸಲಾಯ್ತು.

ಸಿನಿಮಾ ಪ್ರೇಕ್ಷಕರಿಗೆ ಇದ್ಯಾವುದೂ ಮುಖ್ಯವಲ್ಲ ನಿಜ. ಆದರೆ ಅದು ಕಟ್ಟಿಕೊಡುವ ಸಾಗರ ರೌದ್ರ, ಕಂಪ್ಯೂಟರ್ ಸೃಷ್ಟಿತ ವ್ಯಾಘ್ರ, ಕಡಲಾಳದ ಚಿತ್ತಾರ, ಚಂಡಮಾರುತದ ಭೀಕರತೆ ಮತ್ತು ಹಸಿವು- ಹುಲಿಯ ಸಂಘರ್ಷದ ಮೂಲಕ ಆವರಿಸುವ ದೈವ ಸಾಕ್ಷಾತ್ಕಾರ: ಇವೆಲ್ಲವೂ ಹೇಗೆ ಅಸಾಧ್ಯ ಶ್ರಮ ಮತ್ತು ಛಲದಿಂದಾಗಿ ಜೀವ ತಳೆಯುತ್ತವೆ ಎಂಬುದಕ್ಕೆ ಸಾಕ್ಷಿಯಾಗುತ್ತವೆ.



ಜಲಸಾಗರ, ಮೇಲೆ ನಿರಭ್ರ ಆಕಾಶ ಅದರೊಳಗೆ ಕೆಕ್ಕರಿಸುವ ಕಾರ್ಮೋಡ, ಇವುಗಳ ಮಧ್ಯೆ ಆ ಪುಟ್ಟದೋಣಿ ಮತ್ತು ಅದರೊಳಗೆ ಬಾಲಕ ಪೈ, ಜೊತೆಗೆ ಜೀಬ್ರಾ, ಚಿಂಪಾಂಜಿ, ಕುರ್ಕ ಮತ್ತೊಂದು ಹುಲಿರಾಯ!

ಅಲ್ಲಿಗೆ ಇಡೀ ಚಿತ್ರದ ವಸ್ತುವೇ ಡಾರ್ವಿನನ್ನ ವಿಕಾಸವಾದದ ಮೂಲ ತತ್ವವಾದ **struggle for existance** ಎಂದರೆ ಅಸ್ತಿತ್ವಕ್ಕಾಗಿ ಸಂಘರ್ಷದ ರೂಪ ಪಡೆಯುತ್ತದೆ. ಚಂಡಮಾರುತ ತಂದಿಟ್ಟ ಆಘಾತ. ಕ್ಷಣಕ್ಷಣಕ್ಕೂ ಮುಳುಗುವ ಆತಂಕ. ಜೊತೆಗೆ ದೋಣಿಗೆ ಹೊಕ್ಕ ಪ್ರಾಣಿಗಳ ಚೀರಾಟ. ಈ ಮಧ್ಯೆ ಗಾಬರಿಗೆ ಬಿದ್ದ ಕತ್ತೆ ಕಿರುಬ ಹಸಿವು ತಾಳಲಾರದೆ ಕಾಲು ಮುರಕೊಂಡು ದೋಣಿಗೆ ಬಿದ್ದಿದ್ದ ಜೀಬ್ರಾವನ್ನು ಕೊಂದು ಬಿಡುತ್ತದೆ. ನೋಡುನೋಡುತ್ತಿದ್ದಂತೆಯೇ ಕಂಗಾಲಾಗಿದ್ದ ಚಿಂಪಾಂಜಿಯನ್ನು ಕಚ್ಚಿ ಸಾಯಿಸುತ್ತದೆ. ಮೊದಲೇ ತನ್ನ ಮರಿಯನ್ನು ಹಡಗಿನ ಜೊತೆಗೇ ಕಳೆಕೊಂಡು ಥರಗುಡುತ್ತಿದ್ದ ಚಿಂಪಾಂಜಿಯನ್ನೂ ಹೇಸರಗತ್ತೆಯ ಸಮೇತ ಕತ್ತೆ ಕಿರುಬ ತಿಂದು ಹಾಕುತ್ತದೆ. ಅಷ್ಟರೊಳಗೆ ಹುಲಿ ನುಗ್ಗಿದ್ದೇ ಕತ್ತೆ ಕಿರುಬವನ್ನು ತಿಂದು ಮುಗಿಸಿದೆ.

ಅಂತಿಮವಾಗಿ ದೋಣಿಯಲ್ಲಿ ಉಳಿಯುವುದು 16ರ ಬಾಲಕ ಪೈ ಮತ್ತು ಬೆಂಗಾಲಿ ಹುಲಿ ರಿಚರ್ಡ್ ಪಾರ್ಕರ್ ಮಾತ್ರ. ಮತ್ತೆ ಅದೇ ಅಸ್ತಿತ್ವಕ್ಕಾಗಿ ಹೋರಾಟ ಶುರುವಾಗುತ್ತದೆ. ತಂದೆ, ತಾಯಿ, ಅಣ್ಣ, ಪ್ರಾಣಿಗಳೆಲ್ಲ ಹಡಗಿನ ಸಮೇತ ಮುಳುಗಿಹೋದ ಆಘಾತ. ಪವಾಡ ಸದೃಶವಾಗಿ ಸಾವಿನಿಂದ ಬಚಾವಾದ ಥುರಿತ, ಯಾವ ಕ್ಷಣಕ್ಕಾದರೂ ಹುಲಿ ತನ್ನನ್ನು ತಿಂದು ಬಿಡಬಹುದಾದ ಆತಂಕ. ಜೊತೆಗೆ ಹುಲಿಯ ಸಮೇತವೇ ದೋಣಿ ಮುಳುಗಬಹುದಾದ ಅಪಾಯ. ಅದು ಅಕ್ಷರಶಃ ಸಾವಿನ ಸನ್ನಿಧಿ. ಇದ್ದಕ್ಕಿದ್ದಂತೆ ಕಡಲಾಳದಿಂದ ನುಗ್ಗಿಬಂದ ತಿಮಿಂಗಿಲವೊಂದು ಮತ್ತೆ ದೋಣಿಯ ಮೇಲೆ ದಾಳಿಯಿಟ್ಟ ಫಲವಾಗಿ ದೋಣಿಯಲ್ಲಿದ್ದ ನೀರಿನ ಕ್ಯಾನ್‌ಗಳು, ಬಿಸ್ಕತ್ತು ಎಲ್ಲವೂ ನೀರು ಪಾಲಾಗುತ್ತದೆ.

ಉಳಿಯುವುದು ಸಾವಿನ ಧೂತನಾದ ಆ ಹುಲಿ, ಬಾಲಕ ಪೈ ಮತ್ತು ಹಸಿವು. ಪೈ ಬದುಕಬೇಕೆಂದರೆ ಒಂದೋ ಹುಲಿಯನ್ನು ಕೊಲ್ಲಬೇಕು ಅಥವಾ ಹುಲಿ ಬದುಕುಳಿಯಬೇಕೆಂದರೆ ಅದು ಪೈಯನ್ನು ತಿನ್ನಲೇಬೇಕು. ಇಂಥ ಸನ್ನಿವೇಶದಲ್ಲಿ ಆತನ ವಿವೇಚನೆ ಕೆಲಸ ಮಾಡುತ್ತದೆ. ಹುಲಿ ತನ್ನನ್ನು ತಿನ್ನದ ಹಾಗೆ ಪೈ ದೋಣಿಯಲ್ಲಿದ್ದ ಹಾಯಿಗೋಲುಗಳನ್ನೆಲ್ಲ ಒಂದಕ್ಕೊಂದು ಕಟ್ಟಿ ಪುಟ್ಟದೊಂದು ತೆಪ್ಪ ಮಾಡುತ್ತಾನೆ. ಅದಕ್ಕೆ ದೋಣಿಯಲ್ಲಿದ್ದ ಬೆಂಡು ಮತ್ತು ಟಯರ್‌ಗಳನ್ನು ಕಟ್ಟುತ್ತಾನೆ. ತಾನು ಅದರಲ್ಲಿ ಕೂತು ಮುಂದಿದ್ದ ದೋಣಿಗೆ ಅದರ ಹಗ್ಗ ಬಿಗಿಯುತ್ತಾನೆ.

ಹಾಗೆಂತ ಅಪಾಯ ತಪ್ಪಿದ್ದಲ್ಲ. ಯಾವ ಗಳಿಗೆಯಲ್ಲಾದರೂ ಹಸಿದ ಹುಲಿ ತೆಪ್ಪಕ್ಕೇ ದಾಳಿಯಿಟ್ಟು ತನ್ನನ್ನು ತಿನ್ನಬಹುದು. ಅದಕ್ಕೊಂದು ಪೈ ಮಾಡುವ ಉಪಾಯವೆಂದರೆ ಹುಲಿ ಹಸಿಯದಂತೆ ನೋಡಿಕೊಳ್ಳುವುದು. ಆತ ಬಾಲ್ಯದಲ್ಲಿ ಕಲಿತಿದ್ದ ಈಜು ಇಲ್ಲಿ ಪ್ರಯೋಜನಕ್ಕೆ ಬರುತ್ತದೆ. ಸಾಗರದಲ್ಲಿ ತೇಲಿಬರುವ ಮೀನುಗಳನ್ನು ಹಿಡಿಯಲೆತ್ನಿಸುತ್ತಾನೆ. ಪುಟ್ಟ ಬಲೆಯೊಂದನ್ನು ಇಳಿಬಿಟ್ಟು ದೈತ್ಯ ಮೀನೊಂದನ್ನು ಹಿಡಿದು ಕೊಲ್ಲುತ್ತಾನೆ. ಅದನ್ನು ಹುಲಿಗೆ ತಿನ್ನಿಸುವುದಕ್ಕೂ ಮುನ್ನ ಸಾಕ್ಷಾತ್ ವಿಷ್ಣುವೇ ಮತ್ಸ್ಯರೂಪದಲ್ಲಿ ಬಂದು ತನ್ನ ಪ್ರಾಣ ಉಳಿಸಿದನೆಂದು ದೇವರಿಗೆ ನಮಿಸುತ್ತಾನೆ. ಈ ಮಧ್ಯೆ ಸಾಗರದಾಳದ ಹಾರುವ ಮೀನುಗಳ ಹಿಂಡೊಂದು ದೋಣಿಯ ಮೇಲೆ ದಾಳಿಯಿಡುತ್ತವೆ. ಹಾಗೆ ದಾಳಿಯಿಟ್ಟ ಹಾರು ಮೀನುಗಳ ಪೈಕಿ ಒಂದಷ್ಟು ದೋಣಿಯೊಳಕ್ಕೆ ಬಿದ್ದಿದ್ದರಿಂದಾಗಿ ಒಂದೆರಡು ದಿನದ ಮಟ್ಟಿಗೆ ಹುಲಿಯ ಹಸಿವು ಇಂಗುತ್ತದೆ ಯಾದರೂ ಮೂರನೇ ದಿನಕ್ಕೆ ಮತ್ತದೇ ರಣಹಸಿವು ಆವರಿಸುತ್ತದೆ.

ಅಲ್ಲಿಗೆ ಪೈ ಕಂಡುಕೊಳ್ಳುವ ಉಪಾಯವೆಂದರೆ ಹುಲಿ ತನ್ನನ್ನು ತಿನ್ನದಂತೆ ಬಚಾವಾಗಬೇಕೆಂದರೆ ತಾನು ಮೀನು ಹಿಡಿದು ಅದರ ಹಸಿವು ತಣಿಸಬೇಕು ಮತ್ತು ಅದನ್ನು ಪಳಗಿಸಬೇಕು. ಘರ್ಜಿಸುತ್ತ ನುಗ್ಗಿಬರುವ ಹುಲಿಯನ್ನು ದೋಣಿಯಲ್ಲಿದ್ದ ಭರ್ಜಿಯಿಂದ ತಿವಿಯಲೆತ್ನಿಸುತ್ತಾನೆ. ಚೂಪಾದ ಕೋಲಿನಿಂದ ಚುಚ್ಚಲು ಹೋಗುತ್ತಾನೆ. ಮೀನಿನ ಮಾಂಸವನ್ನು ಚೂರು ಮಾಡಿ ದೋಣಿಯ ಬೇರೆ ಬೇರೆ ಭಾಗಕ್ಕೆಸೆದು ಪಳಗಿಸಲೆತ್ನಿಸುತ್ತಾನೆ.

→16

ಶೆಟ್ಟರ್ ಸರ್ಕಾರದ ಹಿಟ್ಲರ್ ಆಡಳಿತ
ಸುವರ್ಣ ಸೌಧಕ್ಕೆ ಮಾದಿಗರ ರಕ್ತತರ್ಪಣ!

ಅಂತೂಇಂತೂ ಬಿಜೆಪಿ ಸರ್ಕಾರ ತಾನೆಷ್ಟು ದಲಿತ ವಿರೋಧಿ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಮೊನ್ನೆ ಬೆಳಗಾವಿಯ ಸುವರ್ಣ ಸೌಧದ ಅಂಗಳದಲ್ಲಿ ಮಾದಿಗರ ಮೈಮೇಲೆ ಬಿದ್ದ ಪೊಲೀಸರ ಒಂದೊಂದು ಲಾಠಿಯ ಏಟೂ ಬಿಜೆಪಿ ದೌರ್ಜನ್ಯದ ಪ್ರತೀಕಗಳಂತಿದ್ದವು. ತಮ್ಮ ಸಾಂವಿಧಾನಿಕ ಹಕ್ಕಿನ ಅನುಷ್ಠಾನಕ್ಕಾಗಿ ನ್ಯಾಯಸಮ್ಮತ ಹೋರಾಟಕ್ಕಿಳಿದಿದ್ದ ಅನಾಮತ್ತು ಐದಾರು ಸಾವಿರ ಮಾದಿಗರನ್ನು ಹೆಂಗಸರು, ಮಕ್ಕಳೆನ್ನದಂತೆ ಬೀದಿಬೀದಿಯಲ್ಲಿ ಓಡಾಡಿಸಿ ಬಡಿದ ಪೊಲೀಸರ ಶೌರ್ಯ(?)ದ ಹಿಂದೆ ಚಿಡ್ಡಿಗಳ ವಿಕೃತ ಸಮ್ಮತಿಯಿರುವುದಂತೂ ಸುಳ್ಳಲ್ಲ.

ಅನುಮಾನದಲ್ಲಿದ್ದ ಪ್ರತಿಭಟನಾಕಾರರು ಗೃಹಮಂತ್ರಿಯ ಸಂಧಾನಕ್ಕೆ ಒಪ್ಪದೆ ಖುದ್ದು ಮುಖ್ಯಮಂತ್ರಿ ಜಗದೀಶ್ ಶೆಟ್ಟರ್‌ರನ್ನು ಕರೆಸಿ ಭರವಸೆ ನೀಡಲು ಒತ್ತಾಯಿಸಿದರು. ಇಲ್ಲವಾದಲ್ಲಿ ಬಲವಂತವಾಗಿ ಅಧಿವೇಶನಕ್ಕೆ ಪ್ರವೇಶಿಸುವ ತಮ್ಮ ಯೋಜನೆಯನ್ನು ಖುಲಂಖುಲ್ಲಾ ಮಂತ್ರಿಗೆ ಮನವರಿಕೆ ಮಾಡಿಕೊಟ್ಟರು.

ಶೆಟ್ಟರ್ ಸಾಹೇಬರು ಅದೇ ಸೌಧದಲ್ಲಿದ್ದರು. ಹೊರಬಂದು ಜನರೊಂದಿಗೆ ಮಾತನಾಡಲು ಅವರಿಗೆ ಅಂತ ಯಾವ ಘನಂದಾರಿ ಅಡ್ಡಿಯೂ ಇರಲಿಲ್ಲ. ಕಾನೂನು ಸುವ್ಯವಸ್ಥೆ ಹಾಳಾಗುವ ಅಪಾಯ ಇದ್ದಾಗ ಅದು ಅವರ

ಅವರನ್ನು ಬಡಿಯುತ್ತಲೇ ವ್ಯಾನಿಗೆ ತುಂಬಿಸಿಕೊಂಡಿದ್ದರು. ವ್ಯಾನಿನಲ್ಲೂ ಅದೇ ಪ್ರತಾಪ. ಸರಿ ನಾವಿನ್ನು ಒಂದು ಕಡೆ ಕೂತು ಪ್ರತಿಭಟನೆ ಮಾಡುತ್ತೇವೆಂದು ಕೂತವರನ್ನೂ ಎಳೆದೆಳೆದು ಬಡಿಯುತ್ತಿದ್ದ ಪೊಲೀಸರು ಅಕ್ಷರಶಃ ನರಹಂತಕರಂತೆ ಕಂಗೊಳಿಸಿದ್ದರು. ಇದಕ್ಕೆಲ್ಲ ಅವರು ಕೊಡುವ ಕಾರಣ ಒಂದೇ, ಅದು ಎಸ್ಪಿ ಸಂದೀಪ್ ಪಾಟೀಲರ ರಕ್ತ! ಹಾಗಿದ್ದರೆ ನೂರಾರು ಮಾದಿಗರ ರಕ್ತಕ್ಕೆ ಬೆಲೆಯೇ ಇಲ್ಲವೆ? ಅಥವಾ ಸಂದೀಪ್ ಪಾಟೀಲರ ರಕ್ತದಲ್ಲಿ ಇವರೆಲ್ಲರಿಗಿಂತ ವಿಶೇಷವಾದದ್ದೇನಾದರೂ ಇದೆಯೇ? ಹಿಂಸೆಗೆ ಪ್ರತಿಹಿಂಸೆಯೇ ಉತ್ತರ ಎನ್ನುವ ಪಾಠವನ್ನು ಪೊಲೀಸರೆ ಬೋಧಿಸುವುದಾದರೆ ಸಾಮಾನ್ಯ ಜನರ ಹೊಡಿಬಡಿಗಳನ್ನು ಪ್ರಶ್ನಿಸುವ ಸಾಂವಿಧಾನಿಕ ಹಕ್ಕು ಇವರಿಗೆ ಬೇಕೆ?


ಇವಕ್ಕೆಲ್ಲ ಉತ್ತರ ಕೊಡಬೇಕಾದ ಬಿಜೆಪಿ ಸರ್ಕಾರ ತನ್ನ ಕುರ್ಚಿ ಉಳಿಸಿಕೊಳ್ಳುವ ಸಲುವಾಗಿ ತಂತ್ರಗಾರಿಕೆಯಲ್ಲಿ ಬ್ಯುಸಿಯಾಗಿದೆ. ಸುಮಾರು ನೂರಕ್ಕೂ ಹೆಚ್ಚು ಜನರನ್ನು ಲಾಕಪ್ಪಿಗೆ ತಳ್ಳಿದ ಪೊಲೀಸರು ಅಲ್ಲೂ ತಮ್ಮ ಸೇಡನ್ನು ತೀರಿಸಿಕೊಳ್ಳಲು ಮುಂದಾಗಿದ್ದರು. ನೂರಾರು ಕಾರ್ಯಕರ್ತರು ಬೆಳಗಾವಿ ಸರ್ಕಾರಿ ಆಸ್ಪತ್ರೆಯಲ್ಲಿ ಇವತ್ತಿಗೂ ಬ್ಯಾಂಡೇಜ್ ಸುತ್ತಿಕೊಂಡು ಗಂಭೀರ ಸ್ಥಿತಿಯಲ್ಲಿ ನರಳಾಡುತ್ತಿದ್ದಾರೆ. ಶತಾಯುಗತಾಯ ಮಾದಿಗ ದನಿಯ ಹುಟ್ಟಡಗಿಸಬೇಕೆಂಬ ಫರ್ಮಾನು ಸ್ವೀಕರಿಸಿದ್ದ ಪೊಲೀಸರು ಅವತ್ತಿನ ದಿನ ನಡುರಾತ್ರಿಯವರೆಗೂ ಕೆಎಸ್ಸಾರ್ಪಿ



ನ್ಯಾಯಮೂರ್ತಿ ಸದಾಶಿವ ಆಯೋಗ ರಾಜ್ಯ ಸರ್ಕಾರದ್ದೇ ಕೂಸು. ಮಾದಿಗರಿಗೆ ಅಂತ ಇರುವ ಶೇ.18 ರಷ್ಟು ಮೀಸಲಾತಿಯಲ್ಲಿ ನಿಜಕ್ಕೂ ಹಿಂದುಳಿದಿರುವ, ಹಿಂದುಳಿದ ಮುಂದುವರೆದವರಿಂದ ಹಿಂದುಳಿಯುತ್ತಲೇ ಬಂದಿರುವ ಅಸಮಾನತೆಯನ್ನು ಸರಿಪಡಿಸಿ ಮೀಸಲಾತಿಯ ಉದ್ದೇಶವನ್ನು ಸಾಕಾರಗೊಳಿಸುವ ಸಲುವಾಗಿ ಮಾದಿಗ ಮೀಸಲಾತಿಯಲ್ಲಿ ಒಳ ಮೀಸಲಾತಿಗೆ ಶಿಫಾರಸ್ಸು ಮಾಡಿತ್ತು. ಆದರೆ ಯಾವತ್ತಿಗೂ ದಲಿತ ಸಮಾನತೆ, ಏಳಿಗೆಗಳನ್ನು ಬಯಸದ ಬಿಜೆಪಿ ಸರ್ಕಾರ ಬೇಕುಬೇಕಂತಲೇ ಆಯೋಗದ ವರದಿಯನ್ನು ಅಧಿವೇಶನದಲ್ಲಿ ಮಂಡಿಸಿ ಅದಕ್ಕೊಂದು ರೂಪ ನೀಡಲು ಹಿಂದೇಟು ಹಾಕುತ್ತಿದೆ. ವರದಿ ಬಂದಮೇಲೆ ಎರಡು ಅಧಿವೇಶನಗಳು ನಡೆದರೂ ಸರ್ಕಾರ ಅದನ್ನು ಪ್ರಸ್ತಾಪಿಸುವ ಗೋಜಿಗೇ ಹೋಗಿಲ್ಲ. ಕಳೆದ ಬಾರಿ ಸದಾಶಿವ ಆಯೋಗವನ್ನೇ ನೆಪ ಮಾಡಿಕೊಂಡು ಸಾಲಿಡ್ಡಾಗಿ ದಲಿತರ, ಅದರಲ್ಲೂ ಮಾದಿಗರ ಓಟು ಗಿಟ್ಟಿಸಿಕೊಂಡ ಬಿಜೆಪಿ ವಿಳಂಬದ ಮೂಲಕ ವಿಶ್ವಾಸದ್ರೋಹ ಮಾಡುತ್ತಿರುವುದನ್ನು ಪ್ರಶ್ನಿಸುವುದೇ ಅವತ್ತಿನ ಮುತ್ತಿಗೆಯ ಉದ್ದೇಶವಾಗಿತ್ತು.


ಮಾದಿಗ ಮೀಸಲಾತಿ ಹೋರಾಟ ಸಮಿತಿ, ಮಾದಿಗ ದಂಡೋರ, ದಲಿತ ಸಂಘರ್ಷ ಸಮಿತಿ, ಮಾದಿಗ ಹಿತರಕ್ಷಣಾ ಸಮಿತಿ ಮುಂತಾದ ಹತ್ತಾರು ಸಂಘಟನೆಗಳ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಅವತ್ತು ಬೆಳಗಾವಿಗೆ ರಾಜ್ಯದ ವಿವಿಧೆಡೆಯಿಂದ ಬಂದಿಳಿದಿದ್ದರು. ಮನವಿ ಕೊಟ್ಟೂ ಕೊಟ್ಟೂ ಸಾಕಾಗಿಹೋಗಿದ್ದ ಅವರು ಈ ಬಾರಿ ಅಧಿವೇಶನದಲ್ಲಿ ವರದಿಯನ್ನು ಮಂಡಿಸಿ ಇಲ್ಲವೇ ನಮ್ಮನ್ನೇ ಅಧಿವೇಶನಕ್ಕೆ ಹಾಜರಾಗಲು ಬಿಡಿ ಎಂಬ ಹತಾಶೆಯ ಸ್ಪಷ್ಟ ನಿಲುವು ಅವರದಾಗಿತ್ತು. ರಾಣಿ ಚೆನ್ನಮ್ಮ ವೃತ್ತದಿಂದ ಆರಂಭವಾದ ಐದು ಸಾವಿರಕ್ಕೂ ಹೆಚ್ಚಾದ ಒಂದು ತಂಡ ಸುವರ್ಣ ವಿಧಾನಸೌಧದತ್ತ ಧಾವಿಸುತ್ತಿದ್ದಂತೆಯೇ, ಗೃಹ ಸಚಿವ ಅಶೋಕ್ ಸಮ್ಮುಖದಲ್ಲಿ ಸಂಪೂರ್ಣ 'ಕಾರ್ಯಾಚರಣೆ'ಯ ನೀಲನಕ್ಷೆ ತಯಾರಾಗಿತ್ತು.

ಯೋಜನೆ ಎಷ್ಟರಮಟ್ಟಿಗೆ ವ್ಯವಸ್ಥಿತವಾಗಿತ್ತೆಂದರೆ ಪ್ರತಿದಿನ ಇರುವುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರು, ವಿಶೇಷ ರಕ್ಷಣಾ ತುಕಡಿಗಳು ಬ್ಯಾರಿಕೇಡ್ ಸಮೇತ ಸಜ್ಜಾಗಿ ನಿಂತಿದ್ದರು. ಮೇಲ್ನೋಟಕ್ಕೆ ಭಾರೀ ಸಂಖ್ಯೆಯ ಜನರನ್ನು ನಿಯಂತ್ರಿಸುವ ಹೆಚ್ಚುವರಿ ಭದ್ರತೆಯಂತೆ ಸನ್ನಿವೇಶ ಕಂಡುಬರುತ್ತಿದ್ದರೂ 'ಭರ್ಜರಿ ಬೇಟೆ'ಯ ತಾಲೀಮು ನಡೆಸಿದ ಭಾವ ಪೊಲೀಸ್ ಪೇದೆಗಳಲ್ಲಿ ಎದ್ದು ಕಾಣುತ್ತಿತ್ತು. ಪ್ರತಿಭಟನಾಕಾರರು ಸೌಧದ ಮೊಗಸಾಲೆಗೆ ಆಗಮಿಸುತ್ತಿದ್ದಂತೆಯೇ ಜವಾಬ್ದಾರಿ ಕಳೆದುಕೊಳ್ಳುವ ಸಲುವಾಗಿ ಹೊರಬಂದ ಗೃಹ ಮಂತ್ರಿ ಅಶೋಕ್ ಮತ್ತದೇ ಧಾಟಿಯಲ್ಲಿ "ಮನ್ವಿ ಪತ್ರ ಕೊಟ್ಟು ಹೋಗಿ, ನೋಡೋಣ" ಎಂಬರ್ಥದ ಉಡಾಫೆಯ ಸಂಧಾನಕ್ಕೆ ಮುಂದಾಗಿದ್ದ. ಇದಂತೂ ಈ ಸರ್ಕಾರದ ಕೊನೇ ಅಧಿವೇಶನ, ಈಗ ಬಿಟ್ಟರೆ ಮತ್ತೊಂದು ಸರ್ಕಾರ ಬಂದು ಅದಕ್ಕೆ ಮೊದಲಿನಿಂದ ಎಲ್ಲವನ್ನೂ ಮನವರಿಕೆ ಮಾಡಿಕೊಟ್ಟು ಈ ಹಂತಕ್ಕೆ ತರುವ ವೇಳೆಗೆ ಆಯೋಗ ಜೀವಂತವಾಗಿರುತ್ತೋ? ಇಲ್ಲವೋ? ಎನ್ನುವ



ಮೊದಲ ಕರ್ತವ್ಯ. ಆದರೆ ಸರ್ಕಾರದ ಯೋಜನೆಯೇ ಬೇರೆ ಇತ್ತು. ಅಪವಾದ ತಪ್ಪಿಸಿಕೊಳ್ಳಲು ಗೃಹಮಂತ್ರಿ ಹೊರಬಂದು ನೆರೆದಿದ್ದವರ ಆಕ್ರೋಶವನ್ನು ಉದ್ರಿಕ್ತಗೊಳಿಸಿ ಹೋಗಿದ್ದರಷ್ಟೆ. ಅಶೋಕನ ಹೇಳಿಕೆ, ಕೇಳಿಕೆಗಳಲ್ಲಿ ನಿರ್ಲಕ್ಷ್ಯವಿದ್ದದ್ದು ಸ್ಪಷ್ಟವಾಗುತ್ತಿದ್ದಂತೆಯೇ ಪ್ರತಿಭಟನಕಾರರು ಪೊಲೀಸರ ಬ್ಯಾರಿಕೇಡ್‌ಗಳನ್ನು ಕಿತ್ತು ಒಳನುಗ್ಗುವ ಪ್ರಯತ್ನಕ್ಕೆ ಮುಂದಾದರು. ತಳಮಳಿಸುತ್ತಿದ್ದ ಪೊಲೀಸರ ಲಾಠಿಗಳು ಸಣ್ಣಗೆ ಬಿಸಾಡಲು ಶುರು ಮಾಡಿದವು.

ಆ ಮೂಲಕ ಘರ್ಷಣೆಯನ್ನು ವಿದ್ಯುಕ್ತವಾಗಿ ಶುರು ಮಾಡಿದ್ದೇ ಪೊಲೀಸರು. ಅಷ್ಟರಲ್ಲೇ ಗುಂಪಿನಿಂದ ಚಿಮ್ಮಿ ಬಂದ ಒಂದೆರಡು ಕಲ್ಲುಗಳು ಪೊಲೀಸ್ ಉಸ್ತುವಾರಿ ವಹಿಸಿದ್ದ ಎಸ್.ಪಿ ಸಂದೀಪ್ ಪಾಟೀಲ್‌ರ -ಹಣೆಗೆ ತಗುಲಿದವು. ಖಾಕಿ ಬಟ್ಟೆಯ ಮೇಲೆ ಒಂದೆರಡು ರಕ್ತದ ಹನಿಗಳು ಹರಿದಿದ್ದೇ ತಡ ಪೂರ್ವ ನಿಯೋಜಿತದಂತೆ ಲಾಠಿ ಚಾರ್ಜ್‌ಗೆ ಅಧಿಕೃತ ಆದೇಶ ಸಿಕ್ಕೇ ಬಿಟ್ಟಿತು. ಮುಂದೆ ನಡೆದದ್ದೆಲ್ಲ ಪೊಲೀಸ್ ಪರಾಕ್ರಮ!



ಪೊಲೀಸರ ಲಾಠಿಯ ಬಿರುಸುಗಳಲ್ಲಿ ಜನರನ್ನು ಚದುರಿಸಬೇಕೆನ್ನುವ ಉದ್ದೇಶಕ್ಕಿಂತ ಸೇಡಿನ ಯಾವುದೋ ಆದಮ್ಯ ಆಕ್ರೋಶವಿತ್ತು. ಅವರೆಲ್ಲ ತಮ್ಮ ಜನ್ಮಜನ್ಮದ ಶತ್ರುಗಳೆಂಬಂತೆ ದಲಿತರನ್ನು ನಡುಬೀದಿಗಳಲ್ಲಿ ಓಡಾಡಿಸಿ ಹೊಡೆದರು. ಹೊರಗಡೆ ಈ ಪರಿ ರಣಾಕೇಕೆ ನಡೆಯುತ್ತಿದ್ದರೆ ಮೂರು ಮುಕ್ಕಾಲು ಅಡಿ ದೂರದಲ್ಲಿ ಯಾವೊಬ್ಬ ಮಂತ್ರಿ ಅಪ್ಪಿತಪ್ಪಿಯೂ ಅತ್ತ ಇಣುಕಲೇ ಇಲ್ಲ. ಪೊಲೀಸರಿಗೆ ರವಾನೆಯಾಗಿದ್ದ ಸಂದೇಶ ಅದೆಷ್ಟು ಗಡುಸಾಗಿತ್ತೆಂದರೆ ಪ್ರತಿಭಟನಾಕಾರರನ್ನು ಬಂಧಿಸಿ ಕರೆದೊಯ್ಯುವಾಗಲೂ

ಬಸ್‌ಸ್ಟ್ಯಾಂಡು ಸೇರದಂತೆ ನಗರದಿಂದ ಹೊರ ಹೋಗುತ್ತಿದ್ದ ಪ್ರತಿಯೊಂದು ವಾಹನಗಳನ್ನು ತಡೆದು ಅದರಲ್ಲಿ ಮಾದಿಗ ಹೋರಾಟಗಾರರೇನಾದರು ಸಿಕ್ಕಾರೆಯೇ ಎಂದು ತಪಾಸಣೆ ನಡೆಸಿದರು. ಮಾದಿಗರ ಬ್ಯಾನರ್ ಕಟ್ಟಿಕೊಂಡ ವಾಹನಗಳ ಮೇಲೂ ಪೊಲೀಸ್ ಲಾಠಿಗಳು ವಿಜೃಂಭಿಸಿದವು. ಪ್ರತಿಭಟನಾಕಾರರ ಸುಮಾರು 120ಕ್ಕೂ ವಾಹನಗಳು ಪೊಲೀಸರಿಂದ ಜಖಂ ಆಗಿವೆ. ಅಷ್ಟಕ್ಕೂ ಅವ್ಯಾವುವೂ ಅವರ ಸ್ವಂತ ವಾಹನಗಳಲ್ಲ, ಪ್ರತಿಭಟನೆಗೆ ಕಾರ್ಯಕರ್ತರನ್ನು ಕರೆತರಲು ಗೊತ್ತುಮಾಡಿಕೊಂಡಿದ್ದ ಬಾಡಿಗೆ ವಾಹನಗಳು. ಬಿಜೆಪಿ ಸರ್ಕಾರದ 'ಪ್ರಜಾಪ್ರಭುತ್ವ' ಧೋರಣೆಯ ಮೇಲೆ ನಂಬಿಕೆಯಿಟ್ಟು ಅಲ್ಲಿಯವರೆಗೆ ಹೋದ ತಪ್ಪಿಗೆ ಬಾಡಿಗೆ ವಾಹನದ ದುರಸ್ತಿ ಹೊರೆಯ ಭಕ್ಷೀಸು ಸಿಕ್ಕಂತಾಗಿದೆ ಅಷ್ಟೆ. ಅವತ್ತಿನ ಮಟ್ಟಿಗೆ ದಂಡೋರದ ಮಾದಿಗರೆಲ್ಲರು ಪೊಲೀಸರ ಪಾಲಿಗೆ ಅಕ್ಷರಶಃ ಟೆರರಿಸ್ಟುಗಳಂತೆ ಕಂಡುಬಂದದ್ದು ವಿಪರ್ಯಾಸವೇ ಸರಿ.

ದಲಿತ ಸ್ನೇಹಿ ಸ್ಲೋಗನ್ ಮೂಲಕ ಅಧಿಕಾರ ಹಿಡಿದ ಬಿಜೆಪಿ ತನ್ನ ಕಟ್ಟಕಡೆಯ ದಿನಗಳಲ್ಲಿ, ಅದೂ ಕರ್ನಾಟಕದ ನೆತ್ತಿಯಂತಿರುವ ಬೆಳಗಾವಿಯಲ್ಲಿ ಆರೆಸ್ಸೆಸ್‌ನ ಸೈದ್ಧಾಂತಿಕ ಚಡ್ಡಿ ತೊಟ್ಟು ತನ್ನ ಲಾಠಿ ಬೀಸಿದೆ. ತಮ್ಮ ನ್ಯಾಯಸಮ್ಮತ ಹಕ್ಕಿಗಾಗಿ ಅಂಗಲಾಚುತ್ತಾರೆ, ಸಮಾನತೆಯ ಕನಸಿಗಾಗಿ ಹಂಬಲಿಸುತ್ತಾರೆ ಎಂಬ ಕಾರಣಕ್ಕಾಗಿ ದಲಿತರನ್ನು ಮೊದಲಿನಿಂದಲೂ ದ್ವೇಷಿಸುತ್ತಾ ಬಂದಿರುವ ಬಿಜೆಪಿಯ ನೈಜಬಣ್ಣ ಬಯಲು ಮಾಡಲು ಸುವರ್ಣ ಸೌಧ ನೆತ್ತರುಮಯ ಆಗಬೇಕಾಯಿತು.

'ನಾವು ದಲಿತರ ಮೇಲಿನ ಈ ಪೊಲೀಸ್ ದೌರ್ಜನ್ಯವನ್ನು ಖಂಡಿಸುತ್ತೇವೆ' ಎಂಬ ಔಪಚಾರಿಕ ಮಾತಿಗಷ್ಟೆ ತಮ್ಮ ದಲಿತ ಒಲೈಕೆಯನ್ನು ಸೀಮಿತಗೊಳಿಸಿದ ವಿರೋಧ ಪಕ್ಷಗಳೂ ಸಹ ಸದಾಶಿವ ಆಯೋಗದ ವರದಿಯ ಬೇಡಿಕೆಯನ್ನ ಅಧಿವೇಶನದಲ್ಲಿ ಪ್ರಸ್ತಾಪಿಸಲಿಲ್ಲ. ತಮ್ಮ ಮೇಲಿನ ದಬ್ಬಾಳಿಕೆಯನ್ನು ಖಂಡಿಸಲಿ ಎಂದು ಯಾವ ಮಾದಿಗರೂ ಅಲ್ಲಿ ಸೇರಿರಲಿಲ್ಲ. ಅವರ ಬೇಡಿಕೆ ಒಂದೇ: "ಸದಾಶಿವ ಆಯೋಗದ ವರದಿಯನ್ನು ಚರ್ಚೆಗೆ ತೆಗೆದುಕೊಳ್ಳಿ." ನಮ್ಮ ರಾಜಕೀಯ ಪಕ್ಷಗಳು ಅದನ್ನಾದರು ಮಾಡಿದರೆ ಬೆಳಗಾವಿಯ ಬೀದಿಬೀದಿಯಲ್ಲಿ ಚೆಲ್ಲಿದ ದಲಿತರ ರಕ್ತಕ್ಕಾದರೂ ಬೆಲೆ ಸಲ್ಲಿಸಿದಂತಾಗುತ್ತದೆ.

-ಗಿರೀಶ್ ತಾಳಿಕಟ್ಟೆ





ಧರ್ಮಸ್ಥಳ ಎಂದರೆ ಹೆಗ್ಗಡೆ ಬಳಗದ ಸರ್ವತಂತ್ರ ಸ್ವತಂತ್ರ ದೇಶವಿದ್ದಂತೆ. ಈ ಪ್ರದೇಶದಲ್ಲಿ ನಡೆಯುವ ಭೂಕಬಳಿಕೆ, ತೆರಿಗೆ ವಂಚನೆ, ಆತ್ಮಹತ್ಯೆ, ಅತ್ಯಾಚಾರ, ಕೊಲೆ ಕೇಸುಗಳನ್ನು ತನಿಖೆ ಮಾಡುವವರೇ ಇಲ್ಲದಂತಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಧರ್ಮಸ್ಥಳ ಮತ್ತು ಉಜಿರೆಯ ಆಸುಪಾಸಿನಲ್ಲಿ ಬರೋಬ್ಬರಿ 434 ಆತ್ಮಹತ್ಯೆ 11 ಕೊಲೆ ಪ್ರಕರಣಗಳು ಸಂಭವಿಸಿವೆ. ಆ ಪಟ್ಟಿಗೆ ಇತ್ತೀಚೆಗೆ ಸೇರ್ಪಡೆಯಾದದ್ದು ಸೌಜನ್ಯ ಎಂಬ ಹುಡುಗಿ. ಆಕೆಯ ಮೇಲೆ ಬರ್ಬರವಾಗಿ ರೇಪ್ ಮತ್ತು ಮರ್ಡರ್ ನಡೆದಿತ್ತು. ಆಕೆಯ ಸಾವೂ ಸೇರಿದಂತೆ ಇಲ್ಲಿ ನಡೆದಿರುವ ಇತರ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಇಡೀ ಪ್ರಾಂತ್ಯದ ಜನರು ಕಳೆದ ಎರಡು ತಿಂಗಳುಗಳಿಂದ ಹೋರಾಟ ಮಾಡುತ್ತಿದ್ದಾರೆ. ಸೌಜನ್ಯಳ ಅತ್ಯಾಚಾರ ಮತ್ತು ಕೊಲೆ ಅಲ್ಲದೆ ಈ ಕ್ಷೇತ್ರದಲ್ಲಿ ನಡೆಯುತ್ತಿರುವ ಇತರ ಲೂಟಿ, ದಂಧೆ, ವಂಚನೆಯ ಕರಾಮತ್ತಿನ ಕತೆ ಇಲ್ಲಿದೆ...

■ನಹುಷ

ಧರ್ಮಸ್ಥಳ 'ದೇಶ'ದ ದಗಲುಬಾಜಿ ದಂಧೆಗಳು!!

ಧರ್ಮಸ್ಥಳ ಎಂದರೆ ಹೆಗ್ಗಡೆ ಬಳಗದ ಸರ್ವತಂತ್ರ ಸ್ವತಂತ್ರ ದೇಶವಿದ್ದಂತೆ! ಇಲ್ಲಿ ವೀರೇಂದ್ರ ಹೆಗ್ಗಡೆ ಎಂಬ ಸ್ವಯಂಘೋಷಿತ ಧರ್ಮಾಧಿಕಾರಿ ವಂಶಸ್ಥರದೇ ಕಾನೂನು-ಕಟ್ಟಳೆ, ರೀತಿ-ನೀತಿ. ಆಡಳಿತಗಾರರಿಗೆ ಮಂಜುನಾಥ ಸ್ವಾಮಿ ಎಂಬ ದೇವರೇ ಆಡಳಿತ ಲಾಂಛನ. ಅಮಾಯಕ ಜನರ ಮೂಢನಂಬಿಕೆ, ದೈವ ಭೀತಿ, ಆಣೆ- ಪ್ರಮಾಣದ ಈರ್ಷೆಯ ರಿವಾಜುಗಳೇ ದೊರೆ ಪರಿವಾರಕ್ಕೆ ಬಿಜಿನೆಸ್ ಬಂಡವಾಳ. ಈಗೀಗ ಈ ಸಾಮ್ರಾಜ್ಯದ ಧಾರ್ಮಿಕ ದೌರ್ಜನ್ಯ, ಧಾರ್ಮಿಕ ದಾಸ್ಯ, ಧಾರ್ಮಿಕ ದಂಧೆ ಮಹಾತ್ಮೆಗಳು ಸಾಲುಸಾಲಾಗಿ ಅನಾವರಣ ಆಗುತ್ತಿದೆ.

ಯಾವಾಗ ಪಾಪದ ಹುಡುಗಿ ಸೌಜನ್ಯಳ ರೇಪ್ ಮತ್ತು ಮರ್ಡರ್ ದೇವರನಾಡಿನಲ್ಲಿ ಆಯ್ತೋ, ಆ ಕ್ಷಣದಲ್ಲೇ ಹೆಗ್ಗಡೆ ಬಳಗದ ಪಾಪದ ಕೊಡವೂ ತುಂಬಿಕೊಂಡು ಬಟ್ಟಿದೆ. ಧರ್ಮಸ್ಥಳ 'ದೇಶ'ದಲ್ಲಿ ಲಾಗಾಯ್ತಿನಿಂದ ನಡೆಯುತ್ತಿರುವ ಲೂಟಿ, ಲಫಡಾ, ಲಂಪಟ ಕಾರ್ಯಾಚರಣೆ ಬಗ್ಗೆ ಈಗ ದೊಡ್ಡ ಮಟ್ಟದ ಚರ್ಚೆ ಇಡೀ ಬೆಳ್ತಂಗಡಿ ತಾಲ್ಲೂಕಲ್ಲಿ ಭುಗಿಲೆದ್ದಿದೆ. ಇದೀಗ ನಿಧಾನಕ್ಕೆ ಜಿಲ್ಲೆ- ರಾಜ್ಯಕ್ಕೆ ಪಸರಿಸುತ್ತಿದೆ. ಕೋಟ್ಯಂತರ ರೂ. ದೇಣಿಗೆ-ಕಾಣಿಕೆಗಳ ಧರ್ಮಸ್ಥಳ ದೇವಳದ ನೈಜ ವರಮಾನ ಮರೆಮಾಚುವುದು, ಬೋಗಸ್ ದಾನ-ಧರ್ಮ, ಕುಪ್ರಸಿದ್ಧ ಗ್ರಾಮೀಣಾಭಿವೃದ್ಧಿ ಯೋಜನೆ, ಎನ್‌ಜಿಓ ಹೆಸರಲ್ಲಿ ಮೀಟರ್ ಬಡ್ಡಿ ಫೈನಾನ್ಸ್ ವ್ಯವಹಾರ, ಕಂಡ-ಕಂಡ ನೆಲ ನುಂಗುವ ಭೂಮಾಫಿಯಾ ಮಸಲತ್ತು, ಲಾಡ್ಜ್-ಶಾಪಿಂಗ್ ಕಾಂಪ್ಲೆಕ್ಸ್, ವಾಣಿಜ್ಯೋದ್ಯಮ, ತೆರಿಗೆ ವಂಚನೆ, ಹಿಂದೂ ದೇವಳ ಜೈನ ಮನೆತನದ ಬಿಸಿನೆಸ್ ಅಡ್ಡೆಯಾಗಿರುವುದು 'ಖಾವಂದರ' ಕರಾಮತ್ತಿನ ಕತೆ ಹೇಳುತ್ತಿವೆ....



ಮೀಟರ್ ಬಡ್ಡಿ ಫೈನಾನ್ಸ್ ವ್ಯವಹಾರ,

ದೇವಳದ ಉತ್ಪನ್ನ ಎಷ್ಟು?

ಭಾರತದ ಕೆಲವೇ ಕೆಲವು ಕೋಟ್ಯಧೀಶ ದೇವರಲ್ಲಿ ಧರ್ಮಸ್ಥಳದ ಮಂಜುನಾಥೇಶ್ವರನೂ

ಧರ್ಮಸ್ಥಳದಲ್ಲಿ ತುರ್ತು ಪರಿಸ್ಥಿತಿ!!

ಧರ್ಮಸ್ಥಳ 'ದೇಶ'ದಲ್ಲಿ ತುಂಬ ರಹಸ್ಯವಾಗಿ, ಅಷ್ಟೇ ವ್ಯವಸ್ಥಿತವಾಗಿ ತುರ್ತು ಪರಿಸ್ಥಿತಿ ಜಾರಿಗೊಳಿಸಲಾಗಿದೆ! ದೊರೆ ಮತ್ತವರ ಪರಿವಾರದ ಲೂಟಿ-ಲಫಡಾ-ಲಂಪಟತನದ ಬಗ್ಗೆ ಸಣ್ಣದಾಗಿ ಪಿಸುಗುಟ್ಟಿದರೂ ಸಾಕು, ಅಂಥವರ ಮೇಲೆ ಪೊಲೀಸರನ್ನು ಛೂಬಿಟ್ಟು ಹಣಿಯಲಾಗುತ್ತಿದೆ; ಕೇಸುಗಳನ್ನು ಹಾಕಿ, ಗೂಂಡಾಗಳನ್ನು ಬಿಟ್ಟು ಸೌಜನ್ಯಳ ಸಾವಿನ ಬಗ್ಗೆ ಸಿಬಿಐ ತನಿಖೆಗೆ ಆಗ್ರಹಿಸುವವರ ಬಾಯಿ ಮುಚ್ಚಿಸುವ ಕುತಂತ್ರವನ್ನು ಈ ಧರ್ಮಸ್ಥಳ ಸಂಸ್ಥಾನ ಮತ್ತು ಆಳುವ ಬಿಜೆಪಿ ಸರ್ಕಾರದ ಮಹಾಮಹಿಮರು ಜಂಟಿಯಾಗಿ ನಡೆಸಿದ್ದಾರೆ.

ಧರ್ಮಸ್ಥಳ ದೊರೆಗಳ ಸದ್ಯದ ಟಾರ್ಗೆಟ್-ಸೌಜನ್ಯಳ ರೇಪ್ ಮತ್ತು ಮರ್ಡರ್ ಕೇಸನ್ನು ಸಿಬಿಐಗೆ ಒಪ್ಪಿಸುವಂತೆ ಕೇಳುವವರು. ಕೇಮಾರು ಮಠದ ಈಶ ವಿಠಲದಾಸ ಸ್ವಾಮಿ, ಗುರುವಾಯನಕೆರೆಯ ನಾಗರಿಕ ಸೇವಾ ಟ್ರಸ್ಟ್‌ನ ಸೋಮನಾಥ ನಾಯ್ಕ ಮತ್ತು ಹಿಂದೂತ್ವವಾದಿಗಳ ದಾಯಾದಿ ಮಹೇಶ್ ತಿಮರೋಡಿ ಮೊಟ್ಟಮೊದಲು ಅಪಾಯ ಲೆಕ್ಕಿಸದೆ ಸೌಜನ್ಯ ಸಾವಿನ ಸಿಬಿಐ ತನಿಖೆಗಾಗಿ ಜನರನ್ನು ಸಂಘಟಿಸಿದ್ದರು. ಇಡೀ ಬೆಳ್ತಂಗಡಿ ತಾಲ್ಲೂಕೇ ಇದು ಹೆಗ್ಗಡೆ ಸಂಸ್ಥಾನದ ಕೃಪಾಶೀರ್ವಾದದಲ್ಲಿರುವ ಪುಂಡ ಜೈನರ ಪಾತಕ ಎಂಬ ತೀರ್ಮಾನಕ್ಕೆ ಬಂದಿತ್ತು, ಎಡ-ಬಲ ಸಂಘಟನೆಗಳೆಲ್ಲ ಬೀದಿಗಿಳಿದು ಪರೋಕ್ಷವಾಗಿ ಹೆಗ್ಗಡೆ ರಿಪಬ್ಲಿಕ್‌ಗೆ ತಿರುಗಿಬಿದ್ದಿದ್ದರು.

ಆಗ ಧರ್ಮಸ್ಥಳ ಆಡಳಿತಗಾರರ ಚಿತಾವಣೆಯಿಂದ ಸುಮಾರು 50 ಜನರ ಮೇಲೆ ಕೇಸು ಜಡಿಯಲಾಯ್ತು, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷ ಕೇಶವ, ಜನಬಳಕೆಯ ತಿಮರೋಡಿ, ನವೀನ್, ನರಸಿಂಹ ಪ್ರಭು, ಸ್ಟ್ಯಾನ್ಲಿ ಅಂತೋಣಿ ಮುಂತಾದವರನ್ನು ಬುಕ್ ಮಾಡಿದರು ಪೊಲೀಸರು. ದಾಂಧಲೆ ಎಬ್ಬಿಸಿದ ಆರೋಪ ಹೊರಿಸಲಾಯ್ತು, ಆಗ ಜನ ಮತ್ತೆ ಕೆರಳಿದರು. ಪ್ರತಿಭಟನೆ ಜೋರಾಯ್ತು, ಆಗ ಈಶ ವಿಠಲದಾಸ ಸ್ವಾಮಿಗಳು ರಿಸ್ಕ್ ತೆಗೆದುಕೊಂಡು ಹೋರಾಟಕ್ಕೆ ಇಳಿದರು. ಸಿಬಿಐ ತನಿಖೆ ಬೇಕೆಂದರು.

ಆಗ ಹೆಗ್ಗಡೆ ಪರಿವಾರದ ಹರ್ಷೇಂದ್ರ ಹೆಗ್ಗಡೆ, ಉಡುಪ, ವೀರು ಶೆಟ್ಟಿ, ಬಾಲಕೃಷ್ಣ ಪೂಜಾರಿ, ಕೇಶವ ಬೆಳಾಲು, ಶ್ರೀನಿವಾಸ ರಾವ್, ಧನಕೀರ್ತಿ ಅರಿಗಾರರಂಥವರು ಎಚ್ಚೆತ್ತರು. ಜನರನ್ನು ಸೌಜನ್ಯ ಕೇಸ್ ಸಿಬಿಐಗೆ ಒಪ್ಪಿಸುವಂತೆ ಬೇಡಿಕೆ ಇಡುವವರ ವಿರುದ್ಧ ಛೂಬಿಡಲು ನೋಡಿದರು. ಸಮಾಲೋಚನಾ ಸಭೆ ನಡೆಸಿದರು. ಜನಬೆಂಬಲ ಸಿಗಲಿಲ್ಲ, ಸಣ್ಣದೊಂದು ಸಭೆ ನಡೆಸಿದರು.

ಸಿಬಿಐ ತನಿಖೆಯಿಂದ ಧರ್ಮಸ್ಥಳದ ಪಾವಿತ್ರ್ಯಕ್ಕೆ ಧಕ್ಕೆ ಆಗುತ್ತದೆ ಎಂದು ಬೊಬ್ಬೆ ಹೊಡೆದರು. ರಾಗಿಣಿ ರಸಿಕ ಕೇಶವ ಬೆಳಾಲುನಂಥವರು ಈಶ ವಿಠಲದಾಸನಂಥ ಪ್ರಗತಿಪರ-ಶೋಷಿತರ ಪರ ಸ್ವಾಮೀಜಿಯನ್ನು ಬಾಯಿಗೆ ಬಂದಂತೆ ತೆಗಳಿದ. ಇದಕ್ಕೆ ಪ್ರೇರಣೆ ಈ ಪೆದ್ದನಿಗೆ ಧರ್ಮಸ್ಥಳ ಪರಿವಾರದ ದಿಗ್ಗಜರೇ ಆಗಿದ್ದರು. 'ಸಿಬಿಐನಿಂದ ನ್ಯಾಯ ಕೇಳಿದರೆ ಧರ್ಮಸ್ಥಳದ ಮರ್ಯಾದೆ ಹೇಗೆ ಹಾಳಾಗುತ್ತದೆ?' ಎಂದು ಕೇಳಿದರೆ ಕ್ಷೇತ್ರಪಾಲ ಪಡೆಯಲ್ಲಿ ಉತ್ತರ ಇರಲಿಲ್ಲ. ಸಿಬಿಐ ಬಂದರೆ ತಮ್ಮ ಕರ್ಮಕಾಂಡಗಳೆಲ್ಲ ಹೊರಬರುತ್ತದೆಂಬ ಭೀತಿ ಸಂಸ್ಥಾನಿಗರದಾಗಿತ್ತು.



ಸೋ[illegible]ಯ್ಕ | ಈಶ ವಿಠಲದಾಸ ಸ್ವಾಮಿ | ಮಹೇಶ್ [illegible]ರೋಡಿ

ಬೆಳ್ತಂಗಡಿ-ಉಜಿರೆ-ಧರ್ಮಸ್ಥಳ ಭಾಗದ ಜನ ಯಾವುದಕ್ಕೂ ಬಗ್ಗಲಿಲ್ಲ, ಹೆಗ್ಗಡೆ ಹಿಂಬಾಲಕರಿಗೆ ಕವಡೆ ಕಾಸಿನ ಕಿಮ್ಮತ್ತೂ ಕೊಡಲಿಲ್ಲ, ಆಗ ಸಿಬಿಐ ತನಿಖೆ ಕೇಳುವ ತಂಡದ ಮುಂಚೂಣಿಯಲ್ಲಿದ್ದವರನ್ನೂ ಪೊಲೀಸರ ಮೂಲಕ ಬೆದರಿಸುವ ಹಿಕಮತ್ತು ನಡೆಯಿತು. ಕೇಮಾರು ಸ್ವಾಮಿಯ ಮಠದೆದುರು ಗಲಾಟೆ ಮಾಡುವ ಸ್ಕೆಚ್ಚೂ ಹಾಕಲಾಗಿತ್ತು ಒಂದು ಹಂತದಲ್ಲಿ, ಅದಾಗದಿದ್ದಾಗ ಹೆಗ್ಗಡೆ ಗ್ಯಾಂಗಿನ ಹೂರಣ ಗೊತ್ತಿರುವ ಹೋರಾಟಗಾರ ನಾಗರಿಕ ಸೇವಾ ಟ್ರಸ್ಟ್‌ನ ಸೋಮನಾಥ ನಾಯ್ಕರನ್ನು ಕಾಡುವ ಕರಾಮತ್ತು ಮಾಡಿದರು. ಆತನ ಮೇಲೆ 'ಧರ್ಮಸ್ಥಳ ಹೆಗ್ಗಡೆಯನ್ನು ಅವಹೇಳನ ಮಾಡುವ, ಧರ್ಮಸ್ಥಳದ ಭಕ್ತರ ಭಾವನೆ ಘಾಸಿಗೊಳಿಸುವ ಎಸ್‌ಎಂಎಸ್ ಕಳಿಸಿದ್ದಾರೆ' ಎಂದು ಹೆಗ್ಗಡೆಜೀ ಬಂಟನೊಬ್ಬ ಪೊಲೀಸ್ ಕಂಪ್ಲೇಂಟ್ ಕೊಟ್ಟ.

ಈ ಸೋಮನಾಥ್ ನಾಯ್ಕ್, ಹಲವು ವರ್ಷಗಳಿಂದ ವೀರೇಂದ್ರ ಹೆಗ್ಗಡೆಯ ನಯವಂಚನೆ-ಮೋಸ-ಹುಸಿ ಹೆಗ್ಗಳಿಕೆ ಪ್ರಹಸನಗಳನ್ನು ಬಯಲುಗೊಳಿಸುತ್ತಾ ಬಂದವರು. ಕಾನೂನುಬದ್ಧವಾಗೇ ಧರ್ಮಸ್ಥಳ ಸಂಸ್ಥಾನದ ವಿರುದ್ಧ ಹೋರಾಟ ಮಾಡುತ್ತಾ ಬಂದವರು. ಇಂಥ ನಾಯ್ಕ ಸಹಜವಾಗೇ ಧರ್ಮಸ್ಥಳದ ಅಧಿಪತಿಗಳ ಕೆಂಗಣ್ಣಿಗೆ ತುತ್ತಾಗಿದ್ದಾರೆ. ಆತನ ಮೇಲೆ ಹಲವು ನಾನ್‌ಬೇಲಬಲ್ ಸೆಕ್ಷನ್ ಹಾಕಿ ಕೇಸು ಮಾಡಲಾಗಿದೆ. ಎಫ್‌ಐಆರ್‌ನಲ್ಲಿ ತೋರಿಸಿರುವ ನಾಲ್ಕು ಎಸ್‌ಎಂಎಸ್‌ನಲ್ಲಿ ಒಂದು ಮಾತ್ರ ನಾಯ್ಕ ಕಳಿಸಿದ್ದರು. ಅದರಲ್ಲಿ ಹೆಗ್ಗಡೆ ಸಾಮ್ರಾಜ್ಯ ಭೂದಾಹ, ದೇವಲ ಸಂಪತ್ತಿನ ಮರೆಮಾಚುವಿಕೆ, ಸೌಜನ್ಯ ಕೇಸಿನಲ್ಲಿ ಕಾಣದ ಕೈಕೆಲಸ ಮಾಡುತ್ತಿರುವ ಸಂಶಯ ಸಂಗತಿಗಳಿದ್ದವು. ಅದಕ್ಕವರು ಬದ್ಧರೂ ಇದ್ದಾರೆ.

ಆದರೆ ಉಳಿದ ಮೂರು ಎಸ್‌ಎಂಎಸ್‌ಗಳು ಸೌಜನ್ಯ ಮರ್ಡರ್ ಆದಾಗ ಹಲವು ಮೊಬೈಲ್‌ನಿಂದ ಮೊಬೈಲ್‌ಗೆ ಹರಿದಾಡಿರುವಂಥದ್ದು. ಅದರಲ್ಲಿ 'ಹೆಗ್ಗಡೆ ಪರಿವಾರದ ಪುಂಡ ಹುಡುಗರೇ ರೇಪ್ ಅಂಡ್ ಮರ್ಡರ್ ಮಾಡಿದ್ದಾರೆ. ಹೆಗ್ಗಡೆ ಗ್ಯಾಂಗ್ ಸೌಜನ್ಯ ಕುಟುಂಬಕ್ಕೆ ಬೆದರಿಕೆ ಹಾಕುತ್ತಿದೆ. ಈಚೆಗಾಗಿದ್ದ ಜೋಡಿ ಕೊಲೆಯಲ್ಲೂ ಹೆಗ್ಗಡೆ ಪರಿವಾರದ ಕರಾಮತ್ತು ಇದೆ....' ಎಂಬಿತ್ಯಾದಿ ಸಂಗತಿಗಳಿದ್ದವು. ಇದಕ್ಕೂ ಸೋಮನಾಥ ನಾಯ್ಕನಿಗೂ ಸಂಬಂಧವೇ ಇಲ್ಲ, ಇದು ಪೊಲೀಸರಿಗೂ ಗೊತ್ತಿದೆ. ಆದರೆ ದೇವಮಾನವರ ಒತ್ತಡಕ್ಕೆ ಖಾಕಿ ಪಡೆ ಮಣಿದಿತ್ತು!

ಅಷ್ಟಕ್ಕೂ ವೀರೇಂದ್ರ ಹೆಗ್ಗಡೆಯ 'ಮಾನ' ಉಳಿಸಲು ಪೊಲೀಸರಿಗೆ ಕಂಪ್ಲೇಂಟು ಕೊಟ್ಟ ಸುಖೇಶ್‌ಕುಮಾರ್ ಕಡಂಬು ಎಂಥವನು ಗೊತ್ತಾ? ಈತ ಧನ್ಯಕುಮಾರ್ ಎಂಬ ಕೊಲೆಗಡುಕನ ಮಗ! ವೀರೇಂದ್ರ ಹೆಗ್ಗಡೆಯ ಪುಂಡ ಜೈನರ ಟೋಳಿಯಲ್ಲಿರುವ ಸುಖೇಶನ ತಂದೆ ಮಾಜಿ ಜಿ.ಪಂ. ಸದಸ್ಯ ರಾಜಶ್ರೀ ಹೆಗ್ಡೆಯ ತಂದೆ ಕುಮಾರಯ್ಯರನ್ನು 1970 ರ ದಶಕದ ಅಂತ್ಯದಲ್ಲಿ ಮರ್ಡರ್ ಮಾಡಿದ್ದ, ಕಳ್ಳ ಕಟ್ಟಿಗೆ, ಗಂಧ ಕಳ್ಳ ಸಾಗಾಣೆ ದಂಧೆದಾರ ಕುಟುಂಬ ಇದು. ಈ ಧನ್ಯಕುಮಾರ್‌ನನ್ನು ಮುದ್ದು ಬಣದವರು ವಿಶಿಲ್ ವಿಶ್ವನಾಥ್‌ನನ್ನು ಬಳಸಿ ಕೊಲೆ ಮಾಡಿದ್ದರು. ಆ ವಿಶಿಲ್ ವಿಶ್ವನನ್ನು ಧನ್ಯಕುಮಾರ್‌ನ ಎರಡನೇ ಮಗ ಮುಗಿಸಿದ್ದ.

ಈಗ ಹೆಗ್ಗಡೆಜೀ ಮತ್ತು ಧರ್ಮಸ್ಥಳ ಸಂಸ್ಥಾನದ ಪಾವಿತ್ರ್ಯಕ್ಕಾಗಿ ಪೊಲೀಸ್ ಕಂಪ್ಲೇಟು ಕೊಟ್ಟಿರುವ ಸುಖೇಶ್ ಕೊಲೆಗಡುಕನ ಮಗ-ಕೊಲೆಗಡುಕನ ಅಣ್ಣ, ಈ ಸುಖೇಶ್‌ನ ಚರಿತ್ರೆಯೊಂದೇ ಸಾಕು ಸ್ವಯಂಘೋಷಿತ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯ ಧರ್ಮ-ನ್ಯಾಯ-ನೀತಿ ಎಂಥದೆಂದು ಅರ್ಥ ಮಾಡಿಕೊಳ್ಳಲು ಹೆಗ್ಗಡೆಜೀ ಪರಿವಾರದ ಆತ್ಯಾಪ್ತ ಹಂಟರ್ ಈ ಸುಖೇಶ್!!

ಇದೆಲ್ಲ ಹೆಗ್ಗಡೆಜೀಗೆ ಬೇಕಿತ್ತಾ! ದೌರ್ಜನ್ಯದಿಂದ ಸಾಮ್ರಾಜ್ಯ ಕಟ್ಟಿದ್ದನ್ನು ಮಂಜುನಾಥ ಸ್ವಾಮಿ ಮೆಚ್ಚುವನಾ? ಹಾಗಂತ ಧರ್ಮಸ್ಥಳ ಸೀಮೆಯ ಜನರೀಗ ಮಾತಾಡಿಕೊಳ್ಳುತ್ತಿದ್ದಾರೆ. ಇದು ಧರ್ಮಸ್ಥಳದಲ್ಲಿ ನೆಲೆ ನಿಂತಿರುವ ಅಸಲಿ ಧರ್ಮ!!


SDM ಕಾಲೇಜ್


ಮಂಜುನಾಥೇಶ್ವರ ಕಾಲೇಜ್

...ಧರ್ಮಸ್ಥಳ ದರ್ಬಾರಿನ ಆರ್ಭಟದ ಮೂಲವೇ ...ಲೆಕ್ಕ-ಪತ್ರವಿಲ್ಲದ ಕೋಟ್ಯಂತರ ರೂ. ಆದಾಯ. ಒಂದು ಮೂಲದ ಪ್ರಕಾರ ವಾರ್ಷಿಕ **400-600** ಕೋಟಿ ಹಣ ಮಂಜುನಾಥನ ಹೆಸರಲ್ಲಿ 'ಉತ್ಪಾದನೆ' ಆಗುತ್ತದೆ. ಜೈನ್ ಧರ್ಮದ ವೀರೇಂದ್ರ ಹೆಗ್ಗಡೆಯ ವಂಶಸ್ಥರ ಕಬ್ಜಾದಲ್ಲಿರುವ ... ದೇವಾಲಯ ಹಿಂದೂ ಧರ್ಮೀಯರ ಶ್ರದ್ಧಾ-ಭಕ್ತಿ ...ಕೇಂದ್ರ ಎಂಬುದೇ ವಿಪರ್ಯಾಸ! ಇದು ತನ್ನ ಮನೆದೇವರೆಂದು ಹೇಳುವ ಹೆಗ್ಗಡೆ ಪರಿವಾರ ಇವತ್ತಿನವರೆಗೆ ದೇವಾಲಯದ ಆದಾಯ ಮಾತ್ರ ಬಹಿರಂಗಪಡಿಸಿಲ್ಲ.

ದೇವಾಲಯದ ವರಮಾನದಲ್ಲಿ ಎಷ್ಟು ಧರ್ಮದತ್ತಿಗೆ, ...ದಾನಾದಿಗಳಿಗೆ, ಶಿಕ್ಷಣಕ್ಕೆ ಗ್ರಾಮೀಣ ಅಭಿವೃದ್ಧಿ ಯೋಜನೆಗೆ, ...ಫೈನಾನ್ಸ್ ವ್ಯವಹಾರಕ್ಕೆ ಹಂಚಿಕೆಯಾಗುತ್ತದೆ; ಎಷ್ಟು ಹೆಗ್ಗಡೆ ಕುಟುಂಬಸ್ಥರ ಖಾಸಗಿ ತೆವಲಿಗೆ ಖರ್ಚಾಗುತ್ತದೆ ಒಂದೂ ...ವರೆಗೆ ಹೆಗ್ಗಡೆಜೀ ನಿಖರವಾದ ಲೆಕ್ಕ ಕೊಟ್ಟಿದ್ದಿಲ್ಲ. ಒಂದು ಅಂದಾಜಿನಂತೆ ಬರೀ **50-60** ಕೋಟಿ ಮಾತ್ರ ಹೆಗ್ಗಡೆ ...ವಿಧ ಯೋಜನೆಗೆ ಕೊಡುತ್ತಾರಷ್ಟೆ. ಉಳಿದ ಹಣಕ್ಕೆ ...ಕವಿಲ್ಲ. ಕೃಷ್ಣನ ಲೆಕ್ಕವೇ ಜಾಸ್ತಿಯೆಂಬುದು ಸಾಮಾನ್ಯ ಅಭಿಪ್ರಾಯ.

ಇದೊಂದು ಖಾಸಗಿ ದೇವಸ್ಥಾನ ಎಂದಿಟ್ಟುಕೊಂಡರೂ ...ಬಿದ್ದುಬರುವ ಹಣ ಸಾರ್ವಜನಿಕರಿಂದ ತಾನೆ? ದೊಡ್ಡ ...ಮೊತ್ತದ ಹಣ ದೇವಸ್ಥಾನ ಒಂದಕ್ಕೆ ವ್ಯಾಪಕವಾಗಿ ಬರುತ್ತಿದ್ದರೆ ...ಅದನ್ನು ರಾಷ್ಟ್ರೀಕರಣಗೊಳಿಸಿ ಸರ್ಕಾರ ಸುಪರ್ದಿಗೆ ಪಡೆಯಬೇಕೆಂದು ಸುಪ್ರೀಂಕೋರ್ಟಿನ ತೀರ್ಪೇ ಹೇಳಿದೆ. ...ದ್ರದ ಒಂದು ದೇವಾಲಯಕ್ಕೆ ಸಂಬಂಧಿಸಿದ ಕೇಸಿನಲ್ಲಿ ...ಥದೊಂದು ತೀರ್ಪು ಸುಪ್ರೀಂಕೋರ್ಟು ಕೊಟ್ಟಿದೆ.

ಆದರೆ ಮಂಜುನಾಥನ ಕೃಪೆಯಿಂದ ಧರ್ಮಸ್ಥಳ ದೇವಸ್ಥಾನ ಮಾತ್ರ ಇವತ್ತಿಗೂ ದೇವಧೂತ ವೀರೇಂದ್ರ ಹೆಗ್ಗಡೆ ಸುಪರ್ದಿಯಲ್ಲೇ ಇದೆ. ಆಳುವವರ ಮೇಲೆ ಅಂಥ 'ಭಯಂಕರ' ಪ್ರಭಾವ ಹೆಗ್ಗಡೆಜೀ ಹೊಂದಿದ್ದಾರೆ.

ಧರ್ಮಾಧಿಕಾರಿ ಎಂದು ಹೇಳಿಕೊಳ್ಳುವವರು ತಮ್ಮ ಎಲ್ಲ ವ್ಯವಹಾರಗಳಲ್ಲಿ ಪಾರದರ್ಶಕವಾಗಿರಬೇಕಾದುದು ಧರ್ಮ ಅಲ್ಲವಾ? ದೇವಸ್ಥಾನದ ಉತ್ಪನ್ನ, ಹೆಗ್ಗಡೆಜೀ ಬಳಗದ ಆಸ್ತಿ-ಪಾಸ್ತಿ, ದೇವಸ್ಥಾನದ ಚರ-ಸ್ಥಿರ ಸೊತ್ತುಗಳನ್ನು ಹೆಗ್ಗಡೆ ಏಕೆ ಸಂಶಯಾತೀತವಾಗಿ ಸಾರ್ವಜನಿಕರ ಮುಂದಿಡುತ್ತಿಲ್ಲ? ಯಾಕಿಂಥ ಹಿಂಜರಿಕೆ ಧರ್ಮ-ನ್ಯಾಯದ ಬಗ್ಗೆ ಉದ್ದುದ್ದ ವ್ಯಾಖ್ಯಾನ ಕೊಡುವ ಹೆಗ್ಗಡೆಯವರಿಗೆ?

ತೆರಿಗೆ ವಂಚನೆ

ಧರ್ಮಸ್ಥಳ ಮತ್ತು ಉಜಿರೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಧರ್ಮಸ್ಥಳ ಸಂಸ್ಥಾನದ ನೂರಾರು ಸಣ್ಣ-ದೊಡ್ಡ-ಬಹುಮಹಡಿ ಕಟ್ಟಡಗಳಿವೆ. **200-250**ರಷ್ಟು ಅಂಗಡಿ ಹೋಟೇಲುಗಳನ್ನು ಧರ್ಮಸ್ಥಳ ದರ್ಬಾರು ಬಾಡಿಗೆಗೆ ಕೊಟ್ಟಿದೆ. ಇದರಿಂದ ಕೋಟಿ-ಕೋಟಿ ಬಾಡಿಗೆ ಬರುತ್ತಿದೆ. ಹಲವು ವಿದ್ಯಾಲಯ ಕಟ್ಟಡ, ಅನೇಕ ವಸತಿಗೃಹ ಕಟ್ಟಡಗಳನ್ನು ಕ್ಷೇತ್ರಪಾಲರೇ ನಿಭಾಯಿಸುತ್ತಾರೆ. ಇದರಲ್ಲೂ ಲೆಕ್ಕಕ್ಕೆ ಸಿಗದಷ್ಟು ಹಣ ಹುಟ್ಟುತ್ತಿದೆ. ಆದರೆ ಈ ಬಾಡಿಗೆ, ವಸತಿಗೃಹದ ಶುಲ್ಕದ ಬಗ್ಗೆ ಅಧಿಕೃತ ಲೆಕ್ಕ ಹೆಗ್ಗಡೆಜೀ ಕೊಟ್ಟಿದ್ದೇ ಇಲ್ಲ!

ಅಷ್ಟೇ ಅಲ್ಲ, ಈ ಎಲ್ಲ ಕಟ್ಟಡಗಳಿಗೆ ತುಂಬುತ್ತಿರುವ ತೆರಿಗೆಯೂ ಜುಜುಬಿ. ಗ್ರಾಮ ಪಂಚಾಯ್ತಿಗಳು ಮನೆ-ವಾಣಿಜ್ಯ ಕಟ್ಟಡಗಳ ತೆರಿಗೆ ಪರಿಷ್ಕರಿಸುತ್ತಿವೆ. ಅದು ಉಜಿರೆ-ಧರ್ಮಸ್ಥಳದಲ್ಲೂ ಆಗಿದೆ. ಆದರೆ, ವೀರೇಂದ್ರ ಹೆಗ್ಗಡೆ ಸ್ವಾಮಿತ್ವದ ಯಾವ ಕಟ್ಟಡದ ತೆರಿಗೆಯೂ ಬದಲಾಗಿಲ್ಲ! ನೂರಾರು ಕೋಟಿ ಆದಾಯವಿರುವ ಧರ್ಮಸ್ಥಳದವರು ನ್ಯಾಯೋಚಿತ ತೆರಿಗೆ ತುಂಬುವುದಕ್ಕೂ ಹಿಂಜರಿಯುತ್ತಿರುವುದು ಯಾಕೆ?

ಹುಸಿ ದಾನ ಧರ್ಮ

ದಕ್ಷಿಣ ಕನ್ನಡ ಮತ್ತು ರಾಜ್ಯದ ಇತರೆಡೆಯ ಹಲವು ದೇವಸ್ಥಾನಗಳ ಜೀರ್ಣೋದ್ಧಾರ ಧರ್ಮಸ್ಥಳದ ಸಂಸ್ಥಾನಿಗರ ಉದಾರ ದಾನ-ಧರ್ಮೋತ್ಥಾನದ ಪರಿಕಲ್ಪನೆಯಿಂದ ಆಗುತ್ತಿದೆ ಎಂಬಂತೆ ಬಿಂಬಿಸಲಾಗುತ್ತಿದೆ. ಆದರೆ ವಾಸ್ತವ ಸಂಗತಿ ತದ್ವಿರುದ್ಧವಾಗಿದೆ. ಕರ್ನಾಟಕ ಸರ್ಕಾರದ ಗೆಜೆಟ್ ನೋಟಿಫಿಕೇಷನ್ ಪ್ರಕಾರ, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ಮೂಲಕ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ ಇಲಾಖೆ ಧರ್ಮಸ್ಥಳ ದೇವಾಲಯ ಟ್ರಸ್ಟ್‌ನ ಸಹಯೋಗದೊಂದಿಗೆ ರಾಜ್ಯದ ವಿವಿಧ ದೇವಸ್ಥಾನಗಳು ಜೀರ್ಣೋದ್ಧಾರ ಕಂಡಿವೆ. ಯಾರೋ ಮಾಡಿದ ಪ್ರಯತ್ನ-ಖರ್ಚಿನ ಲಾಭ-ಕೀರ್ತಿ ಎನ್‌ಕ್ಯಾಶ್ ಮಾಡಿಕೊಂಡು ಧರ್ಮ-ನ್ಯಾಯ ರಕ್ಷಕರ ಗೆಟಪ್ ಪಡೆಯುವುದರಲ್ಲಿ ಧರ್ಮಸ್ಥಳ ಸಂಸ್ಥಾನಿಗರು ನಿಸ್ಸೀಮರು.

ಅನೇಕ ಕೋರ್ಸ್‌ಗಳ ಹಲವು ಶಿಕ್ಷಣ ಸಂಸ್ಥೆಗಳನ್ನು ಧರ್ಮಸ್ಥಳದ ಕ್ಷೇತ್ರಪಾಲರು ರಾಜ್ಯದಾದ್ಯಂತ ನಡೆಸುತ್ತಿದ್ದಾರೆ. ಇವುಗಳಿಗೆ ತರಹೇವಾರಿ ಪ್ರತಿಷ್ಠೆ-ಆಕರ್ಷಣೆಯೂ ಇದೆ. ಆದರೆ ಇಲ್ಲಿ ಬಡ-ಅಮಾಯಕ ವಿದ್ಯಾರ್ಥಿಗಳಿಗೆ ಅವಕಾಶ ತೀರಾ ಕಡಿಮೆ! ಐದಾರು ನೂರು ಕೋಟಿ ವಾರ್ಷಿಕ ಆದಾಯ ಮಂಜುನಾಥನ ಹೆಸರಲ್ಲಿ ಗಳಿಸುವ ಹೆಗ್ಗಡೆ ಬಳಗ ಬಡಮಕ್ಕಳಿಗೆ ತಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಉಚಿತ ಅಥವಾ ರಿಯಾಯತಿ ಶಿಕ್ಷಣ ಕೊಡುವ 'ದೊಡ್ಡ ಮನಸ್ಸು' ಮಾಡಬಹುದಿತ್ತು.

ಲ್ಯಾಂಡ್ ಲಫಡಾ

ಇಲ್ಲಿನ ಬಲಿಷ್ಠರ ಭೂದಾಹದ ಬಗ್ಗೆ ರಂಗು-ರಂಗಿನ ಕತೆಗಳು ಕರಾವಳಿ ಜಿಲ್ಲೆಯಲ್ಲಿದೆ. ಬಲಿಷ್ಠರ ಭೂದಾಹದಿಂದ ರಕ್ತಪಾತ, ಕೊಲೆ, ನಿರಂತರ ಕಿರುಕುಳದ ಘಟನೆಗಳು ಉಜಿರೆ-ಬೆಳ್ತಂಗಡಿ, ಧರ್ಮಸ್ಥಳ ಏರಿಯಾದಲ್ಲಿ ಅದೆಷ್ಟೋ ಆಗಿವೆ, ಆಗುತ್ತಿದೆ. ಪದ್ಮಲತಾ, ಸೌಜನ್ಯ, ಆನೆ ಮಾವುತ ನಾರಾಯಣ, ಆತನ ಸಹೋದರಿಯರು ಈ ಲ್ಯಾಂಡ್ ಮಾಫಿಯಾಕ್ಕೆ ಆಹುತಿಯಾಗಿದ್ದಾರೆ. ಕೆಲವರು ಹೆದರಿ ಪಾಪ್ಪರ್ ಆಗಿದ್ದಾರೆ. ಇನ್ನೂ ಕೆಲವರು ಹಿಂಸೆ [illegible]

[illegible]

12

> ## ಖಾವಂದರೆ, ಸಾಲಮನ್ನಾ ಮಾಡುವಿರಾ?
>
> **ಧ**ರ್ಮಸ್ಥಳದ ಹೆಗ್ಗಡೆ ರಿಪಬ್ಲಿಕ್‌ನ ಬಣ್ಣ ಈಗ ದಶ ದಿಕ್ಕಲ್ಲಿ ಬಯಲಾಗಿದೆ. ಆದರೆ ಬಂಡವಾಳಶಾಹಿಗಳ, ಅಧರ್ಮಿಗಳ, ಕೋಮುವಾದಿಗಳ ತಾರೀಫು ಮಾಡುವ ನೀತಿಯ 'ಉದಯವಾಣಿ' ಮಾತ್ರ ಹೆಗ್ಗಡೆ ಸಾಮ್ರಾಜ್ಯದ ತುತ್ತೂರಿಯಂತಾಗಿದೆ. ಇಷ್ಟು ದೊಡ್ಡ ರೇಪ್ ಅಂಡ್ ಮರ್ಡರ್ ಆದರೂ ಆ ಬಗ್ಗೆ ತಲೆಕೆಡಿಸಿಕೊಳ್ಳದ ಉದಯವಾಣಿ ವರದಿಗಾರರು ಹೆಗ್ಗಡೆ ಸಂಸ್ಥಾನದ ಹಿತಕಾಯುವ ವರದಿ ಬರೆಯುತ್ತಿದ್ದಾರೆ.
>
> ತಿಂಗಳಿಗೆ ಸರಾಸರಿ ಎರಡರಂತೆ ಅಸಹಜ ಸಾವು ಸಂಭವಿಸುತ್ತಿದ್ದ ಧರ್ಮಸ್ಥಳದಲ್ಲಿ ಸೌಜನ್ಯ ಮರ್ಡರ್ ಬಳಿಕದ ಈ ಎರಡು ತಿಂಗಳಿಂದ ಒಂದೇ ಒಂದು ಸಾವು-ಕೊಲೆ-ರೇಪ್ ಆಗಿಲ್ಲ ಏಕೆ? ಜನ ಎಚ್ಚೆತ್ತುಕೊಂಡಿರುವುದರಿಂದ ಅನೈತಿಕ ಪೊಲೀಸರು ಅಸ್ತ್ರಗಳನ್ನು ಒಳಗಿಟ್ಟಿದ್ದಾರೆ. ಧರ್ಮಸ್ಥಳದಲ್ಲಿ ಯಾತ್ರಾರ್ಥಿಗಳೀಗ ಉಳಿಯುವ- ರಾತ್ರಿ ಕಳೆಯುವ ಗೋಜಿಗೆ ಹೋಗುತ್ತಿಲ್ಲ. ಯಾತ್ರಾರ್ಥಿಗಳೂ ಕಮ್ಮಿಯಾಗಿದ್ದಾರೆ ಸೌಜನ್ಯ ಕೊಲೆ ಗಲಾಟೆ ನಂತರ. ಹೀಗಾಗಿ ಅಸಹಜ ಸಾವು ಸಂಭವಿಸಿಲ್ಲ.
>
> ಇದು ಉದಯವಾಣಿಯ ಪ್ರಭೃತಿಗಳಿಗೆ ಕಾಣಿಸುವುದಿಲ್ಲ. ಎರಡು ವರ್ಷದ ಹಿಂದೆ ಮೈಸೂರು ಕಡೆಯ 8ನೇ ತರಗತಿಯ ಹುಡುಗಿಯೊಬ್ಬಳನ್ನು ವಾರಗಟ್ಟಲೆ ಧರ್ಮಸ್ಥಳದ ಅನೈತಿಕ ಪೊಲೀಸರು ಅಕ್ರಮ ಬಂಧನದಲ್ಲಿಟ್ಟುಕೊಂಡು ಅತ್ಯಾಚಾರ ನಡೆಸಿದ್ದರು. ಊರವರೇ ಆಗ ಆ ಗ್ಯಾಂಗನ್ನು ಪೊಲೀಸರಿಗೆ ಒಪ್ಪಿಸಿತ್ತು. ಆ ರೇಪಿಸ್ಟ್ ಪಡೆಯ ಲೀಡರ್ ಆಗಿದ್ದವನು ಧರ್ಮಸ್ಥಳ ಅನ್ನಛತ್ರದ ಉಸ್ತುವಾರಿಯೊಬ್ಬನ ಕುಲಕಂಠೀರವನಾಗಿದ್ದ. ಹೀಗಾಗಿ ಪೊಲೀಸರು ಕೇಸ್ ಮುಚ್ಚಿ ಹಾಕಿ ಸಂತ್ರಸ್ತ ಬಾಲಕಿಗೇ ಬುದ್ಧಿ ಹೇಳಿ ಕಳಿಸಿದ್ದರು.
>
> ಇದೆಲ್ಲಾ ಈಗ ಒಂದೊಂದಾಗಿ ಹೊರಬರುತ್ತಿದೆ. ಜತೆಗೆ ಜನರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಬಡ್ಡಿ ವ್ಯವಹಾರದ ವಿರುದ್ಧವೂ ತಿರುಗಿ ಬಿದ್ದಿದ್ದಾರೆ. ಸಹಕಾರಿ ಸಂಘಗಳ ಸಾಲ ಸರ್ಕಾರ ಮನ್ನಾ ಮಾಡಿದಂತೆ ಹೆಗ್ಗಡೆ ಸ್ವ-ಸಹಾಯ ಸಂಘದವರಿಗೆ ಕೊಟ್ಟ ಸಾಲವೇಕೆ ಬಕ್ಷೀಸ್ ಬಿಡಬಾರದು? ಎಂದು ಕೇಳುತ್ತಿದ್ದಾರೆ. ಸಿರಿ ಮತ್ತಿತರ ಸ್ವ-ಸಹಾಯ ಸಂಘದವರು 'ಧರ್ಮಸ್ಥಳ ಬ್ಯಾಂಕ್'ನ ಶೇ. 15 ರ ಬಡ್ಡಿ ಸಾಲದಿಂದ ಹೈರಾಣಾಗಿ ಹೋಗಿದ್ದಾರೆ. ಈ ಸ್ವ-ಸಹಾಯ ಗುಂಪುಗಳ ವರಮಾನವೇನೂ ಹೆಗ್ಗಡೆ ಗ್ರಾಮೀಣಾಭಿವೃದ್ಧಿ ಸಂಘದಿಂದ ಏರಿಸಲಾಗಿಲ್ಲ. ಆದರೆ ಸಾಲದ ಶೂಲದಿಂದ ಧರ್ಮಸ್ಥಳ ಬ್ಯಾಂಕ್ ಅಸಹಾಯಕರನ್ನು ಇರಿಯುತ್ತಿದೆ!
>
> ಸಾಲ ಮರುಪಾವತಿ ವಿಧಾನಗಳಂತೂ ಭೀಭತ್ಸ ಉದ್ಧಾರ! ಸಾಲ ತುಂಬಲಾಗದವರನ್ನು, ಹೀಯಾಳಿಸುವುದು, ಅವಮಾನಿಸುವುದು ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿಯ ಪರಂಪರಾಗತ ನಿಯಮ. ಧರ್ಮಸ್ಥಳದವರ ಅವಮಾನ, ಹಿಂಸೆ ತಾಳಲಾಗದೆ ತಣ್ಣೀರುಪಂತ ಎಂಬಲ್ಲಿ ಒಬ್ಬ ಸಾಲಗಾರ, ಅಂಗನವಾಡಿ ಸಹಾಯಕಿ ಕೆಲದಿನಗಳ ಹಿಂದೆ ಆತ್ಮಹತ್ಯೆಗೆ ಶರಣಾಗಿದ್ದಳು. ಇಂತಹ ಪಾತಕಕ್ಕೆ ಲೆಕ್ಕವೇ ಇಲ್ಲ.
>
> ಇದೆಂಥ ಗ್ರಾಮೀಣಾಭಿವೃದ್ಧಿ?!


ಸೌಜನ್ಯ


ರುಡ್‌ಸೆಟ್ ಕಚೇರಿ



ದಲಿತರ ಭೂಮಿ ಮೇಲೆ ತಲೆ ಎತ್ತಿರುವ ಸಿದ್ಧವನ


11 ← ಧರ್ಮಸ್ಥಳ....ದಂಧೆಗಳು!!

ಕಾಲೇಜು ಮತ್ತು ಸಿದ್ಧವನ ಎಂಬ ಹಾಸ್ಟೆಲು ಇರುವುದೇ ಶೋಷಿತ ವರ್ಗಕ್ಕೆ ಮೀಸಲಿಟ್ಟ ಸರ್ಕಾರಿ ಜಮೀನಿನಲ್ಲಿ. ದಲಿತರಿಗೆ ಸೇರಬೇಕಿದ್ದ ಈ 51 ಎಕರೆ ಪ್ರದೇಶವನ್ನು ಸರ್ಕಾರಿ ಪ್ರಭೃತಿಗಳು ಸಾರ್ವಜನಿಕ ಉದ್ದೇಶಕ್ಕೆ ವಶಪಡಿಸಿಕೊಂಡು ಧರ್ಮಸ್ಥಳದ ರಾಜ-ಮಹಾರಾಜರಿಗೆ ಧಾರೆಯೆರೆದು ಮಂಜುನಾಥನ ಕೃಪೆಗೆ ಪಾತ್ರರಾಗಿದ್ದಾರೆ! ಇವತ್ತಿಗೂ ದಲಿತರ ಕುಂದು-ಕೊರತೆ ಸಮಿತಿ ಮುಂದೆ ಈ ಪ್ರಕರಣ ಭುಗಿಲೇಳುತ್ತಿದೆ. ತನಿಖೆಯೂ ನಡೆಯುತ್ತಿದೆ. ದೇವರು ಎಂದೂ ದುರ್ಬಲರ ಘಾತುಕನಲ್ಲವಾ? ದಲಿತರು ಒದ್ದಾಡುತ್ತಿದ್ದಾರೆ, ದೇವರ ಕಬ್ಜಾದಾರರು ಜಮೀನು ನುಂಗಿ ನಿರಾತಂಕವಾಗಿದ್ದಾರೆ.

ಧರ್ಮಸ್ಥಳ ಸಾಮ್ರಾಟರ ಭೂದಾನ ಭಾನ್ಗಡಿಯ ಮತ್ತೊಂದು ಸ್ಯಾಂಪಲ್ ಇಲ್ಲಿದೆ ನೋಡಿ. ಉಜಿರೆ ಬಸ್ ನಿಲ್ದಾಣದ ಬಳಿಯ 9.70 ಎಕರೆ ಭೂಮಿ ದಿವಂಗತ ಅಂತ್ರಾಜ ಹೆಗ್ಡೆ ಎಂಬವವರಿಗೆ ಭೂನ್ಯಾಯ ಮಂಡಳಿ ಮಂಜೂರು ಮಾಡಿತ್ತು. ಈ ಭೂಮಿಯ ಮೇಲೆ ವೀರೇಂದ್ರ ಹೆಗ್ಗಡೆ ಪರಿವಾರದ ಕಣ್ಣು ಬಿದ್ದಿದ್ದೇ ತಡ, ಅದಕ್ಕೊಂದು ಊಹಾತ್ಮಕ ಒಡೆತನದ ಬೋಗಸ್ ಧಾಖಲೆಯೂ ಸೃಷ್ಟಿಯಾಗಿ ಹೋಯ್ತು. ಅಂತ್ರಾಜ ಹೆಗ್ಡೆಯ ಮಕ್ಕಳಿಗೆ ಈ ಜಾಗ ದಕ್ಕಲು ಧರ್ಮಸ್ಥಳ ಲ್ಯಾಂಡ್ ಲಾರ್ಡ್‌ಗಳು ಬಿಡಲಿಲ್ಲ. ಮಂಜುನಾಥ ಸ್ವಾಮಿಯ ಪ್ರಭಾವ ಬೆಳ್ತಂಗಡಿ ಸಬ್‌ರಿಜಿಸ್ಟ್ರಾರ್ ಕಚೇರಿಯಿಂದ ಬೆಂಗಳೂರು ವಿಧಾನಸೌಧದ ತನಕ ಒಂದೇಸಮನೆ ಹರಿದಾಡಿತು. ಕೃತಕ ವ್ಯಾಜ್ಯ ಸೃಷ್ಟಿಸಲಾಯಿತು. ಅಂತ್ರಾಜ ಹೆಗ್ಡೆ ಮಕ್ಕಳಿಗೆ ಅವರದೇ ಆಸ್ತಿ ಸಿಗುತ್ತಿಲ್ಲ. ಈ ಜಮೀನಿನ ಮಾರುಕಟ್ಟೆ ಬೆಲೆ ಎಷ್ಟು ಗೊತ್ತಾ? ಬರೋಬ್ಬರಿ 10 ಕೋಟಿ ರೂ. ಇಂಥ ಭೂಮಿ ಧರ್ಮಸ್ಥಳದ ಅಧಿಪತಿಗಳು ಬಿಟ್ಟುಕೊಟ್ಟರೆ ಮಂಜುನಾಥಸ್ವಾಮಿ ಮೆಚ್ಚುವನಾ? ಶಾಂತಿವನ ಟ್ರಸ್ಟ್ ಹೆಸರಲ್ಲಿ ಬೆಳ್ತಂಗಡಿಯ ಸಮಾಜ ಮಂದಿರ ಜಾಗ ಹೆಗ್ಗಡೆ ಬಳಗ ಮಂಗಿದ್ದೇ ಪ್ರತ್ಯೇಕ ಪುರಾಣವಾಗುವಷ್ಟು ದೊಡ್ಡದಿದೆ.

ವಿಫಲ ಗ್ರಾಮಾಭಿವೃದ್ಧಿ: ಸಫಲ ಬಡ್ಡಿ ಬಿಸಿನೆಸ್

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ- ಎಂಬ ಬಡವರ ಉದ್ಧಾರ ಮಾಡುವ ಸ್ಕೀಮ್ ಒಂದನ್ನು ವೀರೇಂದ್ರ ಹೆಗ್ಗಡೆ ನಡೆಸುತ್ತಿದ್ದಾರೆ. ಸಿರಿ ಮತ್ತು ಎಸ್‌ಜಿಎಸ್‌ವೈ ಯೋಜನೆಗಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಸುಮಾರು 14.64 ಕೋಟಿ ಅನುದಾನ ಪಡೆದಿದ್ದಾರೆ. ಕರಾವಳಿಯ ಮೂರು ಜಿಲ್ಲೆ ಸಹಿತ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 1.18 ಲಕ್ಷ ಸ್ವ-ಸಹಾಯ ಗುಂಪು ರಚಿಸಿ ಬಡತನ ನಿರ್ಮೂಲನೆಯ ವಿರುದ್ಧ ಭಾಷಣ



ಹೆಗ್ಗಡೆಜೀ ಬಗಿಯುತ್ತಿದ್ದಾರೆ. ದುರಂತವೆಂದರೆ, ಈ ಧರ್ಮಸ್ಥಳ ಸಂಸ್ಥಾನದ ಯೋಜನೆ ಭರ್ಜರಿ ವಿಫಲವಾಗಿದೆ. ಸ್ವ-ಸಹಾಯ ಸಂಘಗಳ ಮೂಲ ಆಶಯಕ್ಕೆ ತದ್ವಿರುದ್ಧವಾಗಿ ಕಾರ್ಯಾಚರಿಸುತ್ತಿರುವ ಈ ಯೋಜನೆ 'ಗುಲಾಮಾಭಿವೃದ್ಧಿ ಯೋಜನೆ'ಯೆಂದೇ ಕುಖ್ಯಾತವಾಗಿ ಹೋಗಿದೆ.

ದುಡಿದು ತಿನ್ನುವ- ಸ್ವಾವಲಂಬಿಗಳಾಗುವುದ ಕಲಿಸುವ ಬದಲು ಈ ಎಸ್‌ಕೆಡಿಆರ್‌ಡಿಪಿ ಯೋಜನೆ ಗುಲಾಮಗಿರಿ, ಬೇಡುವುದು, ಸಾಲದ ಶೂಲಕ್ಕೆ ತುತ್ತಾಗುವ ಕಲೆ ಕಲಿಸುತ್ತಿದೆ. ವೀರೇಂದ್ರ ಹೆಗ್ಗಡೆ, ಅವರ ಮಡದಿ ಹೇಮಾವತಿ ಹೆಗ್ಗಡೆ ಪಾದಕ್ಕೆ ಎರಗುವುದು, ಹರ್ಷೇಂದ್ರ ಹೆಗ್ಗಡೆಗೆ ದೊಗ್ಗು ಸಲಾಮು ಹಾಕಿಸುವುದೇ ಈ ಯೋಜನೆಯ ಮೂಲ ಧ್ಯೇಯೋದ್ದೇಶದಂತಿದೆ. ಹೀಗಾಗಿ ಬಡತನ ರೇಖೆಗಿಂತ ಕೆಳಗಿನ ಕುಟುಂಬ (ಬಿಪಿಎಲ್)ಗಳನ್ನು ಬಡತನ ರೇಖೆಗಿಂತ ಮೇಲಿನ ಕುಟುಂಬ(ಎಪಿಎಲ್)ಗಳನ್ನಾಗಿ ಮಾಡುವ ಘೋಷಿತ ಉದ್ದೇಶ ಈಡೇರಿಸಲು ಈ ಹೆಗ್ಗಡೆ ಪ್ರಣೀತ ಗ್ರಾಮೀಣಾಭಿವೃದ್ಧಿ ಯೋಜನೆಯಿಂದ ಆಗಿಲ್ಲ.

ಆದರೆ ಈ ಹುಸಿ ಯೋಜನೆಗೆ ಭರ್ಜರಿ ಪ್ರಚಾರ ಮಾತ್ರ ಕೊಡಲಾಗುತ್ತಿದೆ. ಇದೊಂದು ಮಾದರಿ ಗ್ರಾಮೀಣ ಅಭಿವೃದ್ಧಿ ಪ್ರಾಜೆಕ್ಟ್ ಎಂಬಂತೆ ಹೆಗ್ಗಡೆ ಪರಿವಾರ ಬಿಂಬಿಸುತ್ತಿದೆ. ವಾಸ್ತವವಾಗಿ ಹೆಗ್ಗಡೆಜೀ ಯೋಜನೆಯಲ್ಲಿ ಸಾಲ ನೀಡಿಕೆ ಪ್ರಗತಿ ಆಗುತ್ತಿದೆಯೇ ಹೊರತು ಬಡವರ ಏಳಿಗೆ ಸಾಧ್ಯವಾಗುತ್ತಿಲ್ಲ. ರಾಜ್ಯದಾದ್ಯಂತ ಇರುವ 1.18 ಲಕ್ಷ ಸ್ವ-ಸಹಾಯ ಸಂಘಗಳಿಗೆ ಹೆಗ್ಗಡೆಯವರ ಗ್ರಾಮಾಭಿವೃದ್ಧಿ ಯೋಜನೆಯ ಸ್ವಯಂಸೇವಾ ಸಂಸ್ಥೆಗಳು ಶೇ. 15 ಬಡ್ಡಿ ದರದಲ್ಲಿ ಸಾಲ ಒದಗಿಸುತ್ತಿವೆ.

ಇಲ್ಲೂ ದೊಡ್ಡ ಮೋಸ-ವಂಚನೆ ಆಗುತ್ತಿದೆ. ಹೆಗ್ಗಡೆಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ಶೇ. 6 ರಿಂದ ಶೇ. 8.5 ರ ತನಕದ ಬಡ್ಡಿಗೆ ಸುಮ 1,500 ಕೋಟಿ ರೂ. ಸಾಲ ತಂದಿದೆ. ಇದನ್ನು ಮೀ ಬಡ್ಡಿಗೆ ಬಡವರ ಸ್ವ-ಸಹಾಯ ಗುಂಪುಗಳಿಗೆ ವಿತರಿ ಶೇ. 6 ರಷ್ಟಾಗುವ ಬಡ್ಡಿ ಲಾಭದಲ್ಲಿ ತನ್ನ ನೌಕರ ಸಂಬಳ ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪ್ರಚಾರ ಫಂಕ್ಷನ್‌ಗಳಿಗೆ ವ್ಯವಹರಿಸಲಾಗುತ್ತಿದೆ. ಫೈನಾ ವ್ಯವಹಾರದಲ್ಲಿ ಸಫಲವಾಗಿರುವ ಬಡವರ ಬಂ ಹೆಗ್ಗಡೇಜಿಯವರ ಗ್ರಾಮೀಣಾಭಿವೃದ್ಧಿ ಯೋಜನೆ ಬಡ ನಿರ್ಮೂಲನೆ ಯೋಜನೆಯಲ್ಲಿ ವಿಫಲವಾಗಿದೆ.

ರುಡ್‌ಸೆಟ್ ರಾದ್ಧಾಂತ!!

ಉಜಿರೆ ಮತ್ತು ರಾಜ್ಯದ ಕೆಲವೆಡೆ 'ರುಡ್‌ಸೆಟ್' ಪ್ರಾಜೆಕ್ಟ್ ನಡೆಯುತ್ತಿದೆ. ಇದು ಮಣಿಪಾಲದ ದಿವಂ ಟಿ.ಎ. ಪೈ ಕನಸಿನ ಕೂಸು. ಗ್ರಾಮೀಣ ನಿರುದ್ಯೋಗಿಗ ಅನುಕೂಲಕರವಾದ ಈ ಕೌಶಲ್ಯ ಅಭಿವೃದ್ಧಿ ಯೋಜನೆ ಸಿಂಡಿಕೇಟ್ ಬ್ಯಾಂಕ್ ಮತ್ತು ಕೆನರಾ ಬ್ಯಾಂಕ್‌ನ 40% ಬಂಡವಾಳವಿದ್ದರೆ, ಧರ್ಮಸ್ಥಳದ ಹೆಗ್ಗಡೆ ಸಂಸ್ಥಾ ಬರೀ 20% ಇದೆ. ಈ ಯೋಜನೆಗೆ ಎರಡೂ ಬ್ಯಾಂ ಚೇರ್‌ಮನ್‌ಗಳು ಸರದಿಯಂತೆ ಅಧ್ಯಕ್ಷರಾಗುತ್ತಾರೆ. ಹೆಗ್ಗ ಕೇವಲ ಸಲಹೆಗಾರ ಅಥವಾ ಉಪಾಧ್ಯಕ್ಷರು.


ಆದರೆ ಈ ಯೋಜನೆಯ ಯಶಸ್ಸಿನ ಕೀರ್ತಿ ಹೆಗ್ಗಡೆಜೀ ಒಬ್ಬರೇ ಪಡೆಯುತ್ತಿದ್ದಾರೆ. ಇಂಥ ಪ್ರ ಪ್ರಚಾರ ಈ ಹುಸಿ ಬಡವರ ಉದ್ಧಾರಕರಿಗೆ ಸರ್ಕಾರದ ಬ್ಯಾಂಕಿನವರು ಕೊಡುತ್ತಿರುವುದು ವಿಪರ್ಯಾಸವೇ. ಸರ್ಕಾರದ ಹಲವು ಯೋಜನೆಗಳನ್ನು ತನ್ನ ಗ್ರಾ ಅಭಿವೃದ್ಧಿ ಸಂಸ್ಥೆ ಮೂಲಕ ಫಲಾನುಭವಿಗಳಿಗೆ ತಲುಪಿ ಹೆಗ್ಗಡೆ ತಾನೇ ಅದರ ರೂವಾರಿ ಎಂಬ ತೋರಿಸಿಕೊಳ್ಳುತ್ತಿದ್ದಾರೆ. ಹೆಗ್ಗಡೆಯವರ ಈ ಸಣ್ಣತನ ಈ ಹಳ್ಳಿಗಾಡಿನ ಜನರಿಗೂ ಅರ್ಥವಾಗುತ್ತಿದೆ. ಆ ಆಳುವವರು ಮಾತ್ರ ಹೆಗ್ಗಡೆ ಕೃಪಾಕಟಾಕ್ಷಕ್ಕಾಗಿ ಸರ್ಕಾರ ಧರ್ಮಸ್ಥಳಕ್ಕೆ ಒತ್ತೆಯಿಡುತ್ತಿರುವುದು ದುರಂತ!

ಹೆಗ್ಗಡೆ ಸಂಸ್ಥಾನವನ್ನು 'ರಾಷ್ಟ್ರೀಕರಣ' ಮಾಡುವ ತಾ ಯಾರಿಗಿದೆ? ಬೆಳ್ತಂಗಡಿ ಜನರೇ ಬಂಡೆದ್ದು ಈ ಸಾಮ ಕರ್ನಾಟಕದಲ್ಲಿ ವಿಲೀನ ಮಾಡಿಸಬೇಕಾದೀತ ಕರಾವಳಿಯಲ್ಲಿ ಸಣ್ಣ ದಂಗೆಯಂತೂ ಎದ್ದಿದೆ. ಅನಾ ಆಗುವ ಮೊದಲು ಸರ್ಕಾರಿ ಪಂಡಿತರು-ಜಿಲ್ಲಾಡಳಿತ ಎ ಕೊಂಡೀತಾ?

ಕೊಂಕಣಿ ಸಾಹಿತ್ಯ ಅಕಾಡೆಮಿಯ ಬೌದ್ಧಿಕ ದಿವಾಳಿತನ!

ಒಂದು ಪತ್ರ

ಕರ್ನಾಟಕ ರಾಜ್ಯ ಕೊಂಕಣಿ ಸಾಹಿತ್ಯ ಅಕಾಡೆಮಿಯ ವತಿಯಿಂದ ಹಮ್ಮಿಕೊಂಡ 'ಆಮ್ಮಿ ಕೊಂಕ್ಣಿ' ಸಾಂಸ್ಕೃತಿಕ ಮಹೋತ್ಸವವು ನವಂಬರ್ 22 ರಂದು ಮಂಗಳೂರಿನಲ್ಲಿ 'ಅದ್ಭುತ'ವಾಗಿ ಉದ್ಘಾಟಿಸಲ್ಪಟ್ಟು ನಾಲ್ಕು ದಿನಗಳವರೆಗೆ ನಡೆಯಿತು. ಯಾವುದೇ ಭಾಷೆಯ ಸಾಹಿತ್ಯ ಅಕಾಡೆಮಿಯ ಕಾರ್ಯಕ್ರಮ 'ಯಶಸ್ವಿ'ಯಾಗುವುದೆಂದರೆ ಏನರ್ಥ? ನನ್ನ ಪ್ರಕಾರ ಸಾಮಾಜಿಕ ಕಳಕಳಿ ಉಳ್ಳವರನ್ನು ಆಹ್ವಾನಿಸಿ, ಪ್ರಸ್ತುತ ಸಮಾಜವು ಎದುರಿಸುವ ಕಂಟಕಗಳ ಬಗ್ಗೆ, ಸಾಹಿತ್ಯದಲ್ಲಿ ಇದಕ್ಕೆ ಪ್ರತಿರೋಧ ಒಡ್ಡುವ



ಅನಿವಾರ್ಯತೆಯ ಬಗ್ಗೆ ಒಂದಾದರೂ ಚರ್ಚೆ, ವಿಚಾರಸಂಕಿರಣ ಏರ್ಪಡಿಸಿ ಸಾಮಾನ್ಯ ಜನರನ್ನು ಈ ವಿಷಯಗಳ ಬಗ್ಗೆ ಚಿಂತಿಸುವಂತೆ ಮಾಡುವುದು. ಆತಿಯಾದ ಕೋಮುಗಲಭೆಗಳ ಏಟು ತಿಂದ ಮಂಗಳೂರಿನಲ್ಲಿ ಇಂತಹ ವಿಷಯಗಳಿಗೆ ಕೊರತೆಯೆ? ಕೊಂಕಣಿ ಭಾಷೆಯಲ್ಲಿ ಇಂತಹ ಗಂಭೀರ ವಿಷಯಗಳ ಬಗ್ಗೆ ಮಾತಾಡುವವರಿಗೆ ಕೊರತೆ ಇದ್ದರೆ ಇತರ ಭಾಷೆಗಳ ಸಾಹಿತಿ, ಚಿಂತಕರನ್ನಾದರೂ ಆಹ್ವಾನಿಸಬಹುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿಯೇ ಅದೆಷ್ಟೋ ಪ್ರಭಾವಿ, ಇಲ್ಲಿನ ಸಮಾಜದ ನಾಡಿಮಿಡಿತವನ್ನು ಅರಿತ ಚಿಂತಕರಿದ್ದಾರೆ. ಇವನ್ನು ಬಿಟ್ಟು ಸಮಾಜಕ್ಕೆ ಕಂಟಕವಾದವರನ್ನೇ ಆಮಂತ್ರಿಸಿ, ಅವರೊಡನೆ ಮೆರವಣಿಗೆ ಮಾಡುವುದೆಂದರೆ ಕೊಂಕಣಿ ಸಾಹಿತಿಗಳನ್ನು, ಬಿಡಿ, ಜಿಲ್ಲೆಯ ಇತರ ಭಾಷೆಗಳ ಸಾಹಿತಿಗಳೂ, ಜನಸಾಮಾನ್ಯರೂ ನಾಚಿಕೆಪಡಬೇಕಾದ ವಿಷಯ. ಕಾರ್ಯಕ್ರಮದ ಉದ್ಘಾಟನೆಗೆ ಮತ್ತು ಸಮಾರೋಪಕ್ಕೆ ವೇದಿಕೆಯನ್ನು ಅಲಂಕರಿಸಲು ಒಬ್ಬನೇ ಒಬ್ಬ ಪ್ರಭಾವಿ ಚಿಂತಕ ಅಥವಾ ಕಲಾವಿದ ಸಿಗದಿದ್ದುದು ಅಕಾಡೆಮಿಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕುರುಡುತನವನ್ನು ತೋರಿಸುತ್ತದೆ.

ಬಹುಶಃ ಮಂಗಳೂರಿನಲ್ಲಿರುವ 'ಕೊಂಕಣಿ ಸಾಹಿತ್ಯ ಅಕಾಡೆಮಿ' ಎಂಬ ನಾಮಫಲಕ ತನ್ನ ಕೇಂದ್ರದಲ್ಲಿರುವ, ಕೇಂದ್ರ ಪ್ರಜ್ಞೆಯಂತಿರಬೇಕಾದ 'ಸಾಹಿತ್ಯ' ಎಂಬ ಪದವನ್ನು ಮರೆತಿರುವಂತಿದೆ! ಇಲ್ಲದಿದ್ದರೆ ಈ ರೀತಿ ವೇದಿಕೆಯಲ್ಲಿ ರಾಜಕಾರಣಿಗಳನ್ನು, ಧರ್ಮಗುರುಗಳನ್ನು, ಇನ್ನಿತರ ಬಂಡವಾಳಶಾಹಿಗಳನ್ನು ಕುಳ್ಳಿರಿಸಿ ಭಾಷೆ, ಸಂಸ್ಕೃತಿಗಳ ಬಗ್ಗೆ ಒಣಮಾತುಗಳನ್ನು ಉದುರಿಸುತ್ತಿರಲಿಲ್ಲ. ಅಕಾಡೆಮಿಯ ಅಧ್ಯಕ್ಷರು ಈ ಕಾರ್ಯಕ್ರಮವನ್ನು ತಮ್ಮ ಮನೆಯ ಕಾರ್ಯಕ್ರಮವೆಂದು ತಿಳಿದಂತಿದೆ. ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳನ್ನು ನೋಡುವಾಗ ಇದು ಅಕಾಡೆಮಿಯ ಕಾರ್ಯಕ್ರಮವೆ ಅಥವಾ ರಾಜಕೀಯ ಸಮಾವೇಶವೆ ಎಂದು ಗೊಂದಲ ಮೂಡುವಂತಿತ್ತು. ಕೊಂಕಣಿ ಸಾಹಿತ್ಯಕ್ಕೆ ಅಪೂರ್ವ ಕೊಡುಗೆ ನೀಡಿದ, ನೀಡುತ್ತಿರುವ ಮಂಗಳೂರಿನ ಕೆಲವು ಕ್ರಿಶ್ಚಿಯನ್ ಕೊಂಕಣಿ ಸಂಸ್ಥೆಗಳಿಗೂ ಆಹ್ವಾನ ಪತ್ರಿಕೆ ಇರಲಿಲ್ಲ. ಸಾಹಿತ್ಯದ ಬಗ್ಗೆ ಏನೂ ಇಲ್ಲ ಎನ್ನುವುದಕ್ಕೆ ಅಪವಾದವಾಗಿ ಒಂದು ಬಹುಭಾಷಾ ಕವಿಗೋಷ್ಠಿ ಇತ್ತು; ಧಾರಾವಾಹಿಯ ನಡುವೆ ಜಾಹಿರಾತು ಬಂದಂತೆ. ಇದಕ್ಕೆ ಜಯಂತ್ ಕಾಯ್ಕಿಣಿ ಬಂದಿದ್ದಷ್ಟೆ ವಿಶೇಷ.

ಉದ್ಘಾಟನೆಗೂ ಮೊದಲು ನಗರದ ಜ್ಯೋತಿವೃತ್ತದಿಂದ ಪುರಭವನದವರೆಗೆ ಮೆರವಣಿಗೆ ಆಯೋಜಿಸಲಾಗಿತ್ತು. ಅಂದಹಾಗೆ ಈ ಮೆರವಣಿಗೆ ಉದ್ಘಾಟಿಸಿದ್ದು ಬೇರಾರೂ ಅಲ್ಲ- ಕಲ್ಲಡ್ಕ ಪ್ರಭಾಕರ ಭಟ್! ಈ ಮೆರವಣಿಗೆಯ ಮೂಲಕವೇ ಅರಿಯಬಹುದು- ಕೊಂಕಣಿ ಅಕಾಡೆಮಿ ಹಿಡಿದ ದಾರಿ ಯಾವುದೆಂದು! ಸಮಾರೋಪ ಕಾರ್ಯಕ್ರಮಕ್ಕೆ ಹಾಜರಿದ್ದದ್ದು ಮಾಜಿ ಸಚಿವ ಪಾಲೆಮಾರ್! ವಿಸನ್ನಬೇಡ ಇದರ ಬೌದ್ಧಿಕ ದಿವಾಳಿತನಕ್ಕೆ?

ಸಮಾರಂಭವೆಂಬ ವ್ಯಸನಕ್ಕಂಟಿದವರಿಗೆ ಏನಾದರೂ ಆಯೋಜಿಸಿ ಪತ್ರಿಕೆಗಳಲ್ಲಿ ಫೋಟೊ ಬಂದರೆ ಆಯ್ತಷ್ಟೇ. ವರದಿ ಮತ್ತು ಲೆಕ್ಕ ತೋರಿಸಿ ಸರಕಾರದ ಕಣ್ಣಿಗೆ ಮಣ್ಣೆರಚುವುದಷ್ಟೇ. ಅಂದಹಾಗೆ ಈ ರಾಜ್ಯದ ಸರಕಾರಕ್ಕೆ ಕಣ್ಣಿದೆಯಾ?

- ಧೃಷ್ಟಿ ಮಂಗಳೂರು

ಬಂಧುಗಳೆ,

ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಹತ್ತು ವರ್ಷಗಳು ತುಂಬುತ್ತಿರುವ ಈ ಸಂದರ್ಭ ದಲ್ಲಿ ಡಿಸೆಂಬರ್ 29ರಂದು ಮಂಗಳೂರಿನ ಹಮ್ಮಿಕೊಂಡಿರುವಂತಹ ಐಕ್ಯತಾ ಸಮಾವೇ ದಲ್ಲಿ ತಾವೆಲ್ಲರೂ ಹೆಚ್ಚಿನ ಸಂಖ್ಯೆಯ ಭಾಗವಹಿಸಬೇಕಾಗಿ ಕೇಳಿಕೊಳ್ಳುವುದರೊಂದಿ ತಂತಮ್ಮ ಶಕ್ತ್ಯಾನುಸಾರ ಧನಸಹಾಯ ಮಾಡಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ. ತವ ದೇಣಿಗೆಯನ್ನು ನಗದು ಯಾ ಚೆಕ್ಕು ಮೂಲ ನೀಡಬಹುದು ಅಥವಾ ಈ ಕೆಳಗಿನ ಬ್ಯಾಂ ಖಾತೆಗೆ ಜಮಾ ಮಾಡಬಹುದು:

ಬ್ಯಾಂಕ್: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ

ಶಾಖೆ: ಪೋರ್ಟ್ ರೋಡ್, ಮಂಗಳೂರ

ಖಾತೆದಾರರ ಹೆಸರು:

ಬಾಕ್ರಬೈಲು ಸುರೇಶ್ ಭಟ್

ಖಾತೆ ಸಂಖ್ಯೆ: 10981097818

ಐಎಫ್‌ಎಸ್ ಕೋಡ್: SBIN000087

- ಕೇಂದ್ರ ಸಮಿ

ಕರ್ನಾಟಕ ಕೋಮು ಸೌಹಾರ್ದ ವೇದಿ

ಮುಕ್ತ ವಿವಿಯಲ್ಲಿ ಕುಲಪತಿಯ ಕಿರಿಕ್ಕು



...ಭ್ರಷ್ಟಾಚಾರದ ನಾನಾ ನಮೂನೆಗಳನ್ನು ಕಂಡುಕೇಳಿರುವ ...ಪ್ರ ಇಂಥಾದ್ದೊಂದು ಹಗರಣವನ್ನು ಇದುವರೆಗೆ ...ರಲಿಲ್ಲ. ವಿಶ್ವವಿದ್ಯಾಲಯದ ಕುಲಪತಿಗಳ ದಡ್ಡ ಮಗ ...ಮ ಅಂಕ ಪಡೆದರೂ ಆತ ಉನ್ನತ ಶಿಕ್ಷಣಕ್ಕೆ ಪ್ರವೇಶ ...ಯಲು ಇಡೀ ಯೂನಿವರ್ಸಿಟಿಯ ಪ್ರವೇಶಾತಿ ...ನದಂಡವನ್ನೇ ಬದಲಾಯಿಸಿದ ಭೂಪ ಈಗ ...ದಿದ್ದಿದ್ದಾನೆ. ಆತನೇ ಡಾ.ಕೆ.ಎಸ್.ರಂಗಪ್ಪ ಮೈಸೂರಿನ ...ನಸ ಗಂಗೋತ್ರಿಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ...ವಿದ್ಯಾಲಯದ ಹಾಲಿ ವೈಸ್‌ಛಾನ್ಸಲರ್.

...ಈ ರಂಗಪ್ಪನ ಪರಾಕ್ರಮ ಇಷ್ಟಕ್ಕೇ ಮುಗಿಯುವುದಿಲ್ಲ. ...ನಾ ರಂಗುಗಳಲ್ಲಿ ಬಿಚ್ಚಿಕೊಳ್ಳುತ್ತಿರುವ ಈತನ ...ವಹಾರಗಳ ಕುರಿತು ಇತ್ತೀಚೆಗೆ ಹೈಕೋರ್ಟ್‌ನಲ್ಲಿ ...ಪಿಟಿಷನ್- 11444/2012 ನಂಬರಿನ ಸಾರ್ವಜನಿಕ ...ಸಕ್ತಿ ಮೊಕದ್ದಮೆಯೊಂದು ದಾಖಲಾಗಿದೆ.

ಪ್ರಕರಣ 1

...ಮಾನ್ಯ ರಂಗಪ್ಪನವರ ಶೋಭೆ ಹೆಚ್ಚಿಸಲೆಂಬಂತೆ ಅವರಿಗೆ ...ಭಿತ್.ಆರ್. ಎಂಬ ವಂಶೋದ್ಧಾರಕ ಮಗನಿದ್ದಾನೆ. ...ಪ್ಪನ ಪ್ರತಿಭೆಯ ಪಡಿಯಚ್ಚಿನಂತಿರುವ ಈ ಬಾಲಕ ...06ರಲ್ಲಿ ಪಿಯುಸಿ ಕಲಿಯುತ್ತಿದ್ದ 07-06-2006ರಂದು ...ಸೂರು ವಿವಿ ಮಾಲಿಕ್ಯುಲಾರ್ ಬಯಾಲಜಿ ವಿಷಯದಲ್ಲಿ ...ಐ ವರ್ಷಗಳ ಅವಧಿಯ ಇಂಟಿಗ್ರೇಟೆಡ್ ಎಂಎಸ್ಸಿ ...ರ್ಸ್‌ಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ...ಹ್ವಾನಿಸಿತು. ಈ ಕೋರ್ಸ್‌ಗೆ ಅರ್ಜಿ ಸಲ್ಲಿಸಲು ವಿವಿ ...ನಿಗೊಳಿಸಿದ್ದ ಕನಿಷ್ಠ ಮಾನದಂಡದ ಪ್ರಕಾರ ಅಭ್ಯರ್ಥಿಯು ...ಯುಸಿ ವಿಜ್ಞಾನ ವಿಷಯಗಳಲ್ಲಿ ಸರಾಸರಿ 55% ಅಂಕ ...ಗೂ ಜೀವಶಾಸ್ತ್ರ ವಿಷಯದಲ್ಲಿ 55% ಅಂಕ ...ಡೆದಿರಬೇಕು.

...ವಾಸ್ತವದಲ್ಲಿ ಈ ಕೋರ್ಸ್‌ನ ಪ್ರವೇಶಾತಿ ಮತ್ತು ...ಟ್ರೆನ್ಸ್ ಟೆಸ್ಟ್‌ಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ...ಗಿದಾಗ ರಂಗಪ್ಪನ ಸುಪುತ್ರ ಇನ್ನೂ ಪಿಯುಸಿ ಪಾಸೇ ...ರಲಿಲ್ಲ. ಆತನಿಗೆ ಮಾರ್ಕ್ಸ್‌ಕಾರ್ಡ್ ವಿತರಣೆಯಾಗಿದ್ದೇ ...-08-2006ರಂದು. ಆತ ಗಳಿಸಿದ್ದ ಅಂಕಗಳೂ ತೀರಾ ...ಮೆಯಿತ್ತು, ಜೀವಶಾಸ್ತ್ರದಲ್ಲಿ 47% ಮತ್ತು ಸರಾಸರಿ ...% ಮಾತ್ರ. ಹೀಗಿದ್ದರೂ ಆರ್. ಶೋಭಿತ್‌ನಿಗೆ ...ರ್ಸ್‌ಗೆ ಪ್ರವೇಶ ಸಿಕ್ಕಿಬಿಟ್ಟಿತು. ಯಾಕೆಂದರೆ ಆತ ...ಪ್ಪನ ಸುಪುತ್ರ. ಆಗ ಪ್ರೊಫೆಸರ್ ರಂಗಪ್ಪನವರು ...ಮಿಷನ್ ಕಮಿಟಿಯ ಸದಸ್ಯರು!

...ನಡೆದದ್ದಿಷ್ಟು. 19-07-2006ರಂದು ನಡೆದ ...ಡ್ಮಿಷನ್ ಕಮಿಟಿ ಸಭೆಯಲ್ಲಿ ಕನಿಷ್ಠ ಅಂಕಗಳ ...ಅರ್ಹತೆಯನ್ನು 45%ಗೆ ಇಳಿಸಿ ಶೋಭಿತ್‌ನ ದಾರಿ ...ಸುಗಮಗೊಳಿಸಲಾಯಿತು. ಆದರೆ ಈ ಹಂತದಲ್ಲಿ ಎಲ್ಲಾ ... ನಿಯಮಗಳನ್ನು ಗಾಳಿಗೆ ತೂರಿದ ಕಮಿಟಿ ಈ ...ಷಯವನ್ನು ಯೂನಿವರ್ಸಿಟಿಯ ಗಮನಕ್ಕೂ ತಂದಿರಲಿಲ್ಲ. ... 27-03-2008ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ...ಪ್ರಕರಣದ ಬಗ್ಗೆ ಆಕ್ಷೇಪ ವ್ಯಕ್ತವಾಗಿ ಅವ್ಯವಹಾರದ ...ಬಗ್ಗೆಗೆಂದು ಪ್ರೊ.ಶಿವರಾಮು ಕಾಡನಕುಪ್ಪೆಯವರ ...ತೃತ್ವದಲ್ಲಿ ಒಂದು ಸಬ್‌ಕಮಿಟಿ ನೇಮಿಸಲಾಯಿತು. ...ಆದರೆ ದುರದೃಷ್ಟವಶಾತ್ ಈ ಸಮಿತಿ ನೀಡಿದ ವರದಿಯಲ್ಲಿ ...ಮಿಷನ್ ಪ್ರಕ್ರಿಯೆಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ ...ದಿತ್ತು. ಈ ವರದಿಯ ತನಿಖಾ ಸಾಮರ್ಥ್ಯ ಕಂಡು ... ಮೈಸೂರು ವಿವಿಗೆ ವಿವಿಯೇ ಮೂಗಿನ ಮೇಲೆ ...ಬೆರಳಿಟ್ಟಿತ್ತು, ಅ ಮಾತು ಬೇರೆ.

[illegible] ಅವರ ವರದಿಯನ್ನು [illegible] ...ಶದಲ್ಲಿ ಮತ್ತೊಂದು [illegible] ... [illegible]

ವರ್ಷವಾಗುತ್ತಾ ಬಂದಿದ್ದರೂ ಇದಿನ್ನೂ ತನ್ನ ವರದಿಯನ್ನೇ ನೀಡಿಲ್ಲ. ಈ ಅವಧಿಯಲ್ಲಿ ರಂಗಪ್ಪನ ಸುಪುತ್ರ 2011ರಲ್ಲಿ ತನ್ನ ಈ ವಿವಾದಿತ ಕೋರ್ಸ್ ಪೂರ್ಣಗೊಳಿಸಿಕೊಂಡಿದ್ದಾನೆ. ತನ್ನ ದಡ್ಡ ಮಗನಿಗೆ ಅಡ್ಮಿಷನ್ ಕೊಡಿಸಲು ರಂಗಪ್ಪ ಯೂನಿವರ್ಸಿಟಿಯ ಮಾನದಂಡಗಳನ್ನೇ ಬದಲಾಯಿಸುವಂತೆ ಮಾಡಿದ ಆರೋಪದಡಿ ಈಗ ಹೈಕೋರ್ಟ್‌ನ ಕಟಕಟೆಯಲ್ಲಿ ನಿಲ್ಲಬೇಕಾಗಿ ಬಂದಿದೆ.

ಪ್ರಕರಣ 2

ಮತ್ತೊಂದು ಪ್ರಕರಣ ಇನ್ನಷ್ಟು ಸ್ವಾರಸ್ಯಕರವಾಗಿದೆ. ಇದರಲ್ಲಿ ಸ್ವತಃ ರಂಗಪ್ಪನೇ ತನ್ನ ಪ್ರತಿಭೆಯನ್ನು ಪ್ರದರ್ಶಿಸಲು ಮತ್ತೊಬ್ಬರ ಕೃತಿಯನ್ನು ಕದ್ದು ಸಿಕ್ಕಿಬಿದ್ದಿದ್ದಾನೆ.

ಕೆ.ಎಸ್.ರಂಗಪ್ಪ ಎಂಬ ವ್ಯಕ್ತಿಯ ಪ್ರೊಫೈಲ್ ನೋಡಿದರೆ ಯಾರೇ ಆದರೂ ತಲೆದೂಗಲೇಬೇಕು. 1976ರಲ್ಲಿ ಬಿಎಸ್ಸಿ, 1978ರಲ್ಲಿ ಎಂಎಸ್ಸಿ, 1982ರಲ್ಲಿ ಪಿಎಚ್‌ಡಿ, 1998ರಲ್ಲಿ ಡಿಎಸ್ಸಿ ಸ್ವತಂತ್ರ ಸಂಶೋಧನೆ, 2004ರಲ್ಲಿ ಲಂಡನ್‌ನ ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿ ಸಂಸ್ಥೆಯಿಂದ ಫೆಲೋಶಿಪ್, 2006ರಲ್ಲಿ ದೇಶದ ಗೌರವಾನ್ವಿತ ಸಂಸ್ಥೆ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್‌ನಿಂದ ಫೆಲೋಶಿಪ್ - ಹೀಗೆ ಬಹಳ ಉದ್ದದ ಪಟ್ಟಿಯೇ ಇದೆ. ಆದರೂ ಇಂಥಾ ರಂಗಪ್ಪ ಎಂಥಾ ಎಡವಟ್ಟು ಮಾಡಿಕೊಂಡಿದ್ದಾರೆ ನೋಡಿ.

2008ರಲ್ಲಿ ರಂಗಪ್ಪ ಮತ್ತು ಸಂಗಡಿಗರು ರಾಸಾಯನ ಶಾಸ್ತ್ರದಲ್ಲಿ ಕೈನೆಟಿಕ್ಸ್ ಆಫ್ ಆಕ್ಸಿಡೇಷನ್ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಪ್ರಬಂಧವನ್ನು 'ದ ಜರ್ನಲ್ ಆಫ್ ಫಿಸಿಕಲ್ ಆರ್ಗಾನಿಕ್ ಕೆಮಿಸ್ಟ್ರಿ' ಎಂಬ ಜರ್ನಲ್‌ನಲ್ಲಿ ಪ್ರಕಟಿಸಿ ಕ್ಯಾಮೆರಾಗಳಿಗೆ ಪೋಸು ಕೊಟ್ಟಿದ್ದರು. ಅಲ್ಲೇ ಆಗಿದ್ದು ಎಡವಟ್ಟು. ಏನೆಂದರೆ ಈ ವೈಜ್ಞಾನಿಕ ಪ್ರಬಂಧದ ಮೂಲಕರ್ತೃಗಳಿಗೆ ತಮ್ಮ ಕೃತಿಚೋರರ ಕೈಗೆ ಸಿಕ್ಕಿದೆ ಎಂಬುದು ಗೊತ್ತಾಗಿಹೋಯಿತು.

ಈ ಪ್ರಬಂಧದ ಮೂಲ ಸಂಶೋಧಕರಾದ ಜಿ.ವಿಜಯಲಕ್ಷ್ಮಿ, ಎಂ.ಆದಿನಾರಾಯಣ ಮತ್ತು ಪಿ.ಜಯಪ್ರಕಾಶ್‌ರಾವ್ ಎಂಬುವವರು ಮೂಲತಃ ಈ ಪ್ರಬಂಧವನ್ನು 'ದ ಇಂಡಿಯನ್ ಜರ್ನಲ್ ಆಫ್ ಬಯೋ ಕೆಮಿಸ್ಟ್ರಿ ಆಂಡ್ ಬಯೋ ಫಿಸಿಕ್ಸ್' ಎಂಬ ಜರ್ನಲ್‌ನಲ್ಲಿ ಕೆಲವು ತಿಂಗಳ ಮುಂಚಿತವಾಗಿಯೇ ಪ್ರಕಟಿಸಿದ್ದರು. ಹೀಗಾಗಿ ತಮ್ಮ ಕೃತಿಯನ್ನು ಕದ್ದು ತಮ್ಮ ಹೆಸರಿನಲ್ಲಿ ಪ್ರಕಟಪಡಿಸಿದ್ದಾರೆಂದು ಆರೋಪಿಸಿ, ಕೃತಿಚೋರರ ಮೇಲೆ ಸೂಕ್ತ ಕ್ರಮಕ್ಕೆ ಆಗ್ರಹಿಸಿ ಯುಜಿಸಿಗೆ, ರಾಜ್ಯಪಾಲರಿಗೆ, ಮೈಸೂರು ವಿವಿಯ ರಿಜಿಸ್ಟ್ರಾರ್‌ಗೆ ಮತ್ತು ಉನ್ನತ ಶಿಕ್ಷಣ ಇಲಾಖೆಗೆ ದೂರು ನೀಡಿದರು. ರಂಗಪ್ಪನವರ ಕೃತಿಚೌರ್ಯದ ಬಗ್ಗೆ ಪತ್ರಿಕೆಗಳಲ್ಲೂ ಸುದ್ದಿಯಾಗಿತ್ತು.

ಈ ವಿಷಯ ಹೊರಬೀಳುತ್ತಿದ್ದಂತೆ ವಿವಿಯ ಸಿಂಡಿಕೇಟ್ ಸದಸ್ಯರಾದ ಪ್ರೊಫೆಸರ್ ಈಶ್ವರಪ್ಪ ಎಂಬುವವರು ಈ ವಿಷಯವನ್ನು ಪ್ರಸ್ತಾಪಿಸಿ ಸಿಂಡಿಕೇಟ್ ಸಭೆಯಲ್ಲಿ ಚರ್ಚೆಗೆ ಒತ್ತಾಯಿಸಿದರು. ಅದೆಷ್ಟೇ ದೂರು ನೀಡಿದರೂ ಈ ಕೃತಿಚೋರರ ವಿಷಯವನ್ನು ಸಿಂಡಿಕೇಟ್ ತನ್ನ ಅಜೆಂಡಾಕ್ಕೆ ತೆಗೆದುಕೊಳ್ಳಲಿಲ್ಲವೆಂದರೆ ರಂಗಪ್ಪನವರ ಕೆಪಾಸಿಟಿ ಎಷ್ಟಿರಬಹುದು ಎಂಬುದನ್ನು ನಾವು ಊಹಿಸಬಹುದು?

ಪ್ರಕರಣ 3

ಇದೇ ವರ್ಷ ಮಾನ್ಯ ರಂಗಪ್ಪನವರ ಹೆಸರು ಮತ್ತೊಂದು ಹಗರಣದಲ್ಲಿ ಕೇಳಿಬಂತು. ಕೆಮಿಸ್ಟ್ರಿ ಪ್ರೊಫೆಸರ್ ಆಗಿದ್ದ ರಂಗಪ್ಪನವರು ಕವಿತಾ ಎಂಬ ತಮ್ಮ ಶಿಷ್ಯೋತ್ತಮೆಗೆ ಡಾಕ್ಟರೇಟ್ ಪದವಿಯನ್ನು ದಯಪಾಲಿಸಲು ನಡೆಸಿದ ಕಸರತ್ತು ಬಿಸಿಬಿಸಿ ಸುದ್ದಿಯಾಗಿ ಪ್ರಚಾರವಾಯಿತು. ಪಿಎಚ್‌ಡಿಗೆ ಸಂಬಂಧಿಸಿದ ಪ್ರೌಢ ಪ್ರಬಂಧವನ್ನು ಪರಿಶೀಲಿಸಬೇಕಾಗಿದ್ದ ಮುಂಬೈ ವಿವಿಯ ಪ್ರೊಫೆಸರ್ ಅಕಮಂಚಿ ಎಂಬುವವರು ಪ್ರಬಂಧ ತಮ್ಮ ಕೈಸೇರುವ ಮುಂಚೆಯೇ ರಂಗಪ್ಪನವರ ಪ್ರಿಯ ಶಿಷ್ಯೆ ಕವಿತಾಳಿಗೆ ಡಾಕ್ಟರೇಟ್ ಪದವಿ ಕೊಡಬಹುದೆಂಬ ಶಿಫಾರಸ್ಸು ಪತ್ರವನ್ನು ಕಳಿಸಿಕೊಟ್ಟುಬಿಟ್ಟಿದ್ದರು.

ಈ ದಂಧೆ ಬಹಿರಂಗಗೊಂಡು ಪತ್ರಿಕೆಗಳಲ್ಲಿ ಪ್ರಚಾರವಾಗಿ, ಮಾಧ್ಯಮದವರು ಮುಂಬೈ ಪ್ರೊಫೆಸರನ್ನು ಪ್ರಶ್ನಿಸಲಾಗಿ ಆತ ಹೇಳಿದ್ದಿಷ್ಟು: "ಪ್ರೊಫೆಸರ್ ರಂಗಪ್ಪ ಮತ್ತು ನಾನು ಬಹಳ ವರ್ಷಗಳಿಂದಲೂ ಗೆಳೆಯರು. ನಾವು ಆಗಾಗ ಹಲವಾರು ವಿಷಯಗಳನ್ನು ಚರ್ಚೆ ಮಾಡುತ್ತಿರುತ್ತೇವೆ. ಇಂಥಾ ಒಂದು ಸಂದರ್ಭದಲ್ಲಿ ಕಂಪ್ಯೂಟರ್‌ನಲ್ಲಿದ್ದ ಕುಮಾರಿ ಕವಿತಾಳ ಪ್ರಬಂಧದ ಬಗ್ಗೆ ತಿಳಿದುಕೊಂಡಿದ್ದೆ." ಈ ವಿಷಯದಲ್ಲಿ ಮಾನ್ಯ ಪ್ರೊಫೆಸರ್‌ಗಳು ನೀತಿನಿಯಮಗಳನ್ನು ಮಾತ್ರವಲ್ಲದೆ ಮಾನಮರ್ಯಾದೆಗಳನ್ನೂ ಮೀರಿ ಕೂತಿದ್ದರು.

ಈ ಎಲ್ಲಾ ಅವಾಂತರಗಳ ನಡುವೆ 2007ರ ಅಕ್ಟೋಬರ್‌ನಲ್ಲಿ ಮೈಸೂರು ವಿವಿಯ ಕುಲಪತಿಯ ಹುದ್ದೆ ತೆರವಾಯಿತು. ಈ ಸಂದರ್ಭವನ್ನು ಪ್ರತಿಭಾವಂತರಾದ ರಂಗಪ್ಪನವರು ಮಿಸ್ ಮಾಡಿಕೊಳ್ಳಲು ಹೇಗೆ ಸಾಧ್ಯ ಹೇಳಿ? ಹಾಗಾಗಿ ತಾವೂ ಕೂಡ ಸ್ಪರ್ಧೆಗೆ ನಿಂತರು. ಕುಲಪತಿ ಹುದ್ದೆಗೆ ನೇಮಕಾತಿ ಮಾಡಲಿಕ್ಕಾಗಿ ಆಯೋಜಿತವಾಗಿದ್ದ ಸರ್ಚ್ ಕಮಿಟಿ ನಿಯಮದ ಪ್ರಕಾರ ಮೂರು ಮಂದಿಯ ಹೆಸರುಗಳ ಪ್ರಸ್ತಾಪವನ್ನು ಸರ್ಕಾರಕ್ಕೆ ಕಳಿಸಿಕೊಟ್ಟಿತು. ಅದರಲ್ಲಿ ಮಾನ್ಯ ರಂಗಪ್ಪನ ಹೆಸರೂ ಇತ್ತು.

ರಂಗಪ್ಪನ ಮೇಲೆ ಹಲವಾರು ಗಂಭೀರ ಆರೋಪಗಳಿರುವುದರಿಂದ ಕುಲಪತಿ ಹುದ್ದೆಗೆ ಅವರ ಹೆಸರನ್ನು ಸೂಚಿಸಿದ್ದರ ವಿರುದ್ಧ ಹಲವರು ದನಿಯೆತ್ತಿದರು. ಈ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮೈಸೂರು ವಿವಿಯ ರಿಜಿಸ್ಟ್ರಾರ್‌ಗೆ ನಿರ್ದೇಶನ ನೀಡಿ ಈ ಬಗ್ಗೆ ತನಿಖೆ ನಡೆಸುವಂತೆ ಪೊಲೀಸ್ ಕಂಪ್ಲೈಂಟ್ ಕೊಟ್ಟು ಅದರ ಫಲಶೃತಿಯ ಬಗ್ಗೆ 5 ದಿನಗಳಲ್ಲಿ ವರದಿ ನೀಡುವಂತೆ ತಿಳಿಸಿದರು.

ಸರ್ಕಾರದ ನಿರ್ದೇಶನದಂತೆ ಈ ಬಗ್ಗೆ ರಿಜಿಸ್ಟ್ರಾರ್ ಮತ್ತು ಸಿಐಡಿಯ ಡಿಐಜಿ ಮಟ್ಟದ ತನಿಖೆಯೂ ನಡೆಯಿತು. ಈ ಎಲ್ಲಾ ವರದಿಗಳು ತಪ್ಪಿತಸ್ಥರ ವಿರುದ್ಧ ಕಾನೂನುಕ್ರಮ ಕೈಗೊಳ್ಳಬೇಕೆಂದು ಸ್ಪಷ್ಟವಾಗಿ ಸೂಚಿಸಿದ್ದರೂ ಕೂಡ ಮೈಸೂರು ವಿವಿ ಇದುವರೆಗೂ ಯಾವುದೇ ನಿರ್ದಿಷ್ಟ ಕ್ರಮ ಕೈಗೊಂಡಿಲ್ಲ ಮಾತ್ರವಲ್ಲ, ಮಾನ್ಯ ರಂಗಪ್ಪ ಏನೆಲ್ಲಾ ಹಗರಣಗಳಲ್ಲಿ ಸಿಕ್ಕಿಬಿದ್ದರೂ ಅದ್ಯಾವುದನ್ನೂ ಗಂಭೀರವಾಗಿ ಪರಿಗಣಿಸಲೇ ಇಲ್ಲ.

ವಿವಿಯ ಕುಲಪತಿ ಹುದ್ದೆಗೆ ಸೂಚಿಸಲಾದ ಕಳಂಕಿತರ ಪಟ್ಟಿಯನ್ನು ರಾಜ್ಯಪಾಲರು ತಿರಸ್ಕರಿಸಿ ಹೊಸದಾಗಿ ಪಟ್ಟಿ ಕಳಿಸುವಂತೆ ಸೂಚಿಸಿದರು. ಹೀಗೆ ರಂಗಪ್ಪನ ಹೆಸರು ಇದ್ದ ಪಟ್ಟಿ ತಿರಸ್ಕರಿಸಿದ್ದನ್ನು ಪ್ರಶ್ನಿಸಿ ಮರಿತಿಬ್ಬೇಗೌಡ ಎಂಬುವವರು ಹೈಕೋರ್ಟ್‌ನಲ್ಲಿ ಪಿಐಎಲ್ ಹೂಡಿದರು. ಆದರೆ ಘನ ನ್ಯಾಯಾಲಯವು ರಾಜ್ಯಪಾಲರ ಆದೇಶವನ್ನು ಎತ್ತಿಹಿಡಿದು ಮರಿತಿಬ್ಬೇಗೌಡರ ಪಿಐಎಲ್‌ಅನ್ನು ವಜಾಗೊಳಿಸಿತು.

ಈ ಅವಾಂತರಗಳು ರಾಜ್ಯ ವಿಧಾನಸಭೆಯಲ್ಲೂ ಚರ್ಚೆಗೆ ಗ್ರಾಸವಾಯಿತು. ಭಾರೀ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ವಿಚಾರಣೆ ನಡೆಸಲು ಸರ್ಕಾರ ಆದೇಶ ಹೊರಡಿಸಿದೆ.


ಮೈಸೂರು ವಿವಿಯಲ್ಲಿ ಇಷ್ಟೆಲ್ಲಾ ಹಾಡುಹಗಲೇ ಅವ್ಯವಹಾರಗಳು ನಡೆಯುತ್ತಿದ್ದರೂ ತಪ್ಪಿತಸ್ಥರ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ, ಬದಲಾಗಿ ಮಾನ್ಯ ರಂಗಪ್ಪನನ್ನು 2009ರ ಡಿಸೆಂಬರ್‌ನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಕ ಮಾಡಲಾಗಿದೆ. ಅಂದಿನಿಂದ ಇಂದಿನವರೆಗೂ ಹೇಳೋರು ಕೇಳೋರು ಯಾರೂ ಇಲ್ಲದಂತೆ ಈ ಪ್ರತಿಭಾವಂತ ಕೆ.ಎಸ್.ಒ.ಯುನಲ್ಲೇ ಗೂಟ ಹೊಡೆದು ಕೂತುಬಿಟ್ಟಿದ್ದಾರೆ.

ಇದನ್ನೆಲ್ಲಾ ಕಣ್ಣಾರೆ ಕಂಡು ರೋಸಿಹೋಗಿದ್ದ ವಿದ್ಯಾರ್ಥಿ ಸಂಘಟನೆಗಳು ಹಾಗೂ ಉಪನ್ಯಾಸಕರು ನಾನಾರೀತಿಯಲ್ಲಿ ತಮ್ಮ ಪ್ರತಿರೋಧ ತೋರುತ್ತಾ ಬಂದಿದ್ದಾರೆ. ಮೈಸೂರು ಯೂನಿವರ್ಸಿಟಿ ಟೀಚರ್ಸ್ ಅಸೋಸಿಯೇಷನ್‌ನವರು ಈ ಹಗರಣಗಳ ಬಗ್ಗೆ ರಾಜ್ಯಪಾಲರಿಗೆ ಅಹವಾಲು ಸಲ್ಲಿಸಿ ಸಿಐಡಿ ವಿಚಾರಣೆಗೆ ಕಾರಣವಾದರು. ಅದೇ ರೀತಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯ ಅಧ್ಯಕ್ಷರಾದ ಕೆ.ಎಸ್.ಶಿವರಾಮ್ ಎಂಬುವವರು ಈ ರಂಗಪ್ಪನ ಜೊತೆಗೆ ಕರ್ನಾಟಕ ಸರ್ಕಾರ, ಮೈಸೂರು ವಿವಿ ಮುಂತಾದವರ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿದ್ದಾರೆ. ಆದರೆ ನಾನಾ ಹಗರಣಗಳನ್ನು ಹಾಸಿಹೊದ್ದಿರುವ ಮಾನ್ಯ ಕುಲಪತಿ ರಂಗಪ್ಪನವರು ಇನ್ನೇನು ನಿವೃತ್ತಿಯ ಅಂಚಿಗೆ ಬಂದುನಿಂತಿದ್ದಾರೆ. ಹೀಗಿರುವಾಗ ನಮ್ಮ ದೇಶದಲ್ಲಿರುವ ನ್ಯಾಯ(ಸ)ವಾದ [illegible] [illegible] ...

■ ಮೊಟ್ಟೆಪಾಳ್ ನರಸಿಂಹಮೂರ್ತಿ

ನೇಮಕಾತಿ ಅವ್ಯವಹಾರ

2007ರ ಜುಲೈನಲ್ಲಿ ಇಂಥದೇ ಒಂದು ಹಗರಣ ನಡೆಯಲಿತ್ತು, ಬೋಧಕೇತರ ಸಿಬ್ಬಂದಿಯ 387 ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ತನ್ನ ಅವಧಿಯ ಕೊನೆಯ ದಿನಗಳಲ್ಲಿ ಅಂದಿನ ವಿ.ಸಿ. ಸುಧಾರಾವ್ ಮುಂದಾಗಿದ್ದರು. ಆ ಸಂದರ್ಭದಲ್ಲಿ ಹತ್ತಾರು ವರ್ಷಗಳಿಂದ ಸಂಸ್ಥೆಯಲ್ಲಿ ದುಡಿಯುತ್ತಿದ್ದ ಸುಮಾರು 200 ಮಂದಿ ತಾತ್ಕಾಲಿಕ ನೌಕರರು ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿಯನ್ನು ಅಟಕಾಯಿಸಿಕೊಂಡು ತಮ್ಮ ಅಹವಾಲನ್ನು ಮುಂದಿಟ್ಟರು. ಇಂಥಾ ಸನ್ನಿವೇಶದಲ್ಲಿ ತಾತ್ಕಾಲಿಕ ನೌಕರರನ್ನು ನೇಮಕ ಮಾಡಿಕೊಳ್ಳಬೇಕೆಂಬ ಆದೇಶ ಹೊರಬಿದ್ದಿತ್ತು, ಹೀಗಾಗಿ ನೇಮಕಾತಿಯಲ್ಲಿ ಹಣ ಬಾಚಲು ನಿಂತಿದ್ದವರ ಅರ್ಥ ಆದಾಯಕ್ಕೆ ಕಲ್ಲುಬಿದ್ದಂತಾಗಿತ್ತು, ಹೀಗೆ ವಿವಿಯ ಆವರಣದಲ್ಲಿ ಅಗೆದಷ್ಟೂ ಹಗರಣಗಳ ಗಣಿಯೇ ಹೊರಬರುತ್ತದೆ.



ಜೈಲಿನಲ್ಲಿ ರಂಗಪ್ಪ

ಇಲ್ಲಿಗೆ ಕೆಲ ತಿಂಗಳುಗಳ ಹಿಂದೆ ಮುಕ್ತ ವಿವಿಯ ಕುಲಪತಿ ರಂಗಪ್ಪನವರು ಮೈಸೂರು ಜಿಲ್ಲಾ ಕಾರಾಗೃಹದಲ್ಲಿ ಒಂದು ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಅಂದು ಕೇಂದ್ರ ಕಾರಾಗೃಹದಲ್ಲಿ ಕೆಎಸ್‌ಒಯುನ ಒಂದು ಸ್ಟಡಿ ಸೆಂಟರ್‌ಅನ್ನು ಪ್ರಾರಂಭಿಸಿದ ರಂಗಪ್ಪ ಜೈಲುವಾಸಿಗಳಿಗೆ ಅಧ್ಯಯನ ಸಾಮಗ್ರಿ ವಿತರಣೆ ಮಾಡಿದರು. ಮೆರಿಟ್ ಪಡೆದವರಿಗೆ ಬಹುಮಾನದ ಭರವಸೆಯನ್ನೂ ನೀಡಿದ್ದಾರೆ. ಈ ಸಾಧನೆಯನ್ನು ಇಡೀ ರಾಜ್ಯದಲ್ಲೇ ಪ್ರಪ್ರಥಮ ಎಂದು ಮಾಧ್ಯಮಗಳ ಪರಾಕು ಕೂಡ ರಂಗಪ್ಪನಿಗೆ ಸಿಕ್ಕಿತ್ತು.

ಪರೀಕ್ಷೆಗಳನ್ನು ಜೈಲಿನಲ್ಲೇ ನಡೆಸ[illegible] ... [illegible] ರಂಗಪ್ಪನಿಗೆ ಈಗ [illegible]

ನನ್ನ ಅಜ್ಜ ಧಾರವಾಡ (ಈಗಿನ ಗದಗ) ಜಿಲ್ಲೆಯ ನರಗುಂದ ತಾಲೂಕಿನ ಸುರಕೋಡ ಗ್ರಾಮದಿಂದ ವಲಸೆ ಬಂದು ರಾಮದುರ್ಗದಲ್ಲಿ ನೆಲೆ ನಿಂತಿದ್ದ. ತನ್ನ ಪಾಲಿನ ಜಮೀನ(ಈಗ ಸಾಕಷ್ಟು ಬೆಲೆ ಬಂದಿರುವ)ನ್ನು ತನ್ನ ಬಂಧುಗಳಿಗೆ ಬಿಟ್ಟುಕೊಟ್ಟು ಬಂದದ್ದಕ್ಕೆ ಮುಂದೆಂದೂ ಎಳ್ಳಷ್ಟೂ ಪಶ್ಚಾತ್ತಾಪಪಡಲಿಲ್ಲ. ನೇಕಾರಿಕೆಯನ್ನು ವೃತ್ತಿಯಾಗಿ ಮಾಡಿಕೊಂಡು ಸಾಕಷ್ಟು ಕಷ್ಟಪಟ್ಟು ದುಡಿದು ಮನೆಯಲ್ಲಿ ನಾಲ್ಕು ಮಗ್ಗಗಳನ್ನು ಹಾಕಿ ಆಳುಗಳನ್ನಿಟ್ಟುಕೊಂಡು ದುಡಿಸಿ ಕೊಳ್ಳುತ್ತಾ ತಾನೂ ಮೈಮುರಿದು ದುಡಿಯತೊಡಗಿದ. ತನ್ನ ರಟ್ಟೆಯನ್ನೇ ಆಶ್ರಯಿಸಿ ಮುಂದೆ ಬಂದ. ಇಂತಹವನಿಗೆ ತನ್ನ ಏಕೈಕ ಸುಪುತ್ರಿಯನ್ನು ಕೊಟ್ಟು ಮದುವೆ ಮಾಡಲು ಮುಂದೆ ಬಂದ ವಿಧವೆಯೊಬ್ಬಳ ಮೂರು ಎಕರೆ ಭೂಮಿಯನ್ನು ಮಾತ್ರ ತನಗೆ ಬೇಡವೆಂದವನು ನನ್ನಜ್ಜ.

ಅಜ್ಜ ತನ್ನ ದುಡಿಮೆಯಿಂದ ಸ್ವಂತಕ್ಕೊಂದು ಮನೆ ಮಾಡಿಕೊಂಡ. ಮುಂದೆ ತನಗೊಂದು ಗಂಡು ಮಗುವಾಯಿತೆಂದು ಅವನು ಖುಷಿಪಡಲಿಲ್ಲ. ಕಾರಣ? ಮೂಲಾ ನಕ್ಷತ್ರದಲ್ಲಿ ಹುಟ್ಟಿದ್ದರಿಂದ ತನ್ನ ಮಗ ತನ್ನ ತಾಯಿಯನ್ನು ಇಲ್ಲವೆ ತಂದೆಯನ್ನು ಖಬ್ರಸ್ತಾನಕ್ಕೆ ಅಟ್ಟಲಿದೆ ಎನ್ನುವುದು ನನ್ನ ಅಜ್ಜನ ಬಲವಾದ ನಂಬಿಕೆಯಾಗಿತ್ತು. ಹೌದು ನನ್ನ ಅಜ್ಜನ ಬಾಯಿಂದ ಹೊರಬಿದ್ದ ಮಾತು ಸುಳ್ಳಾಗುತ್ತಿರಲಿಲ್ಲವಂತೆ! ಹೀಗಾಗಿ ಜನ ನನ್ನ ಅಜ್ಜನನ್ನು ಕಂಡರೆ ತುಂಬ ಭಯಪಡುತ್ತಿದ್ದರು. ಜೊತೆಗೆ ಅವನೊಬ್ಬ ಆಯುರ್ವೇದ ಪಂಡಿತನೂ ಆಗಿದ್ದ. ಸಣ್ಣಪುಟ್ಟ ಕಾಯಿಲೆಗಳಿಗೆ ಔಷಧ ಕೂಡ ಕೊಡುತ್ತಿದ್ದ. ಇದರಿಂದಾಗಿ ಅವನು ಜನರ ಗೌರವಕ್ಕೆ ಪಾತ್ರನಾದನು. ನನ್ನ ಅಜ್ಜನ ಮಾತು ನಿಜವಾಯಿತು. ನನ್ನ ಅಜ್ಜಿ ತೀರಿಹೋದಳು. ನನ್ನ ತಂದೆ ತನ್ನ ತಾಯಿಯ ಮುಖ ನೋಡಲೇ ಇಲ್ಲ.


ಕೆಲವರ್ಷಗಳ ನಂತರ ನನ್ನ ಅಜ್ಜ ವಿಜಾಪುರ (ಈಗ ಬಾಗಲಕೋಟೆ) ಜಿಲ್ಲೆಯ ಕೆರೂರಿನ ಸ್ಥಿತಿವಂತ ವ್ಯಕ್ತಿಯೊಬ್ಬನ ಮಗಳನ್ನು ಮದುವೆಯಾದ. ನನ್ನ ಅಪ್ಪನ ಅಜ್ಜಿ ತನ್ನ ಅನಾಥ ಮೊಮ್ಮಗನನ್ನು ಬಲು ಅಕ್ಕರೆಯಿಂದ ಸಲುಹಿದಳು. ಅವಳು ಸತ್ತ ಮೇಲೆ ತನ್ನ ಮೂರು ಎಕರೆ ಜಮೀನನ್ನು ತನ್ನ ಮೊಮ್ಮಗನ ಹೆಸರಿಗೆ ಹಚ್ಚಿದ್ದು ಗೊತ್ತಾದ ಮೇಲೆ ನನ್ನ ಅಜ್ಜ ಕೆಂಡಾಮಂಡಲವಾದ. ಅದು ನನಗೆ ಬೇಡವೇ ಬೇಡ ಎಂದ. ನನ್ನ ಅಜ್ಜನ ಕೋಪ ಶಮನ ಮಾಡಬೇಕಾದರೆ ಓಣಿಯ ಹಿರಿಯರಿಗೆ ಸಾಕುಬೇಕಾಯಿತಂತೆ. ನಮ್ಮ ಊರಿಂದ ನಾಲ್ಕು ಕಿಲೋಮೀಟರ್ ದೂರದ ಘಟಕನೂರಿನ ಈ ಜಮೀನು ತನಗೆ ದಾನವಾಗಿ ಸಿಕ್ಕದ್ದು ಎನ್ನುವುದು ಅವನಿಗೆ ಕಿರಿಕಿರಿ ಉಂಟುಮಾಡುತ್ತಿತ್ತು. ಅದಕ್ಕೆ ಅವನೇ ಒಂದು ಪರಿಹಾರ ಕಂಡುಕೊಂಡನಂತೆ. ಭೂಮಿತಾಯಿಯ ಮನಸ್ಸಿಗೆ ನೋವಾಗದಿರಲೆಂದು ಆ ಜಮೀನನ್ನು ಸ್ವೀಕರಿಸಿದನಂತೆ.

ಅತ್ತ ನೇಕಾರನೂ ಇತ್ತ ರೈತನೂ ಆಗಿದ್ದ ನನ್ನ ಅಜ್ಜ ಹಿಂದೂ ಧರ್ಮ ಅಥವಾ ಇಸ್ಲಾಂ ಧರ್ಮಕ್ಕಿಂತ ತನ್ನ ವೃತ್ತಿಧರ್ಮಕ್ಕೆ ಹೆಚ್ಚಿನ ಬೆಲೆ ಕೊಟ್ಟವನು. ಅವನು ಸಾಯುವವರೆಗೂ ನಮ್ಮ ಮನೆಯಲ್ಲೊಂದು ಎತ್ತು ಮತ್ತು ಒಂದು ಆಕಳನ್ನು ಸಾಕುವುದು ಮುಂದುವರಿದುಕೊಂಡು ಬಂದಿತ್ತು. ಎಕ್ಕಾಗಾಡಿ (ಒಂಟಿ ಎತ್ತಿನ ಚಕ್ಕಡಿ) ನನ್ನ ಅಜ್ಜನ ಬದುಕಿನ ಬಂಡಿಗೆ ಸಂಕೇತದಂತಿತ್ತು. ಹೊಲ ಉಳುಮೆ ಮಾಡುವುದನ್ನು ಕಂಡ ಹಳ್ಳಿಯ ಅನುಭವಿ ರೈತರೂ ನಿಬ್ಬೆರಗಾಗುತ್ತಿದ್ದರಂತೆ. ಹೊಲದಲ್ಲಿನ ಪೈರಿನ ಬೆಳವಣಿಗೆಯಲ್ಲೇ ಅವನು ಸಂತೋಷ ಕಾಣುತ್ತಿದ್ದ. ಒಮ್ಮೆ ಪೈರು ಕಟಾವಾದ ಮೇಲೆ ಸಜ್ಜೆ ಮತ್ತು ಜೋಳದ ಗೂಡು ಬಡಿಯುವುದರೊಂದಿಗೆ ಬೇಸಾಯದ ಒಂದು ಹಂತ ಮುಗಿಯುತ್ತಿತ್ತು. ಮುಂದೆ ಸ್ವಾತಿ ಮಳೆಯ ನಂತರ ತೆನೆ ಮುರಿಸುತ್ತಿದ್ದ ಅವನು ಕಣ ಮಾಡುವುದನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬವಾಗುತ್ತಿತ್ತು.

ಕಣ ತಯಾರು ಮಾಡಿ ಸಾರಿಸಿ ಐದು ಗುಂಡುಕಲ್ಲು ತಂದು ಅವುಗಳಿಗೆ ಸುಣ್ಣ ಬಳಿದು ನಡುವೆ ಕುಂಕುಮದಿಂದ ಕೆಂಪಾಗಿಸಿ ಪಾಂಡವರನ್ನಾಗಿ ಮಾಡಿ ಊದಿನ ಕಡ್ಡಿ ಬೆಳಗಿ ತೆಂಗಿನಕಾಯಿ ಒಡೆದು ಪೂಜೆ ಮಾಡುತ್ತಿದ್ದ. ಅಜ್ಜ ತನ್ನ ಎಕ್ಕಾಗಾಡಿಯಲ್ಲಿ ಸಜ್ಜೆ ಜೋಳ, ಹೆಸರು, ತೊಗರಿ, ಮಡಿಕೆ ಅವರೆ, ಅಲಸಂದಿ ಚೀಲಗಳ ರಾಶಿ ತರುತ್ತಿದ್ದದ್ದು ನನಗೆ ಇನ್ನೂ ಮರೆಯಲಾಗದ ದೃಶ್ಯ. ಹೀಗೆ ಸಾಗಿತ್ತು ನನ್ನ ಅಜ್ಜನ ಸಂಸಾರ. ಒಂದು ವರ್ಷ ಬರ ಬಿತ್ತು. ಎಂತಹ ಭೀಕರ ಬರವೆಂದರೆ ರೈತರೆಲ್ಲ ಗುಳೆ ಹೋಗತೊಡಗಿದರು. ನನ್ನ ಅಜ್ಜನಿಗೆ ಗುಳೆ ಹೋಗುವುದು ಅಷ್ಟು ಸುಲಭವಾಗಿರಲಿಲ್ಲ. ಕಾರಣ ಅವನು ಸಾಕಿದ್ದ ದನಗಳು. ಇದ್ದ ಒಂದು ಎತ್ತನ್ನು ಯಾರಿಗೋ ದಾನ ಮಾಡಿದ. ಆದರೆ ಆಕಳನ್ನು ಕೇಳುವವರೇ ಇದ್ದಿರಲಿಲ್ಲ. ಐತವಾರ (ಆದಿತ್ಯವಾರ) ನಮ್ಮ ಊರ ಸಂತೆ. ಸಂತೆಗೆ ಆಕಳನ್ನು ಒಯ್ದ. ಅದನ್ನು ಕೇಳಿದವರೆಲ್ಲ ಕಟುಕರೇ. ಆಕಳೊಂದಿಗೆ ಮನೆಗೆ ವಾಪಸ್ಸಾದ. ಮತ್ತೆ ಒಂದು ವಾರ ಕಳೆಯುವುದು ಹೇಗೆ ಎಂದು ಚಿಂತಿಸತೊಡಗಿದ.

ಮುಂದಿನ ವಾರ ಅಜ್ಜ ಮತ್ತೆ ಆಕಳನ್ನು ಸಂತೆಗೆ ಒಯ್ದ. ಕಟುಕರನ್ನು ತನ್ನ ಸಮೀಪ ಬರಗೊಡಲಿಲ್ಲ. ಇನ್ನೇನು ಮತ್ತೆ ಆಕಳನ್ನು ಮನೆಗೊಯ್ಯದೆ ವಿಧಿಯಿಲ್ಲ ಎನ್ನುವ ಸ್ಥಿತಿ. ಅಷ್ಟರಲ್ಲಿ ಒಬ್ಬ ಗಿರಾಕಿ ಬಂದು "ನಾನು ದ್ಯಾಮವ್ವನ ಗುಡಿ ಪೂಜಾರಿ. ನಂದ ಮೇವಿನ ಬಣಿವಿ, ಹೊಟ್ಟು ಐತಿ. ಇದನ್ನು ನಾ ಸಾಕ ಬೇಕಂತೀನಿ. ಎಷ್ಟು ಕೊಡಲಿ ಹಿರ್‍ಯಾರ?" ಎಂದು ಕೇಳಿದ. ಕೂಡಲೇ ಅಜ್ಜ ಕಣ್ಣು ಕಿಸಿದವನೇ "ಎಲೆ ಹುಚಪ್ಯಾಲಿ, ಇದನ್ನ ನಾ ಮಾರಾಕ ಬಂದಿಲ್ಲ, ಒಯ್ದು ಬಿಡು" ಎಂದ. ಮನೆ ಹಾದಿ ಹಿಡಿದ ಅಜ್ಜನಿಗೆ ತನ್ನ ಪ್ರೀತಿಯ ಆಕಳು ತನ್ನಿಂದ ದೂರಾಗಿದ್ದಕ್ಕೆ ತುಂಬ ದುಃಖವಾದರೂ ಒಂದು ರೀತಿಯಲ್ಲಿ ನಿರುಮ್ಮಳವಾದ. ಕಡೆಗೂ ಮೂಕ ಪ್ರಾಣಿ ಹೊಟ್ಟು ಕಣಕಿ ಇದ್ದ ರೈತನ ಮನೆ ಸೇರಿದ್ದರಿಂದ ನಿಶ್ಚಿಂತನಾಗಿದ್ದ ಅಜ್ಜ.

ಅಜ್ಜ ಬೆಳಗ್ಗೆ ಎದ್ದು ಕೆರೂರಿಗೆ ಹೊರಡುವ ತಯಾರಿಯಲ್ಲಿದ್ದಾಗ ಅದ್ಯಾರೋ "ಸಾಹೇಬ್ರ, ನಿಮ್ಮ ಆಕಳನ್ನು ಬಡಿದು ಮಾವಿನ ತೋಪಿನ್ಯಾಗ ಒಗೆದ ಹೋಗ್ಯಾರಲ್ರಿ?" ಎಂದದ್ದನ್ನು ಕೇಳಿದವನೇ ನನ್ನ ಅಜ್ಜ ಆಕಳನ್ನು ಮನೆಗೆ ತಂದು ಅದರ ಗಾಯಗಳಿಗೆ ತನಗೆ ಗೊತ್ತಿದ್ದ ಉಪಚಾರ ಮಾಡಿದ. ತನ್ನ ಮತ್ತು ಕುಟುಂಬದ ಇತರ ಆರು ಜನರ ಹೊಟ್ಟೆಗೆ ಅನ್ನವಿಲ್ಲದಿದ್ದರೂ ಆಕಳ ಆರೈಕೆಗೆ ತೊಡಗಿದ. ಮೂರನೆಯ ದಿನ ಆಕಳು ಸತ್ತುಹೋಯಿತು. ಹೊಲದಲ್ಲಿ ಅದನ್ನು ದಫನ್ ಮಾಡಿ ಬಂದವನೇ "ನಡೀರಿ ಇನ್ನ ಹೋಗೂಣು. ನನ್ನ 'ಕಲ್ಯಾಣಿ' ಶಾಪ ನಮಗ ತಟ್ಟದ ಬಿಡೂದಿಲ್ಲ" ಎಂದು ಕೆರೂರಿಗೆ ಹೊರಟುನಿಂತ. ನಮ್ಮ ನೆರೆಹೊರೆಯವರಿಗೆ ನನ್ನ ಅಜ್ಜನ ಮಾತು ಕೇಳಿ ದುಃಖ ಉಮ್ಮಳಿಸಿಬಂತಂತೆ.



ನನ್ನಜ್ಜನಿಗೊಂದಾಸೆ ಇತ್ತು

ಅಜ್ಜ ತನ್ನ ಹೆಂಡತಿ, ಮಗ, ಸೊಸೆ ಹಾಗೂ ಮೂವರು ಮೊಮ್ಮಕ್ಕಳೊಂದಿಗೆ ಕೆರೂರು ತಲುಪಿದ. ಮೊದಲೇ ತನ್ನ ಮಾವ(ನನ್ನ ಅಪ್ಪನ ತಂದೆ)ನಿಗೆ ತನಗೊಂದು ಮನೆ ಬಾಡಿಗೆಗೆ ಕೊಡಿಸಲು ಹೇಳಿದ್ದ. ಒಂದು ಚೀಲ ಸಜ್ಜೆ ಕಡ ಕೊಡಲೂ ಹೇಳಿದ್ದ. ಬೆಳಗ್ಗೆ ಎದ್ದವರೇ ಹಿರಿಯರು ಖಡಿ ಒಡೆಯಲು ಗುಡ್ಡಕ್ಕೆ ಹೋಗುತ್ತಿದ್ದರು. ಮಕ್ಕಳನ್ನು ಓಣಿಯ ಮಕ್ಕಳ ಜೊತೆ ಆಡಲು ಬಿಟ್ಟುಹೋಗುತ್ತಿದ್ದರು. ಕೆಲವೇ ದಿನಗಳ ನಂತರ ಆ ಮಕ್ಕಳು ಅನ್ನಛತ್ರದಲ್ಲಿ ಉಂಡುಬಂದವರೇ ಕ್ವಾಡಿಗ್ಗೆಮ್ಮಿನಿಂದ ಬಳಲತೊಡಗಿದರು. ರೋಗ ಉಲ್ಬಣಿಸಿ ಮೊಮ್ಮಗ ಸತ್ತು ಹೋದ. ಅವನ ಹೆಣವನ್ನು ಪಕ್ಕದ ಮನೆಯವರ ಸುಪರ್ದಿಗೆ ವಹಿಸಿ ನನ್ನ ಅಜ್ಜ ಮತ್ತು ಹಿರಿಯರು ಮೊಮ್ಮಗಳನ್ನು ದವಾಖಾನೆಗೆ ಧಾವಿಸಿದರು. ಆ ಮಗುವೂ ಬದುಕಿ ಉಳಿಯುವ ಸಾಧ್ಯತೆ ಇಲ್ಲವೆಂದು ಡಾಕ್ಟರ್ ನನ್ನ ಅಜ್ಜನಿಗೆ ತಿಳಿಸಿದರು.

ಮನೆಗೆ ಬಂದಮೇಲೆ ತನ್ನ ಮೊಮ್ಮಗನನ್ನು ದಫನ್ ಮಾಡುವ ಕೆಲಸ ಬಾಕಿ ಉಳಿದಿತ್ತು. ದಫನ್ ಮಾಡಿಯಾದ ಮೇಲೆ ಓಣಿಯ ಹಿರಿಯರು ಅಜ್ಜನಿಗೆ ಸಾಂತ್ವನದ ಮಾತುಗಳನ್ನು ಆಡತೊಡಗಿದಾಗ "ಇಲ್ಲ ಈ ನನ್ನ ಮೊಮ್ಮಗ ನಡಪಂಚಕದಾಗ ಸತ್ತ, ಅದೂ ಐತ್ವಾರ, ಅಮಾಶಿ ದಿವಸ. ಮೂರು ಹೆಣ ಬೀಳಾಕ ಬೇಕು" ಎಂದ ನನ್ನ ಅಜ್ಜ. "ಇದಕ್ಕ ಒಂದಾ ತೋಟಕಾ ಐತಿ. ನೀವು ಈ ಮನಿ ಬಿಡ್ರಿ. ಮಸೂತ್ಯಾಗ ಇದ್ದ ಬಿಡ್ರಿ" ಎಂದು ಒಂದು ಹಿರಿಯ ಜೀವ ಸಲಹೆ ಕೊಟ್ಟಿತಂತೆ. ಆದರೆ ನನ್ನ ಅಜ್ಜ ಬಲು ಹಠಮಾರಿ. ಯಾರ ಮಾತಿಗೂ ಕಿವಿಗೊಡಲಿಲ್ಲ. ಮೂರನೆಯ ದಿನ ತನ್ನ ಮೊಮ್ಮಗಳನ್ನೂ ದಫನ್ ಮಾಡಿ ಬಂದಮೇಲೆ ಯಾವ ಹಿರಿಯನೂ ನನ್ನ ಅಜ್ಜನಿಗೆ ಒಂದು ಮಾತೂ ಹೇಳದಾದನಂತೆ. ಒಂದು ವಾರ ಕಳೆದ ಮೇಲೆ ಮತ್ತೊಬ್ಬ ಮೊಮ್ಮಗಳನ್ನೂ ಮಣ್ಣು ಮಾಡಿ ಬಂದ ಮೇಲೆ "ಇಲ್ಲಿಗೆ ನನ್ನ ಸಂತಿ ಮುಗೀತು. ತಂದಿದ್ದ ಗಂಟು ಕಳಕೊಂಡೆ. ನಡೀರಿ ನಮ್ಮೂರಿಗಿ" ಎಂದು ನನ್ನ ಅಜ್ಜ ತನ್ನ ಅಳಿದುಳಿದ ಪರಿವಾರವನ್ನು ಕಟ್ಟಿಕೊಂಡು ತನ್ನ ಊರಿಗೆ ಮರಳಿದ.

ಮನೆಯಲ್ಲಿ ಕಾಲಿರಿಸಿದೊಡನೆ ನನ್ನ ಅಜ್ಜ ಮಾಡಿದ ಮೊದಲ ಕೆಲಸವೆಂದರೆ ಜ್ಯೋತಿಷ್ಯ ಪುಸ್ತಕಗಳನ್ನು ಒಯ್ದು ತನ್ನ ಬಾಲ್ಯ ಸ್ನೇಹಿತ ಮಳೆಪ್ಪಜ್ಜನಿಗೆ ಒಪ್ಪಿಸಿದ್ದು. ಕಾಲವೇ ನೊಂದ ಮನಸ್ಸಿಗೆ ಮದ್ದಾಗಬಲ್ಲದು. ಮತ್ತೆ ನೇಕಾರನಾಗಿ, ರೈತನಾಗಿ ಬದುಕನ್ನು ಕಟ್ಟಿಕೊಳ್ಳಲು ಅಜ್ಜ ಸಿದ್ಧವಾದ. ಹೊಲದಲ್ಲಿ ಪೈರು ನಳನಳಿಸತೊಡಗಿತು. ಪೈರು ಕಟಾವಾದ ಮೇಲೆ ಗೂಡು ಬಡಿದಾಯಿತು. ಕೆಲದಿನಗಳ ನಂತರ ಅಜ್ಜ ಮತ್ತೆ ಕಣ ಮಾಡಿದ. ಮೊದಲಿನ ಸಂಭ್ರಮದಲ್ಲಿ ಏನೂ ಕೊರತೆ ಇದ್ದಿರಲಿಲ್ಲ. ಕಣ ಸಾರಿಸಿ, ಐದು ಗುಂಡು ಕಲ್ಲುಗಳನ್ನು ಪಾಂಡವರನ್ನಾಗಿ ಪ್ರತಿಷ್ಠಾಪಿಸಿ ಎಡೆ ಮಾಡಿ, ತೆಂಗಿನಕಾಯಿ, ಊದಿನಕಡ್ಡಿ ಬಂಡಲ್, ಕಡ್ಡಿಪೊಟ್ಟಣ ಇಟ್ಟು "ಎಲೆ ಇಟ್ಯಾ ಬಾ ಪೂಜೆ ಮಾಡ ಬಾ" ಎಂದು ತನ್ನ ರೈತಮಿತ್ರನ ಮಗನಿಗೆ ಹೇಳಿ ಹೊಲದ ಬದುವಿನಲ್ಲಿ ಕುಳಿತುಕೊಂಡು ಎಲೆಅಡಿಕೆ ಚೀಲ ಬಿಚ್ಚಿದ್ದನಂತೆ. ಅತ್ತ ಇಟ್ಟಪ್ಪ ಎನ್ನುವ ಆ ವ್ಯಕ್ತಿ "ಅಗ್ನಿ ಕಾಕಾ" ಎಂದು ತನಗೆ ವಹಿಸಿಕೊಟ್ಟ ಕೆಲಸವನ್ನು ನಿರ್ವಹಿಸಿದ್ದ. ಅಜ್ಜ ಪ್ರತಿ ವರ್ಷ ಇದೇ ತೆರನಾಗಿ ರಾಶಿ ಮಾಡಿಕೊಂಡು ಬಂದಮೇಲೆ ಮೊದಲಿನಂತೆಯೇ ಕಾಳುಕಡ್ಡಿ ನಿಟ್ಟನ್ನು ಹಚ್ಚುತ್ತಿದ್ದ.

ಈ ನನ್ನ ಅಜ್ಜ ನೇಕಾರ ಮತ್ತು ರೈತ ಅಷ್ಟೇ ಆಗಿರಲಿಲ್ಲ. ಅವನೊಬ್ಬ ಬಡಗಿ, ಕಮ್ಮಾರ, ಗೌಂಡಿ ಹೀಗೆ ಹಲವು ಬಗೆಯ ವೃತ್ತಿಗಳಲ್ಲಿ ಆಸಕ್ತಿ ಉಳ್ಳವನಾಗಿದ್ದ. ಅವನು ನನ್ನ ವಿದ್ಯಾಭ್ಯಾಸದ ಬಗ್ಗೆ ವಿಶೇಷ ಕಾಳಜಿ ವಹಿಸಿದ್ದ. ನಾನು ತುಂಬ ಜಾಣ ಅಂತ ಬೇರೆಯವರಿಗೆ ಹೇಳುವಾಗ ಅವನಿಗೆ ಎಲ್ಲಿಲ್ಲದ ಸಂತಸ, ಹೆಮ್ಮೆ. ಅವನು ತೀರಿಹೋದ ಮೇಲೆ ಅವನ ಸೊಂಟದಲ್ಲಿ ಒಂದು ಕೀಲಿಕೈ ಇತ್ತು. ಎಲ್ಲ ದಿನ ಕರ್ಮಗಳು ಮುಗಿದ ಮೇಲೆ ನಮ್ಮ ತಂದೆ ಒಂದು ಸಂದೂಕನ್ನು ತೆರೆದರು. ಸಂದೂಕನ್ನು ಅಜ್ಜನೇ ಮಾಡಿದ್ದು. ಅದರಲ್ಲಿದ್ದದ್ದೇನು? ಪುಸ್ತಕಗಳ ಗಂಟು. ಪುಸ್ತಕಗಳನ್ನು ಹುಳ ತಿಂದು ಪುಡಿ ಮಾಡಿ ಬಿಟ್ಟಿದ್ದವು. ಇನ್ನೂ ಅಷ್ಟಿಷ್ಟು ಸುರಕ್ಷಿತವಾಗಿ ಕೈಸೇರಿದ್ದು ಆಲೂರು ವೆಂಕಟರಾವ್ ಅವರ 'ಸಂಸಾರ ಸುಖ', ಪಂಡಿತೆ ರಮಾಬಾಯಿಯ 'ಸ್ತ್ರೀಧರ್ಮ ನೀತಿ', ಮೌಲವಿ ಮಜ್ಹರ್‌ಉಲ್ ಹಕ್ ಅವರ 'ಖಿಲಾಫತವ್ರಾ ಇಂಗ್ಲೆಂಡ್‌ವ್ರಾ', ಆಯುರ್ವೇದದ ಒಂದೆರಡು ಪುಟ್ಟ ಪುಸ್ತಕಗಳು, ಎಂ.ಎನ್.ರಾಯ್ ಅವರ ಒಂದು ಪುಸ್ತಕ ಮತ್ತು ರ್‍ಯಾಡಿಕಲ್ ಡೆಮಾಕ್ರೆಟಿಕ್ ಪಕ್ಷದ ಮುಖವಾಣಿ 'ಬಡವರ ಬಿಡುಗಡೆ'ಯ ಕೆಲವು ಸಂಚಿಕೆಗಳು.

ನನ್ನ ಅಜ್ಜ ಕನ್ನಡ ಅಷ್ಟೇ ಅಲ್ಲ ಉರ್ದು, ಮರಾಠಿ, ಹಿಂದಿ, ಪರ್ಶಿಯನ್ ಭಾಷೆಯನ್ನು ಬಲ್ಲವನಾಗಿದ್ದ. ಹೀಗೆ ಒಬ್ಬ ಗೊಡ್ಡು ವ್ಯಕ್ತಿಯಾಗಿದ್ದ ನನ್ನ ಅಜ್ಜ ಹೇಗೆ ವೈಚಾರಿಕನಾಗಿ ಬೆಳೆದಿದ್ದನೋ ಯಾರಿಗೂ ಗೊತ್ತೇ ಆಗಲಿಲ್ಲ. ಆದರೆ ನನ್ನ ತಂದೆ ಪಕ್ಕಾ ಧರ್ಮನಿಷ್ಠ ದೈವಭೀರು ವ್ಯಕ್ತಿಯಾಗಿದ್ದರು. ಅವರಿಗೆ ಇಸ್ಲಾಂ ಧರ್ಮ ಕುರಿತ ಅಗಾಧ ತಿಳಿವಳಿಕೆ ಇತ್ತು. ಪರಧರ್ಮಸಹಿಷ್ಣುತೆ ಕುರಿತು ಬರೀ ಮಾತನಾಡುವವರಿಗೆ ಲೆಕ್ಕವಿಲ್ಲ. ನನ್ನ ತಂದೆ ಆಡದೆ ಮಾಡಿ ತೋರಿಸುವವರಾಗಿದ್ದರು. ಆ ಇಟ್ಟಪ್ಪ ಮತ್ತು ನನ್ನ ತಂದೆ ಒಡಹುಟ್ಟಿದವರಂತೇ ಇದ್ದರು. ನನ್ನ ತಂದೆಯವರನ್ನು 'ಅಣ್ಣ' ಎಂದೇ ಇಟ್ಟಪ್ಪ ಸಂಬೋಧಿಸುತ್ತಿದ್ದ. ಇಂದು ಅವನ ಮಗ ಬಸಪ್ಪ ನನ್ನನ್ನು 'ಅಣ್ಣಾ' ಎಂದೇ ಸಂಬೋಧಿಸುವುದು. ಅವನ ಮಕ್ಕಳು ನನ್ನನ್ನು 'ದೊಡ್ಡಪ್ಪಾ' ಎಂದೂ ನನ್ನ ಮಕ್ಕಳು ಅವನನ್ನು 'ಕಾಕಾ' ಎಂದೂ ಸಂಬೋಧಿಸುತ್ತಾರೆ. ಆದರೆ ಕೊನೆಕೊನೆಗೆ ನಾನು ದೇವರಲ್ಲಿ ನಂಬಿಕೆ ಹಾಗೂ ಧರ್ಮದ ವಿಷಯವಾಗಿ ಮೊದಲಿನಂತೆ ಆಸಕ್ತಿ ಉಳಿಸಿಕೊಳ್ಳದೇ ಇದ್ದದ್ದು ನನ್ನ ತಂದೆಯವರ ಗಮನಕ್ಕೆ ಬಂದಿತ್ತು. ಆದರೆ ಅವರು ಈ ವಿಷಯವಾಗಿ ಪಿಟ್ಟೆಂದಿರಲಿಲ್ಲ.

ಇಂದು ನಮ್ಮ ಮನೆಯಲ್ಲಿ ನನ್ನ ಮಕ್ಕಳು ಮತ್ತು ನನ್ನ ತಮ್ಮನ ಮಕ್ಕಳೆಲ್ಲ ಧಾರ್ಮಿಕ ಮನೋಧರ್ಮದವರಾಗಿದ್ದಾರೆ. ನನ್ನ ತಮ್ಮನ ಎಲ್ಲಕ್ಕೂ ಕಿರಿಯ ಮಗ "ದೊಡ್ಡಪ್ಪಾ ನೀವು ನಿಮ್ಮ ಅಜ್ಜನ ಹಾಂಗ ಆದೀರಿ ಬಿಡ್ರಿ" ಎಂದಾಗ ನಾನು ಹೇಳುವುದು "ಹೌದು, ಬರೋಬ್ಬರಿ. ನೀವು ನಿಮ್ಮ ಅಜ್ಜನ ಹಾಂಗ ಆದ್ರ ನನಗೇನೂ ಸಿಟ್ಟು ಅನಿಸೂದಿಲ್ಲ ಬದಲಿಗೆ ಸಂತೋಷ ಆಗ್ತೈತಿ" ಎಂದು. ನನ್ನ ಅಜ್ಜ ನಾನು ಒಬ್ಬ ಶಿಕ್ಷಕನಾಗಲಿ ಎಂದು ಆಶಿಸಿದ್ದ ಕಾರಣ ಮುಲ್ಕಿ ಪರೀಕ್ಷೆ ಪಾಸಾಗಿದ್ದ ಅವನು ಸಹ ಒಂದು ವರ್ಷ ಶಿಕ್ಷಕನಾಗಿ ಕೆಲಸ ಮಾಡಿದ್ದ. ರೈತನಾಗಿ ಬದುಕು ಕಟ್ಟಿಕೊಳ್ಳಲು ತೀರ್ಮಾನಿಸಿದ್ದ ಅಜ್ಜ ಆ ಕೆಲಸಕ್ಕೆ ರಾಜೀನಾಮೆ ನೀಡಿದ್ದ.

ನಮ್ಮ ತಾಲೂಕಿನ ಮುಸ್ಲಿಂ ನಾಯಕರು ನಮ್ಮೂರಿನಲ್ಲಿ ಒಂದು ಉರ್ದು ಮಾಧ್ಯಮ ಹೈಸ್ಕೂಲ್ ಸ್ಥಾಪಿಸಿದರು. ನಾನು ಅವರ ಯೋಜನೆಯನ್ನು ಖಡಾಖಂಡಿತವಾಗಿ ವಿರೋಧಿಸಿದ್ದೆ. ಕನ್ನಡ ಮಾಧ್ಯಮ ಹೈಸ್ಕೂಲ್ ಬಗ್ಗೆ ಯೋಚಿಸುವುದು ಸೂಕ್ತವೆಂದು ನಾನು ಸಲಹೆ ನೀಡಿದ್ದೆ. ನನ್ನನ್ನು ಅಂದು ಸಭೆಯಿಂದ ಹೊರದಬ್ಬುವುದೊಂದೇ ಬಾಕಿ ಇತ್ತು. ಆದರೆ ಉರ್ದು ಮಾಧ್ಯಮ ಹೈಸ್ಕೂಲ್ ಆರಂಭವಾಗಿ ಬಿಟ್ಟಿತು. ವಿಚಿತ್ರವೆಂದರೆ ನಾನೇ ಆ ಶಾಲೆಯ ಮುಖ್ಯೋಪಾಧ್ಯಾಪಕನಾಗಿ ಕೆಲಸ ನಿರ್ವಹಿಸುವುದು ಅನಿವಾರ್ಯವಾಯಿತು. ಆ ಶಾಲೆಯ ದುರವಸ್ಥೆ ಹೇಳ ತೀರದು. ನಾನು ನನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೊರಬಂದೆ. ನಂತರ 'ಸಂಗಾತಿ ಟುಟೋರಿಯ… ಆರಂಭಿಸಿದೆ. ಪಿ.ಯು.ಸಿ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಹೇಳತೊಡಗಿದೆ.

ಅದೊಂದು ಅಪರೂಪದ ಪಠ್ಯಪುಸ್ತಕವಾಗಿತ್ತು, ಅದ… ಒಂದು ಕತೆಯನ್ನು ಪಾಠ ಮಾಡುವುದಕ್ಕೆ ಮುಂಚೆ ನ… ಒಂದು ವಾರಕಾಲ ಕತೆಗೆ ಹಿನ್ನೆಲೆಯಾಗಿ ನಮ್ಮ ದೇ… ಕಳೆದ ಶತಮಾನದ ಮೂವತ್ತು ಮತ್ತು ನಲವತ್ತರ ದ… ವಿದ್ಯಮಾನಗಳನ್ನು ವಿವರಿಸುವುದರಲ್ಲೇ ಕಳೆದೆ. ನಮ್ಮ… ಇಬ್ಭಾಗವಾದದ್ದು 1947ರ ಆಗಸ್ಟ್ 14 ಮತ್ತು… ಮಧ್ಯೆ ರಾತ್ರಿಯಲ್ಲ, ಅದಕ್ಕೂ ಎಷ್ಟೋ ಮೊದಲು ಹಿಂ… ಮುಸಲ್ಮಾನರ ನಡುವೆ ಒಂದು ಅಭೇದ್ಯ ಗೋಡೆ ನಿರ್ಮಿ… ಎರಡೂ ಧರ್ಮದ ಮತಾಂಧರು ಹೇಗೆ ಪ್ರಯತ್ನಿಸಿ… ಎನ್ನುವುದು ವಿದ್ಯಾರ್ಥಿಗಳಿಗೆ ಖಂಡಿತ ಮನವರಿಕೆಯಾ… ಎನ್ನುವುದು ಗೊತ್ತಾದ ಮೇಲೇ ನಾನು ಕತೆಯನ್ನು… ಮಾಡಿದೆ. 'Drought' ಕತೆ ಬರೆದವರು ಪ್ರಸಿದ್ಧ ಬಂ… ಸಾಹಿತಿ ಶರತ್‌ಚಂದ್ರ ಚಟರ್ಜಿ. ಕತೆಯನ್ನು ಮುಗಿಸಬೇಕ… ನನಗೆ ಸರಿಯಾಗಿ ಒಂದು ತಿಂಗಳು ಬೇಕಾಯಿತು.

ವಿದ್ಯಾರ್ಥಿವಿದ್ಯಾರ್ಥಿನಿಯರಿಗೆ ನನ್ನ ಬೋಧನೆ ತ… ಹಿಡಿಸಿತ್ತು. ಆ ಕತೆಯನ್ನು ನಮ್ಮೂರಿನ ಮೂರು ಕಾಲೇ… ಪ್ರಾಧ್ಯಾಪಕರು ಕಟ್ಟಕಡೆಗೆ ಈ ಕತೆಯನ್ನು ಕಾಟಾಚ… ಪಾಠ ಮಾಡಿ ಮುಗಿಸಿದ್ದರಂತೆ. ಕತೆಯ ಸಾರಾಂಶ ಹೀ… ನೇಕಾರನೂ ರೈತನೂ ಆಗಿದ್ದ ಗಫೂರ್ ಎನ್ನುವವನ ಗುರಿ… ಮುಂದೆ ಮಟಮಟ ಮಧ್ಯಾಹ್ನ ಒಂದು ಹೋರಿಯ… ಜಾಲಿ ಮರಕ್ಕೆ ಕಟ್ಟಿದ್ದನ್ನು ಕಂಡು ಪುರೋಹಿತ ತರ್ಕ… ಪಿತ್ಥ ನೆತ್ತಿಗೇರಿತು. ಜ್ವರದಿಂದ ಬಳಲುತ್ತಿದ್ದ ಗಫೂ… ಮನೆಯಿಂದ ಹೊರಗೆ ಬರಲು ಅವನು ಒತ್ತಾಯಿ… ಹಸಿಯಿಂದ ನರಳುತ್ತಿದ್ದ ತನ್ನ ಮೂಕಪ್ರಾಣಿ ಕುರಿ… ಅಸಹಾಯಕತೆಯನ್ನು ವ್ಯಕ್ತಪಡಿಸಿದ ಗಫೂರ್ "ನನ್ನ ಪಾ… ಬತ್ತ ಮತ್ತು ಹುಲ್ಲನ್ನು ಜಮೀನುದಾರ ನನಗೆ ಕೊ… ವಾಗಾಗಿ ನನ್ನ 'ಮಹೇಶ'ನಿಗೆ ಹಿಡಿ ಹುಲ್ಲೂ ಇಲ್ಲದ… ಯಿತು" ಎಂದಾಗ ತರ್ಕರತ್ನ "ಓಹೋ, ನಿನ್ನ ಹೋ… ಮಹೇಶ ಅಂತ ಬೇರೆ ಹೆಸರು ಇಟ್ಟಿದ್ದೀಯ" ಎ… ಅಸಮಾಧಾನ ವ್ಯಕ್ತಪಡಿಸಿದ. "ಮಹೇಶನಿಗಾಗಿ ನನ್ನ ಗುಡಿ… ಹೊದಿಸಿರುವ ಹುಲ್ಲನ್ನೇ ಹಿರಿದು ಮಹೇಶನಿಗೆ ತಿನ್ನಿಸುತ್ತಿ… ನಾಳೆ ಮಳೆಗಾಲ ಕಳೆಯುವುದು ಹೇಗೆ ಎಂದು… ನಾನು ಯೋಚಿಸಲಿಲ್ಲ" ಎಂಬ ಗಫೂರ್‌ನ ಮ… ತರ್ಕರತ್ನನ ಕಿವಿ ಮೇಲೆ ಬೀಳಲೇ ಇಲ್ಲ.

ಜಮೀನುದಾರನ ಮನೆಯಲ್ಲಿ ಪೂಜೆ ಮು… ಮರಳುತ್ತಿದ್ದ ಪುರೋಹಿತನ ಕೈಯಲ್ಲಿ ಹಣ್ಣು ಕಾ… ಇದ್ದ ತಟ್ಟೆ ಕಂಡ ಹೋರಿ ಅವನತ್ತ ಧಾವಿಸಿತು. ತ… ಪುರೋಹಿತ "ಈ ದರಿದ್ರ ಹೋರಿಯನ್ನು… ಎಳೆದುಕೊಳ್ಳೋ ಮಗನೇ" ಎಂದವನೇ ತನ್ನ ಮನೆ… ಹೆಜ್ಜೆ ಹಾಕಿದ.

ಒಂದು ದಿನ ಹೋರಿ ಜಮೀನುದಾರನ ಮನೆಯಂ… ನುಗ್ಗಿ ಅಲ್ಲಿ ಒಣಗಲು ಹಾಕಿದ್ದ ಕಾಳನ್ನು ತಿನ್ನತೊಡ… ಅದನ್ನು ಜಮೀನುದಾರನ ಆಳು ಒಯ್ದು ಪಕ್ಕದ ಊ… ಕೊಂಡವಾಡೆಗೆ ಹಾಕಿದ. ಗಫೂರ್ ತನಗೇ ತಿನ್ನಲು ಕ… ಕಾಳಿರದಿದ್ದರೂ ಹೇಗೋ ಅದನ್ನು ಬಿಡಿಸಿಕೊಂಡು ಬ… "ಈ ರೀತಿ ಎಲ್ಲರಿಗೂ ಕಾಟ ಕೊಡುತ್ತಿರುವ ಈ ಹೋರಿ… ಯಾಕೆ ಮಾರಿಬಿಡಬಾರದು?" ಎಂದು ಯಾರಾದರೂ… ನೀಡಿದಾಗ ಗಫೂರ್ "ಛೀ! ನನ್ನ ಮಗ ಮಹೇಶ… ಮಾರುವುದೆ?" ಎಂದು ಕಣ್ಣೀರು ಹಾಕುತ್ತಿದ್ದ.

ಒಮ್ಮೆ ಗಫೂರನ ಮಗಳು ಅಮೀನಾ ದೂರದಿಂದ ವ… ಕೊಡದಲ್ಲಿ ನೀರು ತರುತ್ತಿದ್ದಳು. ಹೋರಿ ತಕ್ಷಣ ಅ… ನುಗ್ಗಿತು. ಕೊಡಕ್ಕೆ ಬಾಯಿ ಹಾಕಲೆತ್ನಿಸಿದ್ದ ಹೋರಿ… ಗಾಬರಿಯ… ಅಮೀನಾ ಧೊಪ್ಪನೆ ಬಿದ್ದುಬಿಟ್ಟಳು. ತನ್ನ ಅ… ಮಗಳನ್ನು ಈ ಹೋರಿ ಕೊಂದೇ ಬಿಡುತ್ತದೆಂದು ಗಫೂ… ರೆಂಟೆಯನ್ನೆತ್ತಿ ಹೋರಿಯ ನೆತ್ತಿಗೆ ಬಲವಾದ ಏಟು ಹಾ… ತೀರ ದುರ್ಬಲವಾಗಿದ್ದ ಆ ಪ್ರಾಣಿ ನೆಲಕ್ಕೆ ಕುಸಿದು… ಮತ್ತೆ ಮೇಲೇಳಲೇ ಇಲ್ಲ. ಗಫೂರ್‌ನಿಗೆ ವಸ್ತುಸ್ಥಿ… ಅರಿವಾಗುತ್ತಲೇ ಅವನು ಪಶ್ಚಾತ್ತಾಪದ ಬೇಗುದಿಯಲ್ಲಿ ಬ… ಹೋದ. ಇನ್ನು ತನಗೆ ತನ್ನ ಹಳ್ಳಿಯಲ್ಲಿ ಉಳಿಗಾಲ… ಎನ್ನುವುದು ಅವನಿಗೆ ಖಚಿತವಾಯಿತು.

ಗಫೂರ್ ರಾತ್ರೋರಾತ್ರಿ ತನ್ನ ಮಗಳೊಂದಿಗೆ… ಹಳ್ಳಿಯನ್ನು ಶಾಶ್ವತವಾಗಿ ತೊರೆಯಲು ನಿರ್ಧರಿ… ಗುಡಿಸಲಿನಿಂದ ಹೊರಬೀಳುವುದಕ್ಕೆ ಮುನ್ನ ತನ್ನ ಮಹ… ಅಂತ್ಯಸಂಸ್ಕಾರಕ್ಕೆ ತನ್ನ ಬಳಿ ದುಡ್ಡಿರದಿದ್ದುದರಿಂದ… ಹಳೆಯ ಪಾತ್ರೆ ಪಗಡೆಗಳನ್ನೇ ಮಹೇಶನ ಕಳೇಬ… ಬಳಿ ಇರಿಸಿ ಕತ್ತಲಲ್ಲಿ ಕರಗಿಹೋದ...

ಹೀಗೆ ಕತೆ ಮುಕ್ತಾಯವಾಗುತ್ತದೆ. ಆಗ ನಾನು… ಗಫೂರ್ ಬೇರೆ ಯಾರೂ ಅಲ್ಲ ನನ್ನ ಅಜ್ಜನೇ ಎ… ನನ್ನ ವಿದ್ಯಾರ್ಥಿಗಳಿಗೆ ಅವನ ಕತೆ ಹೇಳಿದ್ದೆ. 'Drou… ಕತೆಯ ಗಫೂರ್ ನನ್ನ ಅಜ್ಜನ… ವೈಚಾರಿಕನಾಗಿಬಿಟ್ಟಿರಲೂಬಹುದು, ಅಲ್ಲವೆ? ಎಂದು… ಮೌನವಾದೆ. ಆ ಒಂದು ಮಾತಿನ ಮೂಲಕ ರಾಮದು… ನನ್ನಜ್ಜ ಹಾಗೂ ಕತೆಯಲ್ಲಿನ ಹರಿಪುರದ ಗಫೂರ… ನಾನು ಸೂಕ್ತವಾಗಿ ಸಮೀಕರಿಸಿದ್ದೆ ಎಂದು ನನಗೆ ಇ… ಅನ್ನಿಸುತ್ತದೆ. ಅಂದು ವಿದ್ಯಾರ್ಥಿಗಳಿಗೆ ಹೆಚ್ಚಿನ ವಿ… ಬೇಕಾಗಿರಲಿಲ್ಲವೆನ್ನುವುದು ನನಗೆ ಖಾತ್ರಿಯಾಗಿತ್ತು. ನ… ಆಸೆ ಈಡೇರಿತು ಎಂದು ನನಗೆ ಸಮಾಧಾನವಾಯಿ…

■ ಹಸನ್ ನಯೀಂ ಸುರಕೊ…

ಇಸ್ರೇಲ್: ಅಮೆರಿಕಾದ ಮಾಧ್ಯಮಗಳು

ನಮ್ಮಿಂದ ಬಚ್ಚಿಡುವ ಸಂಗತಿಗಳು



ಗಾಜಾ ಪಟ್ಟಿಯ ಫೆಲೆಸ್ತೀನಿಯರು ಇಸ್ರೇಲ್ ಕೈಲಿ ಭವಿಸುತ್ತಾ ಬಂದಿರುವ ನಿರಂತರ ನರಕಯಾತನೆಯ ತ್ತೀಚಿನ ಎಪಿಸೋಡ್ ವೇಳೆ ಫಲಕವೊಂದನ್ನು ಡುಕೊಂಡಿದ್ದ ಸ್ಥಳೀಯ ಮುದುಕನೊಬ್ಬ ಕಂಡುಬಂದ. ಫಲಕದಲ್ಲಿ ಹೀಗೆ ಬರೆದಿತ್ತು: "ನೀನು ನನ್ನ ನೀರನ್ನು ಮಕೊಂಡಿರುವೆ, ನನ್ನ ಆಲಿವ್ ಮರಗಳನ್ನು ಸುಟ್ಟಿರುವೆ, ಮನೆಯನ್ನು ಧ್ವಂಸಗೊಳಿಸಿರುವೆ, ನನ್ನ ಕೆಲಸವನ್ನು ಕೊಂಡಿರುವೆ, ನನ್ನ ಭೂಮಿಯನ್ನು ಕಸಿದುಕೊಂಡಿರುವೆ, ಪ್ಪನನ್ನು ಕಾರಾಗೃಹಕ್ಕೆ ದೂಡಿರುವೆ, ನನ್ನಮ್ಮನನ್ನು ಮುಹಾಕಿರುವೆ, ನನ್ನ ನಾಡಿನ ಮೇಲೆ ಬಾಂಬ್ ಸಿರುವೆ, ನಮ್ಮನ್ನೆಲ್ಲ ಉಪವಾಸ ಕೆಡವಿರುವೆ, ಗೆಲ್ಲರಿಗೂ ಅವಮಾನ ಮಾಡಿರುವೆ. ಆದಾಗ್ಯೂ ಲ್ಲದಕ್ಕೂ ನಾನೇ ಹೊಣೆ ಯಾಕೆಂದರೆ ನಿನ್ನ ರಾಕೆಟ್‌ಗೆ ತ್ತರವಾಗಿ ನಾನೂ ಒಂದು ರಾಕೆಟ್ ಕಳುಹಿಸಿದೆ."

ಇಸ್ರೇಲ್‌ನ ದುಷ್ಕೃತ್ಯಗಳು 1948ರಷ್ಟು ಹಿಂದೆಯೇ ಭವಾಗಿವೆ. ಅಂದು ಇಸ್ರೇಲಿ ಸೈನ್ಯ ದಾಳಿ ಮಾಡಿದಾಗ ಯಿಂದ ತತ್ತರಿಸಿದ ಸಾವಿರಾರು ಜನ ಫೆಲೆಸ್ತೀನಿಯರು ತಮ್ಮ ಮನೆಮಠಗಳನ್ನು ತ್ಯಜಿಸಿ ಒಂದೋ ಗಾಜಾ ಯತ್ತ ಓಡಿಹೋದರು ಅಥವಾ ಅವರನ್ನು ವಂತವಾಗಿ ಗಾಜಾ ಕಡೆ ಅಟ್ಟಲಾಯಿತು. ತರುವಾಯ ದ್ಧವಿರಾಮವೇನೋ ಅಧಿಕೃತವಾಗಿ ಘೋಷಿಸಲ್ಪಟ್ಟಿತು. ರೆ ಇದರಿಂದ ಫೆಲೆಸ್ತೀನಿಯರನ್ನು ಟ್ರಕ್ಕುಗಳಲ್ಲಿ ತುಂಬ ಯುಚಿಗೆ ಕಳುಹಿಸುವ ಕಾರ್ಯಾಚರಣೆಗೆ ಯಾವ ತಡೆಯೂ ಉಂಟಾಗಲಿಲ್ಲ, ಅದು ಮತ್ತೂ ಕೆಲವು ಗಳ ಕಾಲ ಅಬಾಧಿತವಾಗಿ ಮುಂದುವರಿಯಿತು.

ಮುಂದೆ 1967ನೆ ಇಸವಿಯಲ್ಲಿ ಇಸ್ರೇಲ್ ಗಾಜಾ ಯನ್ನು ಆಕ್ರಮಿಸಿಕೊಂಡಿತು. ಇದರ ನಂತರ ಅದು ಸ್ತೀನಿಯರಿಗೆ ಕೊಡುವ ಶಿಕ್ಷೆಗಳ ಸ್ವರೂಪವೇ ಬದಲಾ ತು. ಫೆಲೆಸ್ತೀನಿ ನಿರಾಶ್ರಿತರನ್ನು ಹಾಗೂ ಸಾಧ್ಯವಿದ್ದಲ್ಲಿ ದ ಫೆಲೆಸ್ತೀನಿ ನಾಗರಿಕರನ್ನೂ ಸಿನಾಯ್ ಪರ್ಯಾಯದ್ವೀಪದತ್ತ ಜಿಪ್ಟ್‌ಗೆ ಸೇರಿದ ಭೂಪ್ರದೇಶ) ದೂಡುವುದೇ ಇಸ್ರೇಲಿ ರದ ಉದ್ದೇಶವಾಗಿತ್ತೆಂದು ಇತ್ತೀಚಿನ ಅಧ್ಯಯನಗಳಿಂದ ದುಬರುತ್ತದೆ. ಗಾಜಾ ಪಟ್ಟಿಯಲ್ಲಿದ್ದ ಅರಬರನ್ನು ಚ್ಚಾಟಿಸುವ ಕೆಲಸವನ್ನು ಇಸ್ರೇಲಿ ರಕ್ಷಣಾಪಡೆಗಳ ದಕ್ಷಿಣ ಧಿಕಾರದ ಕಮಾಂಡರ್ ಜ। ಯೇಶಯಾಹು ಗವಿಶ್‌ನ ಶದಂತೆ ನಡೆಸಲಾಯಿತು. ಪಶ್ಚಿಮ ದಂಡೆಯಿಂದ ಲ್ ನಡೆಸಿದ ಉಚ್ಚಾಟನೆಗಳು ಇನ್ನಷ್ಟು ತೀವ್ರವಾಗಿದ್ದವು. ಚ್ಚಾಟಿತ ಜನ ಮರಳಿಬರದಂತೆ ನೋಡಿಕೊಳ್ಳಲು ಧಾರಿಗಳನ್ನು ಬಳಸಲಾಗಿತ್ತು, ಇದು ವಿಶ್ವಸಂಸ್ಥೆಯ ತಾ ಮಂಡಳಿಯ ಆದೇಶದ ನೇರ ಉಲ್ಲಂಘನೆಯಾಗಿತ್ತು. ಉಚ್ಚಾಟನೆಯ ಹಿಂದಿರುವ ಕಾರಣಗಳೇನೆಂದು ಯುದ್ಧ ನೆಗೊಂಡಾಕ್ಷಣ ವಿಶದವಾಯಿತು. ಇಸ್ರೇಲ್‌ನ ಮುಂದಿನ ನಿ ಗೋಲ್ಡಾ ಮಯರ್ ತನ್ನ ಲೇಬರ್ ಪಕ್ಷದ ಹೋದ್ಯೋಗಿಗಳ ಜೊತೆ ನಡೆಸಿದ ಆಂತರಿಕ ಚರ್ಚೆಗಳ ಎಲ್ಲವೂ ಸ್ಪಷ್ಟವಾಯಿತು. ಗಾಜಾ ಪಟ್ಟಿಯಲ್ಲಿರುವ ಬರನ್ನು "ಅಲ್ಲಿಂದ ತೊಲಗಿಸಬೇಕು" ಮತ್ತು ಆ ಪ್ರದೇಶವನ್ನು ಇಸ್ರೇಲ್ ತನ್ನಲ್ಲಿ ಉಳಿಸಿಕೊಳ್ಳಬೇಕೆಂದು ಲ್ಡಾ ಮಯರ್ ಹೇಳಿದರು. ಇದಕ್ಕೆ ರಕ್ಷಣಾ ಸಚಿವ ಶೆ ಡಾಯನ್ ಮತ್ತಿತರರು ಸಮ್ಮತಿ ಸೂಚಿಸಿದರು. ಚ್ಚಾಟಿತ ಅರಬರು ವಾಪಸ್ಸಾಗದಂತೆ ನೋಡಿಕೊಳ್ಳಲಾಗುವುದು ಯಾಕೆಂದರೆ "ಇಸ್ರೇಲಿನಲ್ಲಿ ಅರಬರ ಜನಸಂಖ್ಯೆಯನ್ನು ಹೆಚ್ಚಿಸಲು ಸಾಧ್ಯವಿಲ್ಲ" ಎಂದು ದಿನ ಪ್ರಧಾನಿ ಲೆವಿ ಎಶ್ಕೋಲ್ ವಿವರಿಸಿದರು. ಇಲ್ಲಿ ಮಾತಾಡುತ್ತಿದ್ದುದು ಹೊಸದಾಗಿ ಆಕ್ರಮಿಸಿಕೊಂಡ ಜಾ ಪಟ್ಟಿಯ ಬಗ್ಗೆ. ಆ ಭೂಪ್ರದೇಶವನ್ನು ಆದಾಗಲೆ ರೇಲಿನ ಒಂದು ಭಾಗವೆಂದೇ ಪರಿಗಣಿಸಲಾಗಿತ್ತು. ಕನುಗುಣವಾಗಿ ಇಸ್ರೇಲಿನ ಎಲ್ಲಾ ಭೂಪಟಗಳನ್ನು ದಲಾಯಿಸಲಾಯಿತು. ಆದರೆ ಅವುಗಳ ಪ್ರಕಟಣೆಯನ್ನು ತ್ರ ವಿಳಂಬಿಸಲಾಯಿತು. ಇದಕ್ಕೊಂದು ಕಾರಣವೂ ತ್ತು ಅದೇನೆಂದರೆ ಇಸ್ರೇಲ್‌ನ ಉದ್ದೇಶಗಳನ್ನು ವಿಶ್ವಸಂಸ್ಥೆಯ ಧಾನ ಸಭೆಯಿಂದ ಮರೆಮಾಚುವುದು ಮತ್ತು ಆ ಮೂಲಕ 'ಇಸ್ರೇಲ್ ಪರವಾದ ಇಕ್ಕಟ್ಟಿನ ಸ್ಥಿತಿ'ಯೊಂದನ್ನು ರ್ಜಿಸಲು ತನ್ನ ವಿಶ್ವಸಂಸ್ಥೆಯ ಪ್ರತಿನಿಧಿ ಅಬ್ಬಾ ಈಬನ್‌ಗೆ ಕಾಶ ಮಾಡಿಕೊಡುವುದು.

ಅಂದು ಫೆಲೆಸ್ತೀನಿಯರನ್ನು ಉಚ್ಚಾಟಿಸುವುದರ ಹಿಂದೆ ಯಾವ ಉದ್ದೇಶಗಳಿದ್ದವೋ ಅವು ಇಂದಿಗೂ ಸ್ತಿತ್ವದಲ್ಲಿರಬಹುದು. ಅಮೆರಿಕಾ ಬೆಂಬಲದಿಂದ ಇಸ್ರೇಲ್ ಕ್ರಮಿಸಿಕೊಂಡ ಭೂಭಾಗ ಮತ್ತು ಈಜಿಪ್ಟ್ ದೇಶಗಳ ನಡುವೆ ಜನ ಹಾಗೂ ಸರಕುಸಾಮಗ್ರಿಗಳ ಮುಕ್ತ ಸಂಚಾರಕ್ಕೆ ಜಿಪ್ಟ್ ಹಿಂಜರಿಯುತ್ತಿರುವುದಕ್ಕೆ ಇದೂ ಒಂದು ಕಾರಣವಿರಬಹುದು.

ಅಮೆರಿಕಾ, ಇಸ್ರೇಲ್‌ಗಳು ನಡೆಸುತ್ತಿರುವ ಅತ್ಯಾಚಾರದಲ್ಲಿ ಇತ್ತೀಚಿನ ಹೆಚ್ಚಳ ಆರಂಭವಾಗಿರುವುದು ಜನವರಿ 2006ರಲ್ಲಿ. ಅಂದು ಅರಬ್ ಜಗತ್ತಿನಲ್ಲಿ ನಡೆದ ಸ್ವತಂತ್ರ ಮುಕ್ತ ಮತದಾನ ಪ್ರಕ್ರಿಯೆಯಲ್ಲಿ ಫೆಲೆಸ್ತೀನಿಯರು "ತಪ್ಪಾಗಿ" ಮತ ಚಲಾಯಿಸಿದ್ದರು. ಹಾಗೆ "ತಪ್ಪಾಗಿ" ಮತ ಚಲಾಯಿಸಿದ್ದಕ್ಕೆ ಇಸ್ರೇಲ್ ಮತ್ತು ಅಮೆರಿಕಾ ಕಡೆಯಿಂದ ಅವರಿಗೆ ಕಠಿಣ ಶಿಕ್ಷೆಯನ್ನು ವಿಧಿಸಲಾಯಿತು. ಒಂದು ವೇಳೆ ಸೇನಾಕ್ರಾಂತಿಯ ಮೂಲಕ ಚುನಾಯಿತ ಸರ್ಕಾರವನ್ನು ಉರುಳಿಸುವ ಪಾಲಿಸಿಯ ಪ್ರಕ್ರಿಯೆ ಚಾಲನೆ ನೀಡಲಾಯಿತು. ಚುನಾಯಿತ ಹಮಾಸ್ ಸರ್ಕಾರ 2007ರಲ್ಲಿ ಈ ಪ್ರಯತ್ನವನ್ನು ವಿಫಲಗೊಳಿಸುತ್ತಾ ಗಾಜಾ ಪಟ್ಟಿಯ ಮೇಲೆ ಸಂಪೂರ್ಣ ಹತೋಟಿ ಸಾಧಿಸಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಇಸ್ರೇಲ್, ಅಮೆರಿಕಾಗಳು ತಮ್ಮ ಶಿಕ್ಷೆಯನ್ನು ಇನ್ನಷ್ಟು ಕಠಿಣಗೊಳಿಸಿದವು.

2006ರ ಚುನಾವಣೆಗಳು ಕೊನೆಗೊಳ್ಳುತ್ತಲೆ ಹಮಾಸ್ ಕದನವಿರಾಮಕ್ಕೆ ಕರೆಕೊಟ್ಟಿತ್ತು, ಆದರೆ ಇಸ್ರೇಲ್ ಇದನ್ನು ಕಡೆಗಣಿಸಿ ಗಾಜಾ ಪಟ್ಟಿಯ ಮೇಲೆ ದಾಳಿ ಮಾಡಿತು. ಆ ದಾಳಿಗಳಲ್ಲಿ ಮೃತಪಟ್ಟ 660 ಫೆಲೆಸ್ತೀನಿಯರಲ್ಲಿ ಹೆಚ್ಚಿನವರು ಜನಸಾಮಾನ್ಯರಾಗಿದ್ದರು. ಅವರ ಪೈಕಿ ಮೂರನೆ ಒಂದರಷ್ಟು ಮಕ್ಕಳೇ ಆಗಿದ್ದರು. ವಿಶ್ವಸಂಸ್ಥೆಯ ವರದಿಗಳ ಪ್ರಕಾರ ಏಪ್ರಿಲ್ 2006ರಿಂದ ಜುಲೈ 2012ರವರೆಗೆ ನಡೆದಿರುವ ಕದನಗಳಲ್ಲಿ ಒಟ್ಟು 2879 ಫೆಲೆಸ್ತೀನಿಯರು ಮತ್ತು ಕೆಲವು ಡಜನ್‌ಗಳಷ್ಟು ಇಸ್ರೇಲಿಗಳು ಸಾವಿಗೀಡಾಗಿದ್ದಾರೆ.

2008ರಲ್ಲಿ ಮತ್ತೊಂದು ಕದನವಿರಾಮ ಏರ್ಪಟ್ಟಿತ್ತು, ಆದರೆ ಅದು ಜಾರಿಯಲ್ಲಿದ್ದುದು ತೀರಾ ಅತ್ಯಲ್ಪ ಕಾಲ. ಕದನವಿರಾಮದ ಶರತ್ತುಗಳನ್ನು ಹಮಾಸ್ ಪಾಲಿಸಿತು. ಆದರೆ ಇಸ್ರೇಲ್ ಅದೇ ವರ್ಷದ ನವಂಬರ್ ತಿಂಗಳಲ್ಲಿ ಶರತ್ತುಗಳನ್ನು ಉಲ್ಲಂಘಿಸಿತು. ಮತ್ತೆ ಕದನವಿರಾಮಕ್ಕಾಗಿ ನೀಡಿದ ಕರೆಗಳನ್ನೆಲ್ಲಾ ಕಡೆಗಣಿಸಿತಲ್ಲದೆ ಡಿಸೆಂಬರ್‌ನಲ್ಲಿ 'ಕಾಸ್ಟ್ ಲೀಡ್' ಎನ್ನುವ ಮಾರಕ ಕಾರ್ಯಾಚರಣೆಯೊಂದನ್ನು ಆರಂಭಿಸಿತು. ಆ ಕಾರ್ಯಾಚರಣೆ ಇಂದಿಗೂ ಮುಂದುವರಿದಿದೆ. ದೀರ್ಘಕಾಲೀನ ಕದನವಿರಾಮಕ್ಕಾಗಿ ಮತ್ತು ಎರಡು ಪ್ರತ್ಯೇಕ ರಾಷ್ಟ್ರಗಳನ್ನು ಸ್ಥಾಪಿಸುವ ರಾಜಕೀಯ ಸಂಧಾನಕ್ಕಾಗಿ ಅಂತಾರಾಷ್ಟ್ರೀಯ ಒಮ್ಮತವೂ ವ್ಯಕ್ತವಾಗಿದೆ. 1976ರಲ್ಲಿ ಪ್ರಮುಖ ಅರಬ್ ರಾಷ್ಟ್ರಗಳು ಇಂತಹ ಒಂದು ಪರಿಹಾರಕ್ಕಾಗಿ ಆಗ್ರಹಿಸಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಮಂಡಿಸಿದ ಠರಾವನ್ನು ಅಮೆರಿಕಾ ತನ್ನ ವಿಟೊ ಅಧಿಕಾರ ಚಲಾಯಿಸುವ ಮೂಲಕ ತಡೆಹಿಡಿಯುತ್ತಾ ಬಂದಿದೆ. ಇಂತಹ ಪರಿಹಾರಕ್ಕಾಗಿ ಹಮಾಸ್ ಕೊಟ್ಟ ಕರೆಗಳನ್ನು ಕೂಡ ಇಸ್ರೇಲ್, ಅಮೆರಿಕಾಗಳು ತಿರಸ್ಕರಿಸುತ್ತಾ ಬಂದಿವೆ.

ಈ ಬಾರಿಯೂ ಫೆಲೆಸ್ತೀನಿಯರು ತಮಗೆ ವಿಶ್ವಸಂಸ್ಥೆಯಲ್ಲಿ ಹೆಚ್ಚಿನ ಸ್ಥಾನಮಾನ ಬೇಕೆಂದು ಆಗ್ರಹಿಸಿದರು. ಅವರ ಕೋರಿಕೆಯನ್ನು ತಡೆಗಟ್ಟಲು ಶತಪ್ರಯತ್ನ ನಡೆಸಿದ ಅಮೆರಿಕಾ ಕೊನೆಗೂ ಸೋತಿತು. ಅಮೆರಿಕಾ ಇದನ್ನು ವಿರೋಧಿಸುತ್ತಿರುವುದಕ್ಕೆ ಕಾರಣ ಸ್ಪಷ್ಟವಿದೆ: ಫೆಲೆಸ್ತೀನ್‌ಗೆ ಹೆಚ್ಚಿನ ಸ್ಥಾನಮಾನ ಸಿಕ್ಕರೆ ಅಮೆರಿಕಾ ಬೆಂಬಲದಿಂದ ಇಸ್ರೇಲ್ ನಡೆಸುತ್ತಿರುವ ಅಪರಾಧಗಳ ಬಗ್ಗೆ ಫೆಲೆಸ್ತೀನ್ ಅಂತಾರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯದ ಮೊರೆಹೋಗಬಹುದಾಗಿದೆ.

2012ರ ಜನವರಿಯಿಂದ ನವಂಬರ್ 14ರ ತನಕ ನಡೆದಿರುವ ಸಂಘರ್ಷಗಳಲ್ಲಿ 78 ಫೆಲೆಸ್ತೀನಿಯರು ಮತ್ತು ಓರ್ವ ಇಸ್ರೇಲಿ ಪ್ರಜೆ ಹತರಾಗಿದ್ದಾರೆ. ನವಂಬರ್ 14ರಿಂದ ಇಸ್ರೇಲ್ ಆರಂಭಿಸಿರುವ ಹತ್ಯಾಕಾಂಡಕ್ಕೆ 'ಆಪರೇಷನ್ ಪಿಲ್ಲರ್ ಆಫ್ ಡಿಫೆನ್ಸ್' ಎಂದು ಹೆಸರಿಡಲಾಗಿದೆ. ಸಹಜವಾಗಿಯೇ ಇದರ ಪೂರ್ತಿ ಕತೆ ಇನ್ನಷ್ಟು ಸಂಕೀರ್ಣವೂ ಇನ್ನಷ್ಟು ಅಸಹ್ಯಕರವೂ ಆಗಿದೆ. 'ಆಪರೇಷನ್ ಪಿಲ್ಲರ್ ಆಫ್ ಡಿಫೆನ್ಸ್' ಕಾರ್ಯಾಚರಣೆಗೆ ಮೊತ್ತಮೊದಲು ಬಲಿಯಾದವನು ಅಹಮದ್ ಜಬಾರಿ ಎಂಬಾತ. ಗಾಜಾದಲ್ಲಿ ಐದು ವರ್ಷಕ್ಕೂ ಅಧಿಕ ಕಾಲ ಸಾಪೇಕ್ಷ ಶಾಂತಿ ನೆಲೆಸುವಂತೆ ಮಾಡಿದ್ದ ಜಬಾರಿಯನ್ನು ಇಸ್ರೇಲ್‌ನ "ಉಪಗುತ್ತಿಗೆದಾರ" ಮತ್ತು "ಗಡಿಸಿಪಾಯಿ" ಎಂದು ಕರೆದಿದ್ದಾರೆ 'ಹಾರೆಟ್ಜ್' ಪತ್ರಿಕೆಯ ಸಂಪಾದಕ ಅಲೂಫ್ ಬೆನ್. ಜಬಾರಿ ಹತ್ಯೆಗೆ ಆತ ಐದು ವರ್ಷಗಳ ಕಾಲ ಇರಾನ್‌ನಿಂದ ಕ್ಷಿಪಣಿಗಳನ್ನು ಪಡೆದು ಹಮಾಸ್‌ನ ಸೈನ್ಯವನ್ನು ಕಟ್ಟುತ್ತಿದ್ದನೆಂಬ ನೆಪವೊಂದನ್ನು ಮುಂದೊಡ್ಡಲಾಯಿತು. ಆದರೆ ಇಸ್ರೇಲಿನ ಶಾಂತಿ ಕಾರ್ಯಕರ್ತ ಗರ್ಷಾನ್ ಬಾಸ್ಕಿನ್ ಇದಕ್ಕೂ ಹೆಚ್ಚು ಸಂಬಲರ್ಹ ಕಾರಣವನ್ನು ಕೊಡುತ್ತಾರೆ. ಈ ಗರ್ಷಾನ್ ಹಲವಾರು ವರ್ಷಗಳ ಕಾಲ ಜಬಾರಿ ಜೊತೆ ನೇರ ಮಾತುಕತೆಗಳಲ್ಲಿ ಭಾಗಿಯಾಗಿದ್ದವರು. ಇವುಗಳಲ್ಲಿ ಹಮಾಸ್ ಪಡೆಗಳು ಇಸ್ರೇಲಿ ಸೈನಿಕ ಜಿಲಾದ್ ಶಾಲಿತ್‌ನನ್ನು ಸೆರೆ ಹಿಡಿದಿದ್ದಾಗ ಆತನ ಬಿಡುಗಡೆಗಾಗಿ ನಡೆಸಿದ ಯೋಜನೆಗಳೂ ಸೇರಿವೆ. ಜಬಾರಿ ಹತ್ಯೆಯಾಗುವುದಕ್ಕೆ ಕೆಲವು ಗಂಟೆಗಳ ಮುನ್ನ ಇಸ್ರೇಲ್ ಜೊತೆಗಿನ ಕದನವಿರಾಮ ಒಪ್ಪಂದವೊಂದರ ಕರಡು ಪ್ರತಿ ಆತನ ಕೈಸೇರಿತ್ತು. ಇಸ್ರೇಲ್ ಮತ್ತು ಗಾಜಾ ಪಟ್ಟಿಯ ಬಣಗಳ ನಡುವೆ ಸಂಘರ್ಷ ಆರಂಭವಾದಾಗಲೆಲ್ಲ ಕದನ ನಿಲುಗಡೆ ಆಗುವಂತೆ ನೋಡಿಕೊಳ್ಳುವ ಕಾರ್ಯವಿಧಾನಗಳು ಅದರಲ್ಲಿದ್ದವು ಎಂದು ಗರ್ಷಾನ್ ಹೇಳಿದ್ದಾರೆ. ಮೊನ್ನೆ ನವಂಬರ್ 12ರಂದು ಇದೇರೀತಿ ಹಮಾಸ್ ಕರೆಕೊಟ್ಟಂತೆ ಕದನವಿರಾಮ ಜಾರಿಯಲ್ಲಿತ್ತು. ಇಸ್ರೇಲ್ ಆ ಕದನವಿರಾಮವನ್ನು ದುರ್ಬಳಕೆ ಮಾಡಿದಂತೆ ತೋರುತ್ತದೆ. ಹಮಾಸ್ ನಾಯಕರ ಗಮನವನ್ನು ಸಿರಿಯಾ ಜೊತೆಗಿನ ಗಡಿ ಮೇಲೆ ತಿರುಗಿಸಿದಾಗ ಅವರು ತಮ್ಮ ರಕ್ಷಣೆಯ ವಿಚಾರದಲ್ಲಿ ಸಡಿಲವಾಗುತ್ತಾರೆ; ಆಗ ಅವರನ್ನು ಹತ್ಯೆ ಮಾಡುವುದು ಸುಲಭವೆಂದು ಅದು ಭಾವಿಸಿರಬೇಕು.

ಇಸ್ರೇಲ್ ಗಾಜಾ ಪಟ್ಟಿಯ ಒಳಗಡೆ ಒಂದು 'ಬಫರ್ ವಲಯ'ವನ್ನು ಸ್ಥಾಪಿಸಿದೆ. ಅದರೊಳಗಿರುವ ಫೆಲೆಸ್ತೀನಿಯರು ಗಾಜಾದಲ್ಲಿರುವ ಸೀಮಿತ ಕೃಷಿಯೋಗ್ಯ ಭೂಮಿಗಳಿಗೆ ಪ್ರವೇಶಿಸುವಂತಿಲ್ಲ. ಇದಲ್ಲದೆ ಇಷ್ಟು ವರ್ಷಗಳ ಕಾಲವೂ ಗಾಜಾ ಪಟ್ಟಿಗೆ ದಿಗ್ಬಂಧನ ಹೇರಿ ಅಲ್ಲಿನವರಿಗೆ ಬದುಕುಳಿಯಲು ಬೇಕಾದ ಕನಿಷ್ಠ ಸಾಮಗ್ರಿಗಳಷ್ಟೆ ಲಭ್ಯವಾಗುವಂತೆ ನೋಡಿಕೊಳ್ಳಲಾಗಿದೆ. ವಿಶ್ವಸಂಸ್ಥೆಯ ವರದಿಯೊಂದು ಹೇಳುವಂತೆ ಇತ್ತೀಚಿನ ದಾಳಿಯ ಸಂದರ್ಭದಲ್ಲಿ ಅಲ್ಲಿ ಶೇಕಡಾ 40ರಷ್ಟು ಅತ್ಯವಶ್ಯಕ ಔಷಧಿಗಳು ಮತ್ತು ಶೇಕಡಾ 50ಕ್ಕೂ ಅಧಿಕ ಅತ್ಯವಶ್ಯಕ ವೈದ್ಯಕೀಯ ಸಾಮಗ್ರಿಗಳ ಕೊರತೆ ಇತ್ತು. ಕಳೆದ ನವಂಬರ್ ತಿಂಗಳಲ್ಲಿ ಗಾಜಾ ಪಟ್ಟಿಯಿಂದ ಅನೇಕ ಭೀಭತ್ಸಕರ ಫೋಟೋಗಳು ಬಂದಿವೆ. ಕೊಲೆಗೀಡಾದ ಮಗುವೊಂದರ ಸುಟ್ಟು ಕರಕಲಾದ ಶವವನ್ನು ಹಿಡಿದಿರುವ ಡಾಕ್ಟರ್ ಒಬ್ಬನ ಚಿತ್ರ ಅವುಗಳಲ್ಲೊಂದು. ಈತ ಖಾನ್ ಯೂನಿಸ್ ಆಸ್ಪತ್ರೆಯ ನಿರ್ದೇಶಕ ಹಾಗೂ ಅಲ್ಲಿನ ಸರ್ಜರಿ ವಿಭಾಗದ ಮುಖ್ಯಸ್ಥ. ನಾನು ಕೆಲವೇ ವಾರಗಳ ಹಿಂದೆ ಅದೇ ಆಸ್ಪತ್ರೆಗೆ ಹೋಗಿದ್ದೆ. ಆ ಭೇಟಿ ಕುರಿತ ನನ್ನ ಲೇಖನದಲ್ಲಿ ಅಲ್ಲಿಗೆ ಅತಿ ತುರ್ತಾಗಿ ಬೇಕಿದ್ದ ಔಷಧಿಗಳ ಬಗ್ಗೆ ಹಾಗೂ ಶಸ್ತ್ರಚಿಕಿತ್ಸೆಯ ಉಪಕರಣಗಳಿಗಾಗಿ ಆತ ಮಾಡಿದ ಕಳಕಳಿಯ ವಿನಂತಿ ಬಗ್ಗೆ ಬರೆದಿದ್ದೆ. ಅಮೆರಿಕಾ, ಇಸ್ರೇಲ್ ಮತ್ತು ಇವೆರಡರೊಂದಿಗೆ ಶಾಮೀಲಾದ ಈಜಿಪ್ಟ್ - ಇವು ಮೂರು ಕೂಡಿಕೊಂಡು ವಿಧಿಸಿರುವ ದಿಗ್ಬಂಧನದ ಪರಿಣಾಮವಾಗಿ ನಡೆದಿರುವ ಹಲವು ಪಾತಕಗಳಲ್ಲಿ ಇದೂ ಒಂದು.

ನವಂಬರ್ ತಿಂಗಳ ಘಟನೆಯಲ್ಲಿ ಮಕ್ಕಳೂ ಸೇರಿದಂತೆ 160ಕ್ಕೂ ಅಧಿಕ ಫೆಲೆಸ್ತೀನಿಯರು ಮತ್ತು ಆರು ಇಸ್ರೇಲಿ ಪ್ರಜೆಗಳು ಅಸು ನೀಗಿದರು. ಸತ್ತವರ ಪೈಕಿ ಮೂವರು ಪತ್ರಕರ್ತರು. 'ತನ್ನ ಗುರಿ ಇದ್ದುದು ಭಯೋತ್ಪಾದಕ ಚಟುವಟಿಕೆ ಜೊತೆ ಸಂಬಂಧವಿರುವ ಜನರು' ಎಂಬ ಹೇಳಿಕೆಯೊಂದನ್ನು ನೀಡುವ ಮೂಲಕ ಇಸ್ರೇಲ್ ತನ್ನ ಕೃತ್ಯವನ್ನು ಅಧಿಕೃತವಾಗಿ ಸಮರ್ಥಿಸಿಕೊಂಡಿತು. 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯ ವರದಿಗಾರ ಡೇವಿಡ್ ಕಾರ್ ಪ್ರಕಾರ ಇಸ್ರೇಲ್ ಇಂದು 'ಭಯೋತ್ಪಾದಕ ಚಟುವಟಿಕೆ ಜೊತೆ ಸಂಬಂಧ' ಎಂಬ ಅಸ್ಪಷ್ಟ ವಾಕ್ಯವನ್ನು ಉದ್ಧರಿಸಿ ಸುದ್ದಿ ಮಾಧ್ಯಮಗಳ ವರದಿಗಾರರನ್ನೂ ಕೊಲ್ಲುವ ಹಂತಕ್ಕೆ ಮುಟ್ಟಿದೆ. ಭಾರಿ ಪ್ರಮಾಣದ ವಿನಾಶ ಸಂಭವಿಸಿದ್ದೆಲ್ಲಾ ಗಾಜಾದಲ್ಲಿ, ಇಸ್ರೇಲಿನ ಈ ಕಾರ್ಯಾಚರಣೆಯಲ್ಲಿ ಅಮೆರಿಕಾದ ಅತ್ಯಾಧುನಿಕ ಯುದ್ಧೋಪಕರಣಗಳನ್ನು ಬಳಸಲಾಯಿತು. ಯಥಾಪ್ರಕಾರ ರಾಜತಾಂತ್ರಿಕ ಬೆಂಬಲ ಒದಗಿಸಿದ ಅಮೆರಿಕಾ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಕದನವಿರಾಮಕ್ಕಾಗಿ [illegible] ಕರೆಯನ್ನು ತಡೆಹಿಡಿಯಿತು. ಇಸ್ರೇಲ್ ಇಂತಹ ದುಸ್ಸಾಹಸಗಳನ್ನು ಮಾಡುತ್ತಾ [illegible] ಅದರ ಬಗ್ಗೆ ಇರುವ ಗೌರವ ಕಡಿಮೆಯಾಗುತ್ತಾ ಹೋಗುತ್ತದೆ. ಈ ಸಂಘರ್ಷದ ಸ್ವರೂಪ ಹಾಗೂ ಹತ್ಯಾಕಾಂಡದ ಚಿತ್ರಗಳು [illegible] ತನ್ನನ್ನು ತಾನು [illegible] ಇಸ್ರೇಲ್‌ನ [illegible] ಜನರಲ್ಲಾದರೂ ಸಂಪೂರ್ಣವಾಗಿ ತೊಡೆದುಹಾಕುತ್ತವೆ.

ಪ್ರಸಕ್ತ ದಾಳಿಗೆ ಇಸ್ರೇಲ್ ಕೊಟ್ಟ ನೆಪಗಳೂ [illegible] ನಾವು ದಾಳಿಕೋರ ಅಮೆರಿಕಾ, ಇಸ್ರೇಲ್‌ಗಳ [illegible] ಹೇಳಿಕೆಗಳನ್ನು ನಿರ್ಲಕ್ಷಿಸಬಹುದು. ಆದರೆ 'ಇಸ್ರೇಲ್ ಮೇಲೆ ಪದೇಪದೇ ಕ್ಷಿಪಣಿ ದಾಳಿಗಳು ನಡೆದಾಗ ಅದೇನು ಮಾಡಬೇಕು' ಎಂದು ಸಭ್ಯ ಜನ ಕೂಡ ಕೇಳುತ್ತಾರೆ. ಇದೊಂದು ನ್ಯಾಯಯುತ ಪ್ರಶ್ನೆ. ಇದಕ್ಕೆ ನೇರ ಉತ್ತರಗಳಿವೆ.

- ಅಂತಾರಾಷ್ಟ್ರೀಯ ಕಾನೂನನ್ನು ಪಾಲಿಸಬೇಕು ಎನ್ನುವುದು ಒಂದು ಪ್ರತಿಕ್ರಿಯೆ. ಆ ಕಾನೂನಿನ ಪ್ರಕಾರ ಒಂದೇ ಒಂದು ಸಂದರ್ಭದಲ್ಲಿ ಭದ್ರತಾ ಮಂಡಳಿಯ ಅನುಮೋದನೆ ಇಲ್ಲದೆ ಬಲವನ್ನು ಪ್ರಯೋಗಿಸಬಹುದು: ಸಶಸ್ತ್ರ ದಾಳಿ ನಡೆದಿರುವುದನ್ನು ಭದ್ರತಾ ಮಂಡಳಿಯ ಗಮನಕ್ಕೆ ತಂದ ಬಳಿಕ ಮಂಡಳಿ ಕ್ರಮಕೈಗೊಳ್ಳುವ ತನಕ ಸ್ವರಕ್ಷಣೆಗಾಗಿ ಬಲಪ್ರಯೋಗ ಮಾಡಬಹುದು.

ಇಸ್ರೇಲ್‌ಗೆ ಈ ಕಾನೂನು ಬಗ್ಗೆ ಚೆನ್ನಾಗಿ ಗೊತ್ತಿದೆ. 1967ರ ಜೂನ್‌ನಲ್ಲಿ ಯುದ್ಧಾರಂಭವಾದಾಗ ಅದು ಬಳಸಿಕೊಂಡದ್ದು ಇದೇ ಕಾನೂನನ್ನು. ಆಗ ದಾಳಿ ಶುರು ಮಾಡಿದ್ದೇ ಇಸ್ರೇಲ್ ಎಂದು ತಕ್ಷಣ ಸಾಬೀತಾದಾಗ ಅದರ ನಿಜಬಣ್ಣ ಬಯಲಾಗಿತ್ತು. ಮೊನ್ನೆ ನವಂಬರ್‌ನಲ್ಲಿ ಅದು ಈ ಮಾರ್ಗವನ್ನು ಹಿಡಿಯಲಿಲ್ಲ ಯಾಕೆಂದರೆ ಭದ್ರತಾ ಮಂಡಳಿಯ ಚರ್ಚೆಯ ವೇಳೆ ಏನೆಲ್ಲ ವಿಷಯಗಳು ಬಯಲಾಗಲಿವೆಯೆಂದು ಅದಕ್ಕೆ ಗೊತ್ತಿತ್ತು.

- ಮತ್ತೊಂದು ಸಂಕುಚಿತ ಪ್ರತಿಕ್ರಿಯೆಯೆಂದರೆ ಯುದ್ಧ ನಿಲುಗಡೆಗೆ ಒಪ್ಪುವುದು. ನವಂಬರ್ 14, 2012ರಂದು ಕಾರ್ಯಾಚರಣೆಯನ್ನು ಆರಂಭಿಸುವ ಮುನ್ನ ಇದು ಸಾಧ್ಯವಿದ್ದಂತೆ ತೋರಿತ್ತು.

- ಇನ್ನಷ್ಟು ದೂರಗಾಮಿಯಾದ ಪ್ರತಿಕ್ರಿಯೆಗಳೂ ಇವೆ. ಕಾಕತಾಳೀಯವಾಗಿ ಒಂದರ ಬಗ್ಗೆ 'ನ್ಯಾಷನಲ್ ಇಂಟರೆಸ್ಟ್' ನಿಯತಕಾಲಿಕದಲ್ಲಿ ಚರ್ಚಿಸಲಾಗಿದೆ. ರಫಾಯೆಲ್ಲೊ ಪಂಟುಚ್ಚಿ ಮತ್ತು ಅಲೆಕ್ಸಾಂಡ್ರೊಸ್ ಪೀಟರ್ಸನ್ ಎಂಬ ವಿದ್ವಾಂಸರು ಚೀನಾದ ಸಿಂಜಿಯಾಂಗ್ ಪ್ರಾಂತ್ಯದ ಪಶ್ಚಿಮ ಭಾಗದಲ್ಲಿ ನಡೆದ ದಂಗೆಗಳಿಗೆ ಸರ್ಕಾರದ ಪ್ರತಿಕ್ರಿಯೆ ಏನಾಗಿತ್ತೆಂದು ವಿವರಿಸಿದ್ದಾರೆ. ದಂಗೆಗಳ ವೇಳೆ ಉಯಿಘರ್ ಜನರ ಗುಂಪುಗಳು ನಗರದಾದ್ಯಂತ ಸಂಚರಿಸಿ ಚೀನೀಯರನ್ನು ಕೊಂದು ಹಾಕಿದ್ದವು. ಆ ಸಂದರ್ಭದಲ್ಲಿ ತಕ್ಷಣ ಸ್ಥಳಕ್ಕೆ ತೆರಳಿದ ಚೀನಾದ ಅಧ್ಯಕ್ಷ ಹು ಜಿನ್‌ಟಾವೊ ಮೊದಲು ಭದ್ರತಾ ಸಂಸ್ಥೆಗಳ ಹಿರಿಯ ಅಧಿಕಾರಿಗಳನ್ನು ಕೆಲಸದಿಂದ ಕಿತ್ತುಹಾಕಿದರು. ತರುವಾಯ ಅಶಾಂತಿಗೆ ಕಾರಣವಾದ ವಿಷಯಗಳೇನಿದ್ದುವೋ ಅವುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಗಾಜಾದಲ್ಲೂ ಒಂದು ನಾಗರಿಕ ಪ್ರತಿಕ್ರಿಯೆ ಸಾಧ್ಯವಿದೆ. ಅಮೆರಿಕಾ, ಇಸ್ರೇಲ್‌ಗಳು ತಮ್ಮ ನಿರ್ದಯ, ನಿರಂತರ ದಾಳಿಗಳನ್ನು ನಿಲ್ಲಿಸಿ, ಗಡಿಗಳನ್ನು ತೆರೆದು ಮರುನಿರ್ಮಾಣಕ್ಕೆ ಅವಕಾಶ ಮಾಡಿಕೊಡಬಹುದು. ಇದಲ್ಲದೆ ತಾವು ದಶಕಗಳ ಕಾಲ ನಡೆಸಿದ ಹಿಂಸಾಚಾರ ಮತ್ತು ದಬ್ಬಾಳಿಕೆಗಳಿಗೆ ಪರಿಹಾರ ಕೊಡುವ ಬಗ್ಗೆಯೂ ಯೋಚಿಸಬಹುದು... 'ಇದನ್ನು ಕಲ್ಪಿಸಿಕೊಳ್ಳಲು ಸಾಧ್ಯವೆಂದಾದರೆ.


ಕದನವಿರಾಮ ಒಪ್ಪಂದದ ಪ್ರಕಾರ ಗಡಿ ಪ್ರದೇಶಗಳಲ್ಲಿ ವಾಸಿಸುವ ಜನರ ದಿಗ್ಬಂಧನ ಮತ್ತು ಅವರನ್ನು ಗುರಿಯಾಗಿಸುವುದನ್ನು ನಿಲ್ಲಿಸುವ ಕ್ರಮಗಳನ್ನು ಕದನವಿರಾಮ ಆರಂಭವಾದ 24 ಗಂಟೆಗಳ ಬಳಿಕ ತೆಗೆದುಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳುವ ಲಕ್ಷಣಗಳು ಕಂಡುಬರುತ್ತಿಲ್ಲ. ಅಮೆರಿಕಾ, ಇಸ್ರೇಲ್‌ಗಳಿಗೆ ಗಾಜಾ ಮತ್ತು ಪಶ್ಚಿಮ ದಂಡೆಗಳನ್ನು ಪ್ರತ್ಯೇಕಿಸುವ ನೀತಿಯನ್ನು - ಇದು ಆಸ್ಲೊ ಒಪ್ಪಂದದ ಉಲ್ಲಂಘನೆ - ಕೈಬಿಡುವ ಮನಸ್ಸೂ ಇರುವಂತಿಲ್ಲ. ಅಷ್ಟೇ ಅಲ್ಲ, ಪಶ್ಚಿಮ ದಂಡೆಯಲ್ಲಿ ಮಾಡುತ್ತಿರುವಂತಹ ಕಾನೂನುಬಾಹಿರ ಮಾರಾಟೀಕರಣ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ರಾಜಕೀಯ ಪರಿಹಾರಕ್ಕೆ ಒಳಗಿಂದೊಳಗೆ ಕನ್ನಹಾಕುವುದನ್ನು ನಿಲ್ಲಿಸುವ ಅಥವಾ ಕಳೆದ ದಶಕಗಳ ನಿರಾಕರಣಾ ವಾದವನ್ನು ಇನ್ಯಾವುದೇ ರೀತಿಯಲ್ಲಿ ಕೈಬಿಡುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ.

ಗಾಜಾದ ಅರಕ್ಷಿತ ನಾಗರಿಕರ ಮೇಲೆ ಇಸ್ರೇಲಿ ಬಾಂಬ್‌ಗಳ ಮಳೆಗರೆಯುತ್ತಿದ್ದ ಸಮಯದಲ್ಲಿ ಗಾಜಾದ ಖ್ಯಾತ ಮಾನವ ಹಕ್ಕು ವಕೀಲನಾದ ರಾಜಿ ಸೌರಾನಿ "ನಾವು ನ್ಯಾಯ ಮತ್ತು ಉತ್ತರದಾಯಿತ್ವಕ್ಕಾಗಿ ಒತ್ತಾಯಿಸುತ್ತಿದ್ದೇವೆ. ನಾವು ಸ್ವತಂತ್ರವಾಗಿ ಮತ್ತು ಗೌರವಯುತವಾಗಿ ಸಹಜ ಬಾಳೊಂದನ್ನು ಬಾಳುವ ಕನಸನ್ನು ಕಾಣುತ್ತಿದ್ದೇವೆ" ಎಂದು ಕೋರಿಕೊಂಡಿದ್ದರು. ಜಗತ್ತು ಆತನ ಮನವಿಗೆ ಒಂದಲ್ಲ ಒಂದು ದಿನ - ಆ ದಿನ ಬೇಗನೆ ಬರಲಿದೆ - ಸ್ಪಂದಿಸಲಿದೆ.

ಇಂಗ್ಲಿಷ್ ಮೂಲ: ನೋಮ್ ಚಾಮ್‌ಸ್ಕಿ

ಕನ್ನಡಕ್ಕೆ: ಸುರೇಶ ಭಟ್ ಬಾಕ್ರಬೈಲು

ಘಾಟಿ ಸುಬ್ರಹ್ಮಣ್ಯದಲ್ಲಿ ಸಿಮೆಂಟ್ ಹುತ್ತ!




ಮೂಢನಂಬಿಕೆಗೆ ಭರ್ಜರಿ ಮಾರ್ಕೆಟ್ಟಿದೆ. ಇದು ಯಾವಾಗಲೋ ಸಾಬೀತಾದ ಹಳೇ ಸಂಗತಿ. ಆದರೆ ದೊಡ್ಡಬಳ್ಳಾಪುರದ ಘಾಟಿ ಸುಬ್ರಹ್ಮಣ್ಯದಲ್ಲಿ ಭಕ್ತಿ, ನಂಬಿಕೆ, ಮುಗ್ಧತೆ, ಭಂಡತನ ಇವೆಲ್ಲವನ್ನೂ ಹೋಲ್‌ಸೇಲಾಗಿ ಮಾರಾಟಕ್ಕಿಟ್ಟ ವಂಚಕರ ತಂಡವೊಂದು ಸಿಮೆಂಟ್ ಹುತ್ತಕ್ಕೆ ಜನರಿಂದ ಹಾಲು ಸುರಿಸಿ ಭಾರೀ ಕಮಾಯಿ ಮಾಡಿಕೊಳ್ಳುತ್ತಿದ್ದದ್ದು ಕಡೆಗೂ ಬೆಳಕಿಗೆ ಬಂದಿದೆ. ಅಂದಹಾಗೆ ಈ ಪರಿ ದಗಾಕೋರತನದ ಸಾರಥ್ಯ ವಹಿಸಿದ್ದು ಖುದ್ದು ಅಲ್ಲಿನ ಅರ್ಚಕರುಗಳೇ!

ನಾಗದೋಷ ಪರಿಹಾರ, ಹುತ್ತಕ್ಕೆ ಹಾಲೆರೆಯುವುದು, ಸಂಕಷ್ಟ ನಿವಾರಣೆ, ಮಕ್ಕಳ ಭಾಗ್ಯ, ವಗೈರಾಗಳೆಲ್ಲ ತಮ್ಮ ಕಮಾಯಿಗೆ ಸರಕಾಗುತ್ತವೆಂಬ ಸುಳಿವು ಸಿಗುತ್ತಿದ್ದಂತೆಯೇ ಘಾಟಿ ಸುಬ್ರಹ್ಮಣ್ಯದ ಅರ್ಚಕರುಗಳು ಫೋರ್‌ಟ್ವೆಂಟಿ ಪ್ಲ್ಯಾನೊಂದನ್ನು ರೂಪಿಸಿದ್ದರು. ಅದೇನೆಂದರೆ ದೇವಸ್ಥಾನದ ಆವರಣದಲ್ಲಿ ಒಂದಷ್ಟು ಸಿಮೆಂಟ್ ಹುತ್ತಗಳನ್ನು ನಿರ್ಮಿಸಿ ಮೇಲ್ನೋಟಕ್ಕೆ ಸಹಜ ಹುತ್ತಗಳೇನೋ ಎಂಬಂತೆ ಆಲ್ಟ್ರೇಷನ್ ಮಾಡಿಸಿಟ್ಟುಕೊಂಡಿದ್ದರು. ಈ ಸಿಮೆಂಟ್ ಹುತ್ತಗಳ ವಿನ್ಯಾಸ ಹೇಗಿತ್ತೆಂದರೆ ಎಲ್ಲವೂ ಸ್ಯಾನಿಟರಿ ಸಿಸ್ಟಮ್, ಅರ್ಥಾತ್ ಇಲ್ಲಿ ಸುರಿಯುವ ಹಾಲು ಒಳಗಿಂದೊಳಗೆ ಹರಿದು ಮೋರಿ ಸೇರುವಂತೆ ಪೈಪ್‌ಗಳನ್ನು ಅಳವಡಿಸಲಾಗಿತ್ತು, ಇನ್ನು ಈ ಹುತ್ತದ ಬಾಯೊಳಕ್ಕೆ 'ನಾಗಾರ್ಪಣಮಸ್ತು ಸ್ವಾಹಾ' ಎಂದು ಹಾಕುತ್ತಿದ್ದ ಬೆಳ್ಳಿ, ಚಿನ್ನದ ನಾಗರಗಳಾಗಲಿ ಇಲ್ಲವೆ ಇನ್ನಿತರೆ ಆಭರಣಗಳಾಗಲಿ ಇದೇ ರೀತಿ ಗುಪ್ತ್-ಗುಪ್ತ್ ಮಾರ್ಗದಲ್ಲಿ ಗಪ್‌ಚುಪ್ ಅಂತ ಅಂಡರ್‌ಗ್ರೌಂಡ್ ಖಜಾನೆ ಸೇರುವ ವ್ಯವಸ್ಥೆಯೂ ಅಲ್ಲಿತ್ತು, ಮಾಡಬಾರದ ಕೆಲಸ ಮಾಡಿಯೊ, ಕಾಸು ಅಥವಾ ದೈವತ್ವದ ಹುಚ್ಚು ಹೆಚ್ಚಾಗಿಯೋ ದೇವಸ್ಥಾನದತ್ತ ಬರುವ 'ಭಲೇ' ಭಕ್ತಾದಿಗಳನ್ನು ಗುರುತಿಸಿ ಅವರಿಗೆ ಬಲೆ ಬೀಸುತ್ತಿದ್ದ ಈ ಅರ್ಚಕರುಗಳು ಆಗಮ, ಮಧ್ಯಮ, ಅಧಮ ಅಂತೆಲ್ಲ ಅರ್ಥವಾಗದ ಭಾಷೆಯಲ್ಲಿ ಅವರನ್ನು ಬೆದರಿಸಿ ಪೂಜೆಗೆ ಅಣಿಗೊಳಿಸುತ್ತಿದ್ದರು. ಮುಂದಿನದೆಲ್ಲ ಸುಲಿಗೆಯ ಮಹಾಮಂಗಳಾರತಿ! ಕೊನೆಗೆ ಪಾಪಿ ಭಕ್ತನಿಗೆ ಪುಣ್ಯದ ಸರ್ಟಿಫಿಕೇಟನ್ನೊ, ಪಾಪ ಪರಿಹಾರದ ಕಾಂಪನ್ಸೇಟರಿ ಪ್ರಸಾದವನ್ನೊ ನೀಡಿ ಗುದುಮಿ ಬಿಟ್ಟರೆ ಒಂದು ಎಪಿಸೋಡು ಮುಗಿದಂತೆ. ಮತ್ತೆ ಹೊಸ 'ಭಕ್ತ'ನ ಪಾಪ ಪರಿಹಾರಕ್ಕೆ ಸಜ್ಜಾಗುವುದು. ಇದು ಇಲ್ಲಿನ ಅರ್ಚಕರುಗಳ ಕಸುಬು ಕಮ್ ದಂಧೆ.

ಇದೀ ವೃತ್ತಾಂತದ ಮೂಲ ಪ್ರೇರಣೆ ಎಂದರೆ ಕುಕ್ಕೆ ಸುಬ್ರಹ್ಮಣ್ಯ. ನಾಗಪೂಜೆ, ನಾಗದೋಷ, ಸರ್ಪದೋಷದಂತಹ ಸಮಸ್ಯೆಗಳಿಗೆ ಕುಕ್ಕೆಸುಬ್ರಹ್ಮಣ್ಯದಲ್ಲಿ ಪರಿಹಾರ ಕಂಡುಕೊಳ್ಳುವ ಕುರುಡು ನಂಬಿಕೆಯೇ ಘಾಟಿಯ ಅರ್ಚಕರುಗಳಿಗೆ ಊಟಿಯ ಐಡಿಯಾ ಕೊಟ್ಟಿರುವುದು. ಕುಕ್ಕೆ ಇಲ್ಲಿಂದ ಬಲು ದೂರ. ಅಲ್ಲಿಗೆ ಹೋಗಿ ಬರೋದೆಂದರೆ ಬಲು ತ್ರಾಸಿನ ಕೆಲಸ. ಇದನ್ನೇ ಎನ್‌ಕ್ಯಾಶ್ ಮಾಡಿಕೊಂಡ ಅರ್ಚಕರುಗಳು ಘಾಟಿಯಲ್ಲಿ ಪರ್ಯಾಯ ಕುಕ್ಕೆಯೊಂದನ್ನು ಸೃಷ್ಟಿಸಿ ಇಲ್ಲಿನ ಹುತ್ತಕ್ಕೆ ಹಾಲು ಸುರಿದರೆ ಅಲ್ಲಿನ ಹುತ್ತವೂ ಸಂತೃಪ್ತವಾಗಿ ವರ ಕೊಟ್ಟುಬಿಡುತ್ತೆ ಎಂಬ ಪುಕಾರಬ್ಬಿಸಿದ್ದರು. ಅದು ಅಂದುಕೊಂಡದ್ದಕ್ಕಿಂತ ಚೆನ್ನಾಗಿಯೇ ವರ್ಕ್‌ಔಟ್ ಆಗಿತ್ತು, ಆರಂಭದ ದಿನಗಳಲ್ಲಿ ಅರ್ಚಕರು ಗಿರಾಕಿಗಳನ್ನು ಹುಡುಕಿ, ಅವರ ಬ್ರೈನ್‌ವಾಶ್ ಮಾಡಿ ಹಾಲು ಸುರಿಸಲು ಒಪ್ಪಿಸಬೇಕಾಗಿತ್ತು, ಆದರೆ ನಮ್ಮ ಜನ ಅದೆಷ್ಟು ಬೇಗ ಸ್ವಾಮಿಯ ಪ್ರಭಾವವನ್ನು ಅರ್ಥೈಸಿಕೊಂಡರೆಂದರೆ ಈಗ ಹಾಲಿನ ಜೊತೆಗೆ ಬೆಳ್ಳಿ, ಬಂಗಾರದ ನಾಗರಗಳನ್ನೂ ಸುರಿಯಲು ಮುಗ್ಧಾತಿಮುಗ್ಧ ಭಕ್ತರು ಸಾಲುಗಟ್ಟಿ ಕಾಯುತ್ತಿರುತ್ತಾರೆ. ಅರ್ಚಕರುಗಳಿಗಂತು ಪುರುಸೊತ್ತೇ ಇಲ್ಲ.

ಅಷ್ಟಕ್ಕೂ ಇಲ್ಲಿನ ಪೂಜೆ ಫೀಜುಗಳ ಮೆನು ನೋಡಿದರೆ ಎಂತವರಿಗೆ ಆದರೂ ಥಟ್ಟನೆ ನಾಗದೋಷ ಅಡರಿಬಿಡುತ್ತೆ. ಒಂದೊಂದು ಪೂಜೆಗೆ ಒಂದೊಂದು ರೇಟು. ಇಪ್ಪತ್ತೈದು ಸಾವಿರದಿಂದ ಆರಂಭ ವಾಗಿ ಐವತ್ತು ಸಾವಿರ, ಒಂದು ಲಕ್ಷದಷ್ಟು ದುಬಾರಿ ಪೂಜೆಗಳೂ ಇಲ್ಲಿ ಲಭ್ಯ. ಎಲ್ಲವೂ ಭಕ್ತನ ಆರ್ಥಿಕ ಸಾಮರ್ಥ್ಯವನ್ನು ಅವಲಂಬಿಸಿರುತ್ತೆ. ಕೊಟ್ಟಷ್ಟೂ ಭಗವಂತನ ರೇಟು ಏರಿಸುವ ಮಾರ್ಕೆಟಿಂಗ್ ಸ್ಟ್ರಾಟಜಿ ಅರ್ಚಕರುಗಳಿಗೆ ಸಿದ್ಧಿಸಿ ಹೋಗಿದೆ.




ಈ ಪರಿ ವಂಚನೆ ಯಾರೋ ಒಂದಿಬ್ಬರಿಂದ ಮಾಡಲು ಸಾಧ್ಯವಿಲ್ಲ, ಒಂದು ದೊಡ್ಡ ವ್ಯವಸ್ಥಿತ ಜಾಲವೇ ಇದರ ಹಿಂದೆ ಅಡಗಿರುವುದು ನಿಸ್ಸಂಶಯ. ದೇವಸ್ಥಾನ ಉಸ್ತುವಾರಿಯ ಪ್ರಧಾನ ಅರ್ಚಕ ರಮಾನಾಥ ಶರ್ಮಾನಿಂದ ಹಿಡಿದು ಆಡಳಿತ ಮಂಡಳಿ, ಮುಜರಾಯಿ ಇಲಾಖೆ ಅಧಿಕಾರಿ ಎಲ್ಲರೂ ಇದರಲ್ಲಿ ಭಾಗಿಯಾಗಿದ್ದಾರೆ. ಆದರೆ ಇದಕ್ಕೆ ಪ್ರತಿಕ್ರಿಯಿಸಿರುವ ಆಡಳಿತ ಮಂಡಳಿ ತಮಗೆ ಇದರ ಬಗ್ಗೆ ಗೊತ್ತೇ ಇಲ್ಲ, ಅಷ್ಟಕ್ಕೂ ಸಿಮೆಂಟ್ ಹುತ್ತಗಳು ದೇವಾಲಯದ ಆವರಣದಿಂದ ಹೊರಗಿರುವುದರಿಂದ ನಮಗೂ ಅದಕ್ಕೂ ಸಂಬಂಧವೇ ಇಲ್ಲ ಎಂಬ ಹೊಣೆಗೇಡಿ ಮಾತುಗಳನ್ನು ಮಂತ್ರ ಪಠಿಸಿದಷ್ಟೇ ಸುಲಭವಾಗಿ ಉಚ್ಚರಿಸುತ್ತಿದ್ದಾರೆ. ಗರ್ಭಗುಡಿಯಿಂದ ಕೆಲವೇ ಹೆಜ್ಜೆ ದೂರದಲ್ಲಿ, ಕಳೆದ ಹತ್ತನ್ನೆರಡು ವರ್ಷದಿಂದ ನಿತ್ಯ ನಿರಂತರವಾಗಿ ಸಾಗಿಬರುತ್ತಿರುವ ಈ ಹುತ್ತದ ದಂಧೆ ಬಗ್ಗೆ ತಮಗೆ ತಿಳಿದೇ ಇಲ್ಲವೆನ್ನುವುದನ್ನು ಯಾರಾದರು ಒಪ್ಪಲು ಸಾಧ್ಯವೇ?

ಅಸಲಿಗೆ ಘಾಟಿ ಸುಬ್ರಹ್ಮಣ್ಯ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನ. ಅಂದರೆ ಇಲ್ಲಿನ ಕಾಣಿಕೆ ಹುಂಡಿಗೆ ಬೀಳುವ ಕಾಸು, ಮಂಗಳಾರತಿಯಿಂದ ಬಂದ ದಕ್ಷಿಣೆ, ಪೂಜಾ ಮಹೋತ್ಸವಗಳಿಗೆ ಬರುವ ದೇಣಿಗೆ ಎಲ್ಲವೂ ಮುಜರಾಯಿ ಇಲಾಖೆಯ ಲೆಕ್ಕ ಸೇರಬೇಕು. ಆದರೆ, ಪ್ರತಿ ತಿಂಗಳೂ ಇಲ್ಲಿ ಕಾಣಿಕೆ ಹುಂಡಿಯನ್ನು ಒಡೆದು ಬಕೆಟ್ಟುಗಳಲ್ಲಿ ದುಡ್ಡು ತುಂಬಿ ಯಾರಿಗೂ ಕಾಣದಂತೆ ಅದರ ಮೇಲೆ ಚಿತ್ರಾನ್ನ ತುಂಬಿದ ಬಾಳೆಎಲೆಯನ್ನು ಮುಚ್ಚಿ ಮನೆಗೆ ತೆಗೆದುಕೊಂಡು ಹೋಗುವ ಇಲ್ಲಿನ ಪುರೋಹಿತರು ಸುಬ್ರಹ್ಮಣ್ಯನ ಪ್ರಸಾದವನ್ನು ಮನೆಗೆ ಒಯ್ಯುತ್ತಿರುವುದಾಗಿ ಸುಳ್ಳು ಸುತ್ತುತ್ತಾರೆ.

ಇನ್ನು ಹಿಟ್ಟಿನಲ್ಲಿ ಪ್ರಾಣಿಯೊಂದರ ಆಕೃತಿಯನ್ನು ಮಾಡಿ ದೇವರಿಗೆ ಬಲಿನೀಡುವ 'ಆಶ್ಲೇಷ ಬಲಿ'ಗಂತು ಭಕ್ತರಿಂದ ಲಕ್ಷಾಂತರ ಹಣ ಸುಲಿಗೆ ಮಾಡಲಾಗುತ್ತೆ. ಈ ವೇಳೆ ಏನಿಲ್ಲವೆಂದರು ಎರಡರಿಂದ ಎರಡೂವರೆ ಸಾವಿರ ಭಕ್ತಾದಿಗಳು ಸೇರುತ್ತಾರೆ. ಪ್ರತಿಯೊಬ್ಬರಿಂದ 500 ರುಪಾಯಿಗಳನ್ನು ಸುಲಿಯಲಾಗುತ್ತದೆ ಅಂದರೆ ಆಶ್ಲೇಷ ಬಲಿ ನಡೆಯುವ ಒಂದೇ ದಿನದಲ್ಲಿ ಲಕ್ಷಾಂತರ ರುಪಾಯಿಗಳ ಹಣ ಹರಿದಾಡುತ್ತದೆ. ಈ ಹಣ ನೇರವಾಗಿ ಅರ್ಚಕರಿಗೇ ಸಂದಾಯವಾಗುತ್ತದೆ. ಇದರಲ್ಲಿ ಆಡಳಿತ ಮಂಡಲಿಯಾಗಲಿ, ಮುಜರಾಯಿ ಇಲಾಖೆಯಾಗಲಿ ಮಧ್ಯೆ ಬರುವುದಿಲ್ಲ, ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳಲ್ಲಿ ಇಂತಿಷ್ಟೇ ಪೂಜೆ ಮತ್ತು ಇಂತಿಂಥವೇ ಪೂಜೆ ನಡೆಯಬೇಕು ಎಂಬ ಸರ್ಕಾರಿ ನಿಯಮಗಳಿವೆ. ಅವೆಲ್ಲವನ್ನೂ ಗಾಳಿಗೆ ತೂರಿರುವ ಘಾಟಿ ಸುಬ್ರಹ್ಮಣ್ಯ ದೇವಸ್ಥಾನ ಮಂಡಲಿ ಮತ್ತು ಇಲ್ಲಿನ ಅರ್ಚಕರು ಸರ್ಕಾರಿ ನಿಯಮಗಳನ್ನೂ ಉಲ್ಲಂಘಿಸುತ್ತಿದ್ದಾರೆ.

ಈ ಘಾಟಿ ಸುಬ್ರಹ್ಮಣ್ಯದ ದೇವಸ್ಥಾನಕ್ಕೆ ಸುಮಾರು 60 ವರ್ಷಗಳ ಬೃಹತ್ ಇತಿಹಾಸವಿದೆ. ಇತಿಹಾಸವನ್ನು ಕೊಂಚ ಕೆದಕಿದಾಗ ಇಲ್ಲಿ ಮೊದಲು ಪೂಜೆ ಆರಂಭಿಸಿದ್ದು ನಾಗ ಜನಾಂಗದವರು ಎಂಬುದು ತಿಳಿದುಬರುತ್ತೆ, ಮೂಲತಃ ರೈತಾಪಿ ಜನವರ್ಗವಾಗಿದ್ದ ನಾಗರು, ತಮ್ಮ ಜಮೀನುಗಳಲ್ಲಿನ ಬೆಳೆಯನ್ನು ಹಾನಿಮಾಡಲು ದಾವಳಿಯಿಡುತ್ತಿದ್ದ ಇಲಿ-ಹೆಗ್ಗಣಗಳನ್ನು ತಹ ಬಂದಿಗೆ ತರುತ್ತಿದ್ದ ನಾಗರಹಾವುಗಳಿಗೆ ಕೃತಜ್ಞತಾ ಪೂರ್ವಕವಾಗಿ ಇಲ್ಲಿ ಪೂಜೆ ಸಲ್ಲಿಸುತ್ತಿದ್ದರು. ಅವರ ಈ ಪುರಾತನ ನಂಬಿಕೆಗಳಿಗನುಸಾರವಾಗಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪೂಜೆ ನಡೆಯುತ್ತಿದ್ದವು. ಮೂಲದಲ್ಲಿ ಇಲ್ಲಿದ್ದದ್ದು ಸುಬ್ರಹ್ಮಣ್ಯ ದೇವರು ಮಾತ್ರ. ಕಾಲಕ್ರಮೇಣ, ಸುಬ್ರಹ್ಮಣ್ಯನ ದೇವಸ್ಥಾನದಲ್ಲಿ ನರಸಿಂಹಸ್ವಾಮಿಯೂ ಪ್ರತಿಷ್ಠಾಪಿಸಲ್ಪಟ್ಟು, ನಂತರ ಅದು ವೈದಿಕ ಪುರೋಹಿತರ ಪೂಜಾಸೇವೆ(?)ಗಳಿಗೆ ತೆರೆದುಕೊಂಡಿತು. ಆಮೇಲೆ ಇಲ್ಲಿ ಪುರೋಹಿತರ ಮಂತ್ರಘೋಷಗಳದ್ದೇ ಕಾರುಬಾರು ಶುರುವಾಯಿತು. ತನ್ನ ನೆಲದ ಒಕ್ಕಲಾಗಿದ್ದ ನಾಗ ಜನರಿಂದ ಪೂಜಿಸಲ್ಪಡುತ್ತಿದ್ದ ನಾಗರಗಳು ಸಂಸ್ಕೃತದ ಶ್ಲೋಕಗಳನ್ನು ಅರಗಿಸಿಕೊಳ್ಳಲಾಗದೆ ಘಾಟಿ ಸುಬ್ರಹ್ಮಣ್ಯದ ಕಡೆ ಸುಳಿದಾಡುವುದನ್ನೇ ನಿಲ್ಲಿಸಿರಲಿಕ್ಕೂ ಸಾಕು. ಆದರೆ ದೈವದ ಹೆಸರಲ್ಲಿ ಅರ್ಚಕರುಗಳ ಸುಲಿಗೆ ಮಾತ್ರ ನಿಂತೇ ಇಲ್ಲ.

ಈ ಕುರಿತು ಸಚಿವ ಕೋಟಾ ಶ್ರೀನಿವಾಸ್ ಪೂಜಾರಿಯನ್ನು ತಡಕಿ ಕೇಳಿದರೆ ಸಿಗುವುದು ಬರೀ ಹಾರಿಕೆಯ ಉತ್ತರಗಳು. ಇಲಾಖೆಯ ಅಧಿಕಾರಿಗಳಿಗೆ ತನಿಖೆ ಮಾಡುವಂತೆ ಸೂಚಿಸಿದ್ದೇನೆ, ವರದಿ ಬರಲಿ, ಶಿಕ್ಷೆಯ ಬಗ್ಗೆ ತೀರ್ಮಾನ ಮಾಡ್ತೀನಿ, ಜನರ ಮುಗ್ಧತೆಯೊಂದಿಗೆ ವ್ಯಾಪಾರ ನಡೆಸಿದ ವರನ್ನು ಕ್ಷಮಿಸಲಿಕ್ಕಾಗುವುದಿಲ್ಲ ಎಂದು ಹೇಳಿದ್ದು ಬಿಟ್ಟರೆ ಈ ಕುರಿತು ತನಿಖೆಯೂ ಇಲ್ಲ, ವರದಿಯೂ ಇಲ್ಲ, ಇನ್ನು ಶಿಕ್ಷೆಯ ಮಾತೆಲ್ಲಿ, ಕಾಂಕ್ರೀಟ್ ಹುತ್ತದ ವ್ಯೂಹ ಎಲ್ಲೆಲ್ಲಿ ಲಿಂಕ್ ಹೊಂದಿದೆ ಎನ್ನುವುದನ್ನು ಸಾಕ್ಷೀಕರಿಸಲು ಇದಿಷ್ಟು ಹಾರಿಕೆಯ ಉತ್ತರಗಳು ಸಾಕು.



ಕೇಳಿದವರು ನಿಕಾಲಿ ಆಗ್ತಾ

ಘಾಟಿ ಸುಬ್ರಹ್ಮಣ್ಯದ ಅರ್ಚಕರ ಅವ್ಯವಹಾ ಒಂದಷ್ಟು ಜನ ಪ್ರಶ್ನಿಸಿದ್ದೂ ಉಂಟು. ಆದರೆ ಅ ಸಂಶಯದಲ್ಲೇ ಕೊನೆಯಾಗಿ ಹೋಗಿದ್ದಾರೆ. ಮೋಸ ಕಣ್ಣಾರೆ ಕಂಡು ನೇರವಾಗಿ ಪ್ರಶ್ನಿಸಿದ್ದ ಇಲ್ಲಿನ ಗ್ರಾಮಲೆಕ್ಕಾಧಿಕಾರಿಯೊಬ್ಬ ಕೆಲದಿನಗಳ ನಂತರ ಕೆರೆ ಹೆಣವಾಗಿ ಹೋದ. ಯಾವುದೋ ವೈಯಕ್ತಿಕ ಕಾರಣ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಗಾಳಿಸುದ್ದಿ ಹಬ್ಬಿಸಿ ಆತನನ್ನು ದಫನು ಮಾಡಲಾಯ ಆದರೆ, ಕ್ಷೇತ್ರದ ಜನರಿಗೆ ಈಗಲೂ ಘಾಟಿ ಸುಬ್ರಹ್ಮ ಅರ್ಚಕರ ಮೇಲೆಯೇ ಅನುಮಾನ. ಈ ಎಲ್ಲಾ ವಿಷಯ ತಿಳಿದಿದ್ದ ಸ್ಥಳೀಯ ರೌಡಿ ಚಂಗಪ್ಪ ಬೋವಿ ದೇವಸ್ ಅರ್ಚಕರನ್ನು ಬೆದರಿಸಿ ತನ್ನ ಸುಲಿಗೆಗೆ ದಾರಿಯೊಂ ಮಾಡಿಕೊಂಡಿದ್ದ. ಕಾಲಕ್ರಮೇಣ ಅವನೂ ಅ ಮರಣಕ್ಕೆ ಗುರಿಯಾದ. ಹುಡುಗಿಯರ ಶೋಕಿಯಿದ್ದ ಯಾವುದೋ ಹುಡುಗಿಯ ಕಾರಣಕ್ಕೆ ಕೊಲೆಯಾದನ ವದಂತಿ ಹರಿಬಿಟ್ಟು ಪ್ರಕರಣವನ್ನು ಮುಚ್ಚಿಹಾಕಲಾಯ

ಸದ್ಯ ರಮೇಶ್ ಸಂಕ್ರಾಂತಿ ಎನ್ನುವ ಪ್ರಜ್ಞಾವಂತರೊ ಕಾಂಕ್ರೀಟ್ ಅರ್ಚಕರುಗಳಿಗೆ ತಲೆನೋ ಪರಿಣಮಿಸಿದ್ದಾರೆ. ಅವರೇ ಈ ಕಾಂಕ್ರೀಟ್‌ಗಳ ವೃತ್ತಾಂತ ಸಾಕ್ಷಿ ಸಮೇತ ಸಾಬೀತುಮಾಡಿದ್ದು. ಅವರ ಮೇಲೆ ಒಂದೆರಡು ಹಲ್ಲೆಗಳು ನಡೆದಿವೆ. ಪ್ರಾಣದ ಬೆದರಿಕೆಯ ಇದ್ದೇ ಇದೆ. ಆದರೆ ಯಾವುದಕ್ಕೂ ಜಗ್ಗದ ರಮ ವಂಚನೆಯನ್ನು ಬಯಲು ಮಾಡುತ್ತಿದ್ದಂತೆ ಅ ಕಡೆಯಿಂದ ಒಂದು 'ಡೀಲ್'ಗೆ ಆಹ್ವಾನವೂ ಬಂ ಅದಕ್ಕೂ ಅವರು ಒಪ್ಪಲಿಲ್ಲ, ಹಾಗಾಗಿ ಅವರಿಗೆ ಬೆದರಿ ಮುಂದುವರೆಯುತ್ತಲೇ ಇವೆ.

ಒಟ್ಟಿನಲ್ಲಿ ಅರ್ಚಕರ ಅನ್ಯಾಯವನ್ನು ಪ್ರಶ್ನಿಸಿದ ಉಳಿಗಾಲ ಇಲ್ಲ ಎನ್ನುವುದಂತೂ ಸತ್ಯ. ತಮ್ಮ ತ ಬಂದವರಿಗೆ ಸಾಕ್ಷಾತ್ ನಾಗಪ್ಪನೇ ಈ ರೀತಿ ಕೊಡುತ್ತಿದ್ದಾನೆ ಎಂದು ಪುಕಾರೆಬ್ಬಿಸಿ ತಮ್ಮ ಟಿ.ಆ ಹೆಚ್ಚಿಸಿಕೊಂಡರೂ ಆಶ್ಚರ್ಯಪಡಬೇಕಿಲ್ಲ, ಏಕೆಂದರೆ ನಂ ನಮ್ಮ 'ಮುಗ್ಧ' (!?) ಜನರಿದ್ದಾರಲ್ಲ.

ಅಂದಹಾಗೆ ಸಂಜೆಯ ಒಳಗೆ ಶಿಕ್ಷೆ ಪ್ರಕಟಿಸಿಬಿಡ್ತೇನೆ ಎ ಪೂಜಾರಿ ಗಂಟೆ ಬಾರಿಸಿ ಇಲ್ಲಿಗೆ ತಿಂಗಳು ಉರುಳಿ ಹೊಸ ಬೆಳವಣಿಗೆಗಳೇ ಕಾಣಿಸುತ್ತಿಲ್ಲ, ಬದಲಾಗಿ ದೋಷ ಪರಿಹಾರ ಪೂಜೆಗಳು ಭರ್ಜರಿಯಾಗಿ ಮುಂದ ಯುತ್ತಲೇ ಇವೆ. ಪ್ರತ್ಯಕ್ಷವಾಗಿ ಕಂಡರೂ ಮತ್ತೆ ಹೋಗಿ ಹಾಳುಬಾವಿಗೆ ಬೀಳುವ ಜನ ಇರುವವ ನಂಬಿಕೆ, ಭಕ್ತಿ ದೈವಗಳೆಲ್ಲ ಬಜಾರಲ್ಲಿ ಏರ್ಬಾಗು ಇರುತ್ತವೆ.

ಘಾಟಿ ಸುಬ್ರಹ್ಮಣ್ಯದ ಸಿಮೆಂಟ್ ಹುತ್ತದ ಮೇ ಇದು ಸತ್ಯ!

ಲೈಫ್ ಆಫ್ ಪೈ

9 ←

ಹಾಗಂತ ಅದು ಮೃಗಾಲಯವಲ್ಲವಲ್ಲ, ಒಂದು ಹಂತಕ್ಕೆ ಹುಲಿ ಪೈನ ಆಣತಿಗೆ ಬಗ್ಗುತ್ತದೆಯಾದರೂ ಅದರಿಂದ ಹೆಚ್ಚು ಲಾಭವಿಲ್ಲ ಎಂಬುದು ಆತನಿಗೇ ಗೊತ್ತಾಗುತ್ತದೆ.

ಇದೆಲ್ಲಕ್ಕೂ ಮಿಗಿಲಾಗಿ ಪೈನ ಹಸಿವು ಉಲ್ಬಣಿಸುತ್ತದೆ. ಶುದ್ಧ ಸಸ್ಯಾಹಾರಿ. ಜಾತಿಯಲ್ಲಿ ಬ್ರಾಹ್ಮಣ. ಬದುಕುಳಿಯಲೇಬೇಕೆಂದರೆ ಮೀನನ್ನು ತಿನ್ನದೆ ವಿಧಿಯೇ ಇಲ್ಲ. ಹಿಡಿದ ಮೀನಿನ ಹಸಿಹಸಿ ರಕ್ತಸಿಕ್ತ ಖಂಡಗಳನ್ನು ಕಚ್ಚಿ ಕಚ್ಚಿ ತಿನ್ನುತ್ತಾನೆ. ಭಯಾನಕ ಹುಲಿಯೊಡನೆಯೇ ಸೆಣಸಾಟಕ್ಕೆ ಅಣಿಯಾಗುತ್ತಾನೆ. ಸಾಗರದೊಳಕ್ಕೇ ಹಾರಿ ಈಜಲಾರಂಭಿಸುತ್ತಾನೆ. ಭೀಕರ ಬಿರುಗಾಳಿಗೆ ಎದೆಯೊಡ್ಡುತ್ತಾನೆ. ರಕ್ಕಸ ಅಲೆಗಳ ಗರ್ಭಕ್ಕೇ ನುಗ್ಗುತ್ತಾನೆ, ಗುಡುಗು-ಸಿಡಿಲನ್ನು ಲೆಕ್ಕಿಸದೇ ಎದೆತಟ್ಟಿ ನಿಲ್ಲುತ್ತಾನೆ. ಅಳಿವುಉಳಿವಿನ ಪ್ರಶ್ನೆಯೆಂಬುದು ಆತನೊಳಗಿನ ಪುಕ್ಕಲನನ್ನು ನಾಮಾವಶೇಷ ಮಾಡಿ ಮೃಗೀಯ ಒರಟನನ್ನಾಗಿ ರೂಪಿಸುತ್ತದೆ. ಮಳೆ ನೀರನ್ನು ಹಿಡಿದು ತಾನೂ ಕುಡಿದು ಹುಲಿಗೂ ಕುಡಿಸುತ್ತಾನೆ.

ಎಣೆಯಿಲ್ಲದೆ ಆವರಿಸುವ ಹಸಿವು. ಎದೆ ನಡುಗಿಸುವ ಸಾಗರ. ತೀರದ ಬಾಯಾರಿಕೆ. ಕ್ಷಣಾಕ್ಷಣಕ್ಕೂ ಎದುರಾಗುವ ವಿಪತ್ತು, ಹೀಗಿರುವಾಗಲೇ ಮತ್ತೊಂದು ಸುಂಟರಗಾಳಿಗೆ ಸಿಲುಕುವ ದೋಣಿ ಸಾಗರ ಮಧ್ಯೆ ತರಗೆಲೆಯಂತೆ ಅಲೆಗಳಿಗಪ್ಪಳಿಸುತ್ತದೆ. ಇಂಥ ಸುದೀರ್ಘ, ಭೀಕರ ಆಘಾತಗಳ ಮೇಲೆ ಆಘಾತದ ಸಂಘರ್ಷದ ಮಧ್ಯೆ ಹುಲಿಯೂ ಭೀತಿಗೆ ಬೀಳುತ್ತದೆ. ಪೈ ಎಂಬ ಮನುಷ್ಯ ಉಳಿದರೇನೇ ತಾನೂ ಉಳಿಯಲು ಸಾಧ್ಯ ಎಂಬುದು ಆದರದೇ ಧಾಟಿಯಲ್ಲಿ ಅರ್ಥವಾಗುತ್ತದೆ. ಪೈನ ಆಣತಿಗೆ ತಲೆದೂಗಲಾರಂಭಿಸುತ್ತದೆ. ಆತ ಸೀಟಿ ಊದುತ್ತಿದ್ದಂತೆ ದೋಣಿಯ ಪೊಟರೆಯಿಂದಾಚೆಗೆ ತಲೆಹಾಕುತ್ತದೆ.. ಸುಂಟರಗಾಳಿಗೆ ಸಿಲುಕಿದ ದೋಣಿಯೊಳಕ್ಕೆ ದಿನಗಟ್ಟಲೇ ಮೀನು ಸಿಗದೆ ಹಸಿದು ನಿತ್ರಾಣರಾದ ಹುಲಿ ಮತ್ತು ಹುಡುಗನ ಮಧ್ಯೆ ನೈಸರ್ಗಿಕ ಕಟ್ಟುಪಾಡುಗಳನ್ನೂ ಮೀರಿದ ಆತ್ಮೀಯತೆ ಆವರಿಸುತ್ತದೆ.

ಇನ್ನೇನು ಹೊಟ್ಟೆಗಿಲ್ಲದೆ ತಲೆಸುತ್ತು ಬಂದು ಪ್ರಜ್ಞೆ ತಪ್ಪಬೇಕೆನ್ನುವ ಕ್ಷಣದಲ್ಲೂ ತನ್ನನ್ನು ತಿನ್ನದೇ ಕುಸಿದು ಬೀಳುವ ಹುಲಿಯ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಪೈ ನೇವರಿಸುತ್ತಾನೆ. ತನ್ನ ಪ್ರಾಣ ಉಳಿಸಿದ ಹುಲಿಯನ್ನು ಅಪ್ಪಿಕೊಂಡು ಕಣ್ಣೀರಿಡುವ ಪೈ ಮತ್ತು ಸಾವಿನ ಕೊನೆ ಕ್ಷಣದಲ್ಲೂ ನಿಯತ್ತಿನಲ್ಲೇ ನರಳುವ ಹುಲಿಯ ಸನ್ನಿವೇಶ ಎಂಥವರಿಗೂ ಕಣ್ಣೀರು ಭರಿಸುತ್ತದೆ. ಲೈಫ್ ಆಫ್ ಪೈ ಚಿತ್ರ ಗೆಲ್ಲುವುದೇ ಈ ಸನ್ನಿವೇಶದಿಂದ. ಇನ್ನೇನು ಹಸಿವಿಗೆ ಬಿದ್ದು ಹುಲಿ ಮತ್ತು ಪೈ ಇಬ್ಬರೂ ಸಾವಿನಂಚಿಗೆ ಬೀಳುವಷ್ಟರಲ್ಲೇ ತೇಲುವ ದ್ವೀಪವೊಂದು ಎದುರಾಗುತ್ತದೆ. ಅಲ್ಲಿ ಪೈ ಎಂಥದೋ ಗೆಡ್ಡೆ ಗೆಣಸು ಬೇರೆನ್ನದೇ ತಿಂದು ಜೀವ ಉಳಿಸಿಕೊಂಡರೆ ಹುಲಿ ಅಲ್ಲಿದ್ದ ದೈತ್ಯ ಅಳಿಲುಗಳನ್ನು ತಿನ್ನುತ್ತದೆ.

ಅಲ್ಲಿಗೆ ಹುಲಿ ರಿಚರ್ಡ್ ಪಾರ್ಕರ್‌ಗೆ ಮನುಷ್ಯತ್ವ ಅರ್ಥವಾಗಿರುತ್ತದೆ. ನಾಗರಿಕ ಮಾನವನಿಗೆ ನಾಯಿ ಪಳಗಿದಂತೆ ಪೈಗೆ ಹುಲಿ ಒಗ್ಗಿಹೋಗುತ್ತದೆ. ಆದರೆ ನಿರ್ಮಾನುಷ ತೇಲುವ ದ್ವೀಪದಲ್ಲಿ ಹೆಚ್ಚು ದಿನ ಇರುವಂತಿಲ್ಲ. ಅದೊಂದು ವಿಚಿತ್ರ ದ್ವೀಪ. ಹಗಲು ಹೊತ್ತು ಸಿಹಿನೀರಿನಿಂದ ಕಂಗೊಳಿಸುವ ಅದರ ಕೊಳದ ನೀರು ರಾತ್ರಿಯಾಗುತ್ತಿದ್ದಂತೆ ಆಮ್ಲವಾಗಿ ಬದಲಾಗುತ್ತದೆ.

ಆ ತೇಲು ದ್ವೀಪದಿಂದ ಅದೇ ದೋಣಿಯಲ್ಲಿ ಕೂತು ಮತ್ತೆ ಪ್ರಯಾಣ ಬೆಳೆಸುವ ಪೈ ಮತ್ತು ಹುಲಿ ಮೆಕ್ಸಿಕನ್ ಕೊಲ್ಲಿಯ ದಡ ತಲುಪುವ ಹೊತ್ತಿಗೆ 227 ದಿನಗಳಾಗಿರುತ್ತದೆ. ನೀರು ಆಹಾರವಿಲ್ಲದೆ ಹುಲಿ ಮೂಳೆ ಚಕ್ಕಳವಾದರೆ ಪೈ ನಿತ್ರಾಣಗೊಂಡು ದಡಕ್ಕೆ ತಲೆ ತಿರುಗಿಬೀಳುತ್ತಾನೆ. ಇನ್ನೇನು ಸಮುದ್ರ ದಡದ ಜನ ಪೈಯನ್ನು ರಕ್ಷಿಸಲು ಧಾವಿಸಬೇಕು. ಅಷ್ಟರಲ್ಲೇ ಹುಲಿ ನಿಶಕ್ತ ಹೆಜ್ಜೆಗಳನ್ನಿಡುತ್ತಾ ದಡದಂಚಿನ ಕಾಡಿನತ್ತ ಚಲಿಸುತ್ತದೆ. ಇಷ್ಟು ದಿನಗಳ ಕಾಲ ಒಂದೇ ದೋಣಿಯಲ್ಲಿ ಅಂಥಾ ರಣ ಹಸಿವಿನಲ್ಲೂ ತನ್ನ ಪ್ರಾಣ ಉಳಿಸಿದ, ತಾನು ಮುದ್ದಾಡಿ ತಲೆ ನೇವರಿಸಿದ ಹುಲಿ ಕೊನೆಯದೊಂದು ವಿದಾಯವನ್ನೂ ಹೇಳದೆ, ಕಟ್ಟ ಕಡೆಗೊಮ್ಮೆ ತನ್ನ ಮುಖವನ್ನೂ ನೋಡದೆ, ಮನುಷ್ಯನ ಯಾವ ಋಣಕ್ಕೂ, ತನಗೂ ಸಂಬಂಧವೇ ಇಲ್ಲದಂತೆ ಕಾಡಿನ ಪ್ರದೇಶದೊಳಕ್ಕೆ ನಿರ್ಭಾವುಕವಾಗಿ ನಡೆದು ಹೋಗುವುದನ್ನು ಕಂಡು ಪೈ ಭಾವಪರವಶನಾಗು ಕಣ್ಣೀರಿಡುತ್ತಾನೆ. ಗೋಳಾಡುತ್ತಾನೆ.

ಮನುಷ್ಯ ಮನುಷ್ಯನೇ, ಹುಲಿ ಎಷ್ಟೆಂದರೂ ಮೃ

ಆಸ್ಪತ್ರೆಯ ಹಾಸಿಗೆಯಲ್ಲಿ ಚೇತರಿಸಿಕೊಳ್ಳುವ ಪೈ ಮುಳುಗಿದ ಜಪಾನಿ ಹಡಗಿನ ಇನ್ಶೂರೆನ್ಸ್ ಅಧಿಕಾರಿ ಬಂದು ದುರಂತದ ವಿವರ ಕೇಳುತ್ತಾರೆ. ಆದರೆ ದೋಣಿಯಲ್ಲಿ ತಾನು ಮತ್ತು ಹುಲಿ 227 ದಿ ಕಾಲ ಸಾಗಿಬಂದ ಕತೆಯನ್ನು ಪೈ ಹೇಳುತ್ತಿದ್ದರೆ ಅ ಯಾರೊಬ್ಬರೂ ನಂಬುವುದಿಲ್ಲ!

ಇದು ಲೈಫ್ ಆಫ್ ಪೈ ಚಿತ್ರದ ತಿರುಳು. ರಿ ಪಾರ್ಕರ್ ಎಂಬ ಹುಲಿಯೇ ಈ ಚಿತ್ರದ ಹೀ ಭೀಕರ ಸಾಗರದ ಮಧ್ಯೆ ಕಿತ್ತು ತಿನ್ನುವ ಹಸಿವೆ ಮರೆತು ಮನುಷ್ಯ ಸಂಬಂಧಕ್ಕೆ ಕಟ್ಟು ಬೀಳುವ ಹು ಪರಿಸ್ಥಿತಿ ಸಹಜ ಪರಿವರ್ತನೆಯೆಂಬುದು ಬಾಲಕ ಪಾಲಿಗೆ ಧರ್ಮ, ದೇವರ ಅಸ್ತಿತ್ವದ ಪ್ರಶ್ನೆಗೆ ಹೊ ಅರ್ಥವೊಂದನ್ನು ಕಲ್ಪಿಸುತ್ತದೆ. ಮನುಷ್ಯ ಮತ್ತು ವನ್ಯಮ ನಡುವಿನ ಸಂಘರ್ಷ ತಾರಕಕ್ಕೇರಿರುವ ಈ ಕಾ 'ಲೈಫ್ ಆಫ್ ಪೈ' ಮನುಷ್ಯತ್ವದ ಅಗಾಧತೆ ಹೊಣೆಗಾರಿಕೆಗೆ ಹಸಿವಿನ ಆಧ್ಯಾತ್ಮದ ದಿಕ್ಕು ತೋರಿಸ

ಕನ್ನಡ ಜನತೆ ತಮ್ಮ ಮಾನಸಿಕ ಸ್ವಾಸ್ಥ್ಯಕ್ಕಾದರೂ ನೋಡಲೇಬೇಕಾದ ಚಿತ್ರವಿದು.

■ ರಾ.ಸೋಮನಾ

...ರ್ಕಾರ ಕಡೆಗೊ ಸುಚ್ಚು ಎಡೂರಪ್ಪನತಾವುಲೆ ಅದಂತೆ!

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ನಿಜವಾಗ್ಲು ಇನ್ನು ಮ್ಯಾಲೆ ಸಭೆ ಮಾಡೋರು ...ರೇಲಿ ಮಾಡಬೇಕು ದೊಡಪ್ಪ" ಎಂದುಕೊಂಡು ...ಕ್ಕೆ ಬಂದ.

"ಆದ್ಯಾಕ್ ಮಾಡಬೇಕಪ್ಪಾ?"

"ಕರ್ನಾಟಕದ ಸೆಂಟ್ರು ಪ್ಲೇಸು ಅಂದ್ರೆ ಅದೆಯ. ಆ ...ದ ಬೀದರ್ ಜನ, ಈ ಕಡಿಂದ ಚಾಮರಾಜನಗರದ ...ಸಲೀಸಾಗಿ ಬರಬವುದು, ಅಂಥ ಜಾಗ ದೊಡಪ್ಪ"

"ಆ ಕಡೆ ಬ್ಯಳೆಯೆಲ್ಲ ಚನ್ನಾಗಿತ್ತೆ?"

"ನೀನು ಎಲ್ಲಿಂದ ಎಲ್ಲಿಗಂಟ್ಯಾರ ನೋಡು, ವಲ ಅದೂ ಬ್ಯಳದಿರೊ ವಲ ದೊಡಪ್ಪ"

"ಏನು ಬ್ಯಳದಿದ್ವರೂ?"

"ಹತ್ತಿ, ಕಡ್ಲೆ, ಜ್ವಾಳ, ಸೂರ್ಯಕಾಂತಿ, ಹೆಸರು, ತೊಗರಿ, ರಾಗಿ ಬುಟ್ಟು ಇನ್ನೆಲ್ಲಾನು ಬ್ಯಳದವ್ರುರೆ ದೊಡಪ್ಪ, ...ನು ಮಾಡಿ ಬಾಡಲಕ್ಕು."

"ಅದೇನು ಸರಿಯಾಗೇಳ್ಳ."

"ಬೆಳೆ ಕಾಳಗಟ್ಟೊ ಟೈಮಲ್ಲಿ ಒಂದದ ಮಳೆ ಬೇಕಿತ್ತು."

"ಅಂಗರಲ್ಲಿಗೂ ಬರಗಾಲ ಬತ್ತದೆ ಅನ್ನು."

"ಬರಗಾಲ ಇಡೀ ಕರ್ನಾಟಕಕ್ಕೇ ಬತ್ತಾ ದೊಡಪ್ಪ, ಮನಿಗೆ ನುಗ್ಗಿ ಮಾಡಿರೊ ಮುದ್ದೆ ಹೊತಗಂಡೋಯ್ತರೆ."

"ಅಂತ ಬರಗಾಲ ಬಂದತೇನ್ನ?" ...ಳು ಜುಮ್ಮಿ.

"ಊ ಕಣಕ್ಕ, ನಮಿಗೆ ಬೆಳೆ ಆಗದಿದ್ರೂ ...ಗಿಲ್ಲ, ಪಕ್ಕದೂರಿಗೆ ಆಗ್ಲಿ ಅನ್ನಂಗಿಲ್ಲ, ...ವರ್ಷ ಇಡೀ ಕರ್ನಾಟಕದಲ್ಲಿ ಬೆಳೆ ...ಲ್ಲ."

"ಆಗೊಂದು ಸತಿ ಬರಗಾಲ್ದಲ್ಲಿ ...ಗಾಂಧಿ ಅಮೆರಿಕದ ಹಲ್ಲು ಜ್ವಾಳ ...ಸೊಸೆಟ್ಟಿ ಮುಖಾಂತರ ಹಂಚಿದ್ಲು, ...ಸೊಸೆ ಸೋನಿಯಾ ಗಾಂಧಿ ಅದೇನು ...ದ ಹಂಚ್ತತಳೊ ನೋಡನ್ನಿರು" ಎಂದ

"ಆ ಕಾಲಬ್ಯಾರೆ, ಈ ಕಾಲ ಬ್ಯಾರೆ ಚಿಗಪ್ಪ ...ಅನ್ನನೆ ಉಣ್ಣುಸ್ತಳೆ ಹೆದರಬ್ಯಾಡ."

"ಸಣ್ಣಕ್ಕಿ ಅನ್ನಕೋದೆ, ರಾಗಿ ರೇಟ ...ಲಾ? ಈಗ್ಲೆ ಇಪ್ಪತ್ತೈದು ರುಪಾಯಿಗೆ ಅಂದ್ರೆ ಮುಂದೇಟಾಗಬವ್ರುದು ಲ್ಯಕ್ಕ ಹಾಕು."

"ಲ್ಯಕ್ಕ ಹಾಕದೇನು. ಏಟು ರೂಪಾಯಾದ್ರು ತಂದು ...ಕು. ಜೀವ ಉಳಿಸಿಗಳ್ಳಬೇಕು. ಆದ್ರೆ ಮುಂದಿನ ...ಲ ಕೆಲುವ್ರುರಿಗೆ ತಾಗದಿಲ್ಲ."

"ಅದ್ಯಾರಿಗಪ್ಪ?"

"ಯಾರಿಗಪ್ಪಾ ಅಂದ್ರೆ ಮೊದಲ್ನೆದಾಗಿ ಆರೆಸ್ಸಿಸಿನೋರಿಗೆ."

"ಯಾಕವ್ರುರೇನು ದಿನಸಿ ದಾಸ್ತಾನು ಮಾಡಿದ್ದರೇನೊ" ...ರ ಉಗ್ರಿ.

"ಇಲ್ಲ ಕಣೊ ಉಗ್ರಿ, ನಮ್ಮ ಲಾರಿ ಓನರ್ ಹೇಳೊ ಪ್ರಕಾರ ಸಾವ್ರುರಾರು ಕೋಟಿನೆ ದೋಚಗಂಡಿದ್ವರಂತೆ."


"ಲಾರಿ ಓನರ್ ಯಾರೊ?"

"ವಿ.ಆರ್.ಎಲ್. ಲಾರಿ ಮಾಲೀಕ ವಿಜಯ ಶಂಕ್ರ ಕಣೊ. ಅವುನು ಒಳ್ಳೆ ವ್ಯವಹಾರಸ್ಥ, ಯಾರ್ಯಾರು ದುಡ್ಡು ಮಾಡ್ತರೆ ಅಂತ ಪತ್ತೆ ಹಚ್ಚತನೆ. ಅವುನು ಹೇಳೊ ಪ್ರಕಾರ, ಮುಂದೆಂದೂ ಚೆಡ್ಡಿಗಳಿಗೆ ಬರಗಾಲ ಅನ್ನದೆಯಿಲ್ಲ, ಆಮ್ಯಾಲೆ ಅವರ ಪಾರ್ಟಿ ಜನಕೆ ಬರಗಾಲ ಅನ್ನದಿಲ್ಲ, ಅವುರಾದಮ್ಯಾಲೆ ಜೆಡಿಎಸ್ನೋರಿಗೆ ಬರಗಾಲ ತಟ್ಟದಿಲ್ಲ, ಕಾಂಗ್ರೆಸ್ಸಿನವುರಂತೂ ಕಾಲಾದಿಂದ ಸುಖವಾಗ್ಯವುರೆ. ರಾಮುಲು ಪಾರ್ಟಿಲೂ ರೊಕ್ಕದ ಚಿಂತಿಲ್ಲಾ. ಇನ್ನ ಈ ಸರ್ಕಾರದಲ್ಲಿರೊ ಅಧಿಕಾರಿಗಳು, ಸರ್ಕಾರಿ ಜನಕೂ ಬರಗಾಲ ತಟ್ಟದಿಲ್ಲ, ಆದ್ರೆ ಸಾಮಾನ್ಯ ಜನಗಳ ಕತೆ ಏನಾಯ್ತದೊ ಏನೊ ಕಣೊ."

"ಹಿಂದೋದ ಬರಗಾಲಕ್ಕಿಂತ ಮುಂದೆ ಬಂದತೆ ಬಿನಾಕ್ಷ" ಎಂದ ಸೀರ.

"ಹಾವೇರಿದೇಳದ ಬುಟ್ಟು ಬರಗಾಲ ಹೇಳ್ತನೆ" ಎಂದಳು ಜುಮ್ಮಿ.

"ಸಾರಿ ಕಣಕ್ಕ ನಿನಿಗೆ ಇಂಟರೆಸ್ಟಾದ ಮೂರು ಕಾಸಿನ ರಾಜಕಾರಣದ ಮ್ಯಾಟರ್ ಬುಟ್ಟು ಏನೇನೊ ಹೇಳ್ತಾಯಿದ್ದಿನಿ.



ಇಂಪಾರ್ಟೆಂಟು ಮ್ಯಾಟ್ರು ಏನಪ್ಪಾ ಅಂದ್ರೆ ನಮ್ಮ ದಂಡುಪಾಳ್ಯದ ಪೂಜಕ್ಕ ಕುಮಾರಸ್ವಾಮಿ ಗ್ಯಾಂಗ್ ಬುಟ್ಟು ಎಡೂರಪ್ಪನ ಟೀಮು ಸೇರಿಕಂಡ್ಲು."

"ಅಂಗರೆ ಪೂಜಾಗಾಂಧಿ ಎಡೂರಪ್ಪನ ಪಾರ್ಟಿ ಸೇರಿದ್ಲ?"

"ಊ ಕಣಕ್ಕ, ಕುಮಾರಣ್ಣ ಅವುಳ ಬಗ್ಗೆ ಹಗುರವಾಗಿ ಮಾತಾಡಿದ. ಸ್ವಾಭಿಮಾನ ಕೆರಳಿತು. ಅದ್ಕೆ ಹೋಗಿ ಎಡೂರಪ್ಪನ ಪಾರ್ಟಿ ಸೇರಿಕಂಡ್ಲು."

"ಸಿನುಮಾದೋರಿಗ್ಯಾವ ಸ್ವಾಭಿಮಾನ ಇರತದೊ? ದುಡೀಸಗಂಡು ಆಕ್ಟಿಂಗ್ ಮಾಡ್ತರೆ. ಅದೇ ತರ ಕುಮಾರಸ್ವಾಮಿ ಪಾರ್ಟಿಗೋಗಿದ್ಲು, ಅವುನು ದುಡ್ಡು ಕೊಟ್ಟದಿನಿ ಅಂತ ಹಗುರವಾಗಿ ಮಾತಾಡಿದ. ಅದೇ ಟೇಮಿಗೆ ಎಡೂರಪ್ಪ ಕಾಯ್ತಾಯಿದ್ದ, ಗಬಕ್ಕಂತ ಹಿಡಕಂಡ" ಎಂದ ಉಗ್ರಿ.

"ಏನೇ ಆಗ್ಲಿ, ಅವುಳು ಒಳ್ಳೆ ಧೈರ್ಯಗಾತಿ ಕಣೊ ಉಗ್ರಿ. ಉತ್ತರ ಭಾರತದಿಂದ ಬಂದು, ಆಗ್ಲೆ ಕನ್ನಡ ಕಲ್ತು, ಪಾರ್ಟಿ ಬದ್ಲಾಸ್ತಳೆ ಅಂದ್ರೆ, ಮೆಚ್ಚಲೇಬೇಕು. ಇಡೀ ಎಡೂರಪ್ಪನ ಸಭೆಲಿ ಅವುಳೊಬ್ಬಳೆ ಚನ್ನಾಗಿ ಕಾಣತಿದ್ಲೊಳು. ಇನ್ಯಾಲ್ಲಾರು ಕಾಡುಪ್ರಾಣಿಗಳ ತರ ಇದ್ರು."

"ಕಾಡುಪ್ರಾಣಿ ತರ ಯಾರಿದ್ರುಲ?"

"ದೊಡ್ಡಣ್ಣ ಕಣಕ್ಕ, ಅವ್ರುನು ಸಿನುಮ ಆಗುಟ್ರು, ಸಿನುಮ ಆಕ್ಟರಾದೋನು ಮದ್ಲು ಬಾಡಿ ಸರಿಯಾಗಿಟಗತ್ತನೆ. ಇವುನೇಟಗಾತ್ರಾಗ್ಯವುನೆ ಅಂದ್ರೆ ಪ್ರೊಡ್ಯುಸರು ಇವುನಿಗೆ ಬಟ್ಟೆ ಹೊಲಸಬೇಕಾದ್ರೆ, ಮೂರು ಮೀಟ್ರು ಅಂಗಿ ಬಟ್ಟೇ ಮಾರು ಮೀಟ್ರು ಪ್ಯಾಂಟು ಬಟ್ಟೆ ತಗೋಬೇಕಂತೆ. ಆಮ್ಯಾಲೆ ಶೂಟಿಂಗಿಗೆ ಬಂದಾಗ ಆಕ್ಟಿಂಗ್ ಮಾಡದು ಬುಟ್ಟು, ಅಡುಗೆ ಏನು, ತರಕಾರಿ ಏನು ತಂದಿದ್ದಿರಿ ಅಂತ ಕೇಳ್ತನಂತೆ. ಇಂಥೋನು ಎಡೂರಪ್ಪನ ಪಾರ್ಟಿಗೆ ಸೂಟಬಲ್ ಪರಸನ್ನು."

"ಅಂಗಂತಿಯಾ?"

"ಊ ಮತ್ತೆ, ಎಡೂರಪ್ಪನ ಪಾರ್ಟಿಲಿ ಏಟಾರ ತಿನ್ನಬವ್ರುದು. ಭೂಮಿ, ಕಾಸು, ವಡವೆ, ವಸ್ತ್ರ ಯಲ್ಲಾನು ತಿನ್ನಬವ್ರುದು. ಅಲ್ಲಿ ಯಾವುದೂ ತಪ್ಪಲ್ಲ, ಎಡೂರಪ್ಪನ ಜೊತೆ ಇದ್ರಾಯ್ತು."

"ಅವುನ್ಯಾವತ್ತೂ ನಂಬಿದೋರ ಕೈಬುಡದಿಲ್ಲ ಕಂಡ್ಯ."

"ನೀನ್ಯಾವಾಗ ನಂಬಿದ್ದೆ ಚಿಗಪ್ಪ?"

"ಜನ ಹೇಳದ ಹೇಳಿದೆ ಕಂಡ್ಯ. ಎಡೂರಪ್ಪ ಯಾರನೂ ಕೈಬುಡದಿಲ್ಲ, ಆದ್ರೆ ದ್ಯಾವೇಗೌಡ ನಡುನೀರಲ್ಲಿ ಕೈಬುಡ್ತನಂತೆ."

"ಅದಳೇ ಮಾತು ಚಿಗಪ್ಪ, ದಡದಲ್ಲಿ ಬುಟ್ರೆ ಈಜಿಕಂಡು ಬತ್ತರೆ. ಅದ್ಕೆ ದ್ಯಾವೇಗೌಡ್ರು ನಡುನೀರಲ್ಲಿ ಕೈಬುಡದು."

"ಈಜು ಬಂದ್ರೆ ಸರಿ. ಈಜು ಬರದೇ ಹೋದ್ರೆ ಕತಿಯೇನೊ?"

"ಈಜು ಬರದೋರ್ಯಲ್ಲ ಮನೆ ಸೇರಿಕಂಡ್ರು ಕಣೊ ಉಗ್ರಿ. ಆದ್ರೆ ನಮ್ಮ ಎಡೂರಪ್ಪನ ನಂಬಿಕೊಂಡು, ರಾಜಕಾರಣ ಮಾಡಿ, ಶಾಸಕರಾಗಿ, ಮಂತ್ರಿಗಳಾಗಿದ್ದ ಬಿಜೆಪಿಗಳ್ಯಲ್ಲ ಗ್ಯಾರಂಟಿ ಮನೆ ಸೇರಿಕತ್ತವೆ. ಯಾಕಂದ್ರೆ ಹಾವೇರಿಲಿ ಸೇರಿದ್ದ ಜನ ನೋಡಿದ್ರೆ ಬಿಜೆಪಿಗಳು ಗಂಟುಮೂಟೆ ಕಟ್ಟದು ವಳ್ಳೆದು."

"ಕಟ್ಟದ್ರು ಅವುರಿಗೇನು ಲಾಸಾಗಿದ್ದತೊ ವಾಟಿಸ್ಸೆ. ಅಧಿಕಾರನೆ ಕಾಣದೆ ಮನೆ ಸೇರಿಕತಿದ್ರು. ಯಂಗೋ ದ್ಯಾವೇಗೌಡ್ರು ಕುಮಾರಣ್ಣ ಮನಸು ಮಾಡಿ ಅವುರಿಗೂ ಅಧಿಕಾರ ಕೊಟ್ರು. ಅವುರು ಆಸ್ತಿ ಮಾಡಿಕಂಡು, ಅಧಿಕಾರ ಅನುಭವುಸಿ, ಸುಖವಾಗಿ ಮನಿಗೋಯ್ತರೆ. ಅವುರಿಗಾದ ಅನ್ಯಾಯೇನು?"

"ದೇವರಾಣೆ ಯಾವ ಅನ್ಯಾಯವ್ರೂ ಆಗಿಲ್ಲ ಕಣೊ ಉಗ್ರಿ. ಅಂಗೆ ನೋಡಿದ್ರೆ ಅನ್ಯಾಯ ಆಗಿದ್ದು ಜನಗಳಿಗೆ ಕಣೊ. ಈ ನಾಕೈದು ವರಸದಲ್ಲಿ ನ್ಯಡಿಬಾರದೆಲ್ಲಾ ನ್ಯಡದೊಯ್ತು, ಆದ್ರು ಬಿಜೆಪಿಗಳು ಏನೂ ಆಗಿಲ್ಲ ಅನ್ನಂಗೆ ಮಾತಾಡ್ತರಲ್ಲ ಹೇಳು. ಆ ಈಶ್ವರಪ್ಪನ್ನೆ ನೋಡು. ಹಾವೇರಿಯ ಕಣ್ಣಾರೆ ಕಂಡು ಬಂದು ಜನ ನಾವಿಲ್ಲದ್ದಿವಿ. ಇವುನು ಹಾವೇರಿ ಸಭೆ ಠುಸ್ಸಾಯ್ತು ಅಂತಾನೆ. ಇದಕೇನೇಳ್ತಿ?"

"ಅವುನಂಗಂತನೆ ಅಂದ್ರೆ ಹೆದ್ರಿಕಂಡವುನೆ ಕಣೊ."

"ದ್ಯಪನೆಟ್ಟ ಹೆದ್ರಿಕಂಡವುನೆ. ಹದುನಾಕು ಜನ ಎಮ್ಮೆಲ್ಲೆಗಳು ಹಾವೇರಿ ಸಭೆಗೆ ಹೋದ್ರೂ ಕೂಡ ನಮಿಗೆ ಬಹುಮತದೆ ಅಂತನಲ್ಲಾ, ಬವುಮತೆಲ್ಲಿದ್ದತೂ?"

"ಅಂಗಾದ್ರೆ ಸರ್ಕಾರ ಬದ್ದೊದತೇನ್ನ?"

"ಸರ್ಕಾರ ಬೀಳಸೊ ಸುಚ್ಚು ಎಡೂರಪ್ಪುಂತಾವುಲೆ ಅದೆ ದೊಡಪ್ಪ ಆದ್ರೂ ಅವುನು ಸುಚ್ಚನ್ನೇ ಒತ್ತುತಾಯಿಲ್ಲ."

"ಯಾಕೆ?"

"ಯಾಕಂದ್ರೆ ಇನ್ನೇನು ವರ್ಷ ಮುಗಿತಾ ಅದೆ. ಬಜೆಟ್ಟಲ್ಲಿ ಮಂಡನೆ ಆಗಿರೋ ಕ್ಯಲಸದ ಬಿಲ್ಲು ತಯಾರಾಯ್ತಾ ಅವೆ. ಅಂಗೆ ಸರಕಾರದ ಅಧಿಕಾರಿಗಳಿಂದ ಮಾಡದೆಯಿರೊ ಕ್ಯಲಸಗಳಿಗೆ ಓಚರು ತಯಾರಾಯ್ತಾ ಅವೆ. ಅಮ್ಯಾಲೆ ಚೆಕ್ ಪಾಸಾಗಿ, ಅವ್ಯಲ್ಲ ಕ್ಯಾಶಾದ ಮ್ಯಾಲೆ, ಎಡೂರಪ್ಪ ಸುಚ್ಚಾಪು ಮಾಡಬವುದು. ಯಾಕೆ ಅಂದ್ರೆ ಇನ್ನು ಅವುನಿಗೆ ಬೇಕಾದೋರು ಯಮ್ಮೆಲ್ಲೆ ಮಂತ್ರಿಗಳ್ಯಲ್ಲ ಶೆಟ್ರು ಸಂಪುಟದಲ್ಲವ್ರುರೆ. ಅಂಗಾಗಿ ಯಲ್ಲಾರು ನಾಟಕ ಮಾಡ್ತಾ ಅವ್ರುರೆ."

"ವಳ್ಳೆ ನಾಟಕ ಕಣೊ. ತಾಕತ್ತಿದ್ರೆ ವಜಾ ಮಾಡಿ ಅಂತ ಇವುರು, ನಿಮಗೆ ಮರಿಯಾದಿ ಇದ್ರೆ ರಾಜಿನಾಮೆ ಕೊಡಿ ಅಂತ ಅವುರು. ನಿಜವಾಗ್ಲು ಇದು ತಿಂದು ತೇಗತಾಯಿರೊ ಕಳ್ಳರ ಸರ್ಕಾರ ಆಗ್ಯದೆ ಕಣೊ ವಾಟಿಸ್ಸೆ."

"ಕುಮಾರಸ್ವಾಮಿ ಎಡೂರಪ್ಪನ ಪಾರ್ಟಿಯ ಕಳ್ರು ಪಾರ್ಟಿ ಅಂದವುನುತಲ್ಲಾ."

"ನಿಜ ಕಣಕ್ಕ, ಸುಳ್ಳ ಕಳ್ಳನ ಬೈದ ಇನ್ಯಾರ್ನ ಬೈದನೂ. ಬಡಕಲ ದನ ತಂದು ಗೋಶಾಲಿಗೆ ವಡದೊನ್ಯಾರು? ಇವತ್ತವ್ರು ವೋದು ಮದಬಂದು ಹೂಂಕರಸಂಗೆ ಮಾಡಿದೊನ್ಯಾರು ಅನ್ನದ ಯೋಚನೆ ಮಾಡಬೇಕು ಪೊಲಿಸ್ ಫೆಲೋ"

"!?"

■

ಕತೆ ಮತ್ತು ನೋವು


ದೂರದ ಊರಿನಿಂದ ಒಬ್ಬ ಮಿತ್ರ ಕಾಗದ ಬರೆದು "'ಹುಳಿ ಮಾವಿನಮರ' ತುಂಬ ...ಗಿದೆ. ಆದರೆ ಇಲ್ಲಿ ನಿಮ್ಮ ಕಾದಂಬರಿ 'ಮುಸ್ಸಂಜೆಯ ಕಥಾಪ್ರಸಂಗ'ದ ಲವಲವಿಕೆ ಇಲ್ಲ, ...ಸ ಬಗ್ಗೆ ಹೆದರಿಕೊಂಡಿದ್ದೀರಿ" ಎಂದು ಮುಂತಾಗಿ ಹೇಳಿದ. ನಾನು ಅವನಿಗೆ ನನ್ನನ್ನು ...ರ್ಥಿಸಿಕೊಂಡು ಉತ್ತರ ಬರೆಯಲಿಲ್ಲ, ಯಾಕೆಂದರೆ ಉತ್ತರ ಬರೆಯುವುದು ತುಂಬ ಸುಲಭವಾಗಿತ್ತು; ...ನನ್ನು ಟೀಕಿಸುವುದು ಇನ್ನೂ ಸಲೀಸಾಗಿತ್ತು, ಅದೆಲ್ಲ ಈಗ ನನ್ನಿಂದ ಸಾಧ್ಯವಾಗುವುದಿಲ್ಲ. ಈ ...ಗ್ಗೆಯೆಲ್ಲ ನಮ್ಮ ಓದುಗರೊಂದಿಗೆ ಚಿಂತಿಸುವುದಾದರೆ ಅದಕ್ಕೆ ಒಂದು ಅರ್ಥ ಉಂಟು.

...ದೊಸ್ಸೆ ನಾನು ಎಂದೋ ಕೊಂಡುಕೊಂಡು ಕಪಾಟಿನಲ್ಲಿಟ್ಟು ಮರೆತಿದ್ದ 'ಚಾರ್ಲಿ ಚಾಪ್ಲಿನ್' ...ಬ ಪುಸ್ತಕವನ್ನು ತಿರುವಿ ಹಾಕುತ್ತಿದ್ದೆ. ಕಳೆದ ಶತಮಾನದ ಆರಂಭದಲ್ಲಿ ಶುರುವಾದ ಸಿನಿಮಾ ...ಪ್ಲಿನ್ ಬರುವವರೆಗೆ ಮೆರವಣಿಗೆ, ಸರಳ ಕತೆಗಳು, ತಮಾಷೆಯ ಹೊಡೆದಾಟಗಳನ್ನು ಮಾತ್ರ ...ರುತ್ತಿತ್ತು, ಚಾಪ್ಲಿನ್ ಬಂದು ಕತೆಗೆ ಪಾತ್ರ ನೀಡಿದ, ಪಾತ್ರದ ದ್ವಂದ್ವಗಳನ್ನು ದುಃಖದೊಳಗಣ ...ಮಾಷೆಯನ್ನು ತೋರಿದ. ಸರಳ ನಿರೂಪಣೆಯಾದದ್ದು ಪಾತ್ರದ ವಿಶಿಷ್ಟ ಜೀವಂತಿಕೆಯಾಗತೊಡಗಿತು. ...ಗೆಯೇ ನಾವು ಹೇಳುವ ಕತೆ ಕೇವಲ ಜನಗಳನ್ನು ತೋರುತ್ತದೋ ಅವರ 'ಗತಿ'ಯನ್ನು ...ರುತ್ತದೋ ಎನ್ನುವುದು ಮುಖ್ಯವಾಯಿತು. ಒಂದು ಕತೆ ತನ್ನ ನಿರೂಪಣೆಯನ್ನು ಮೀರಿ ಸೂಕ್ಷ್ಮ ...ವೇದನೆಯನ್ನು ಹಿಡಿದಿಟ್ಟರೆ ಮಾತ್ರ ಅದು ಅರ್ಥಪೂರ್ಣ. ಈ ಅರ್ಥದಲ್ಲಿಯೇ ಸಾಹಿತ್ಯದಲ್ಲಿ ...ಕ್ಷತೆಯೇ ಒಂದು ಮೌಲ್ಯ, ಮುಸ್ಸಂಜೆಯ ಕಥಾಪ್ರಸಂಗದ ನಿರೂಪಣೆಗೂ ಹುಳಿಮಾವಿನ ...ರದ ಸೂಕ್ಷ್ಮತೆಗೂ ವ್ಯತ್ಯಾಸವಿದೆ; ಅಲ್ಲಿಯ ವ್ಯತ್ಯಾಸವೇ ಆ ಕೃತಿಗಳ ವ್ಯತ್ಯಾಸವೆನಿಸುತ್ತದೆ.



...ನಾನು ನನ್ನ ಪುಸ್ತಕಗಳ ಬಗ್ಗೆ ಬರೆದುಕೊಳ್ಳುವುದಿಲ್ಲ, ಯಾಕೆಂದರೆ ಹೀಗೆ ಬರೆದುಕೊಳ್ಳುವುದು ...ವಂಚನೆಗೆ ದಾರಿ ಮಾಡಿಕೊಡುತ್ತದೆ. ಕೆಲವು ದಿನಗಳ ಹಿಂದೆ ಮಿತ್ರನೊಬ್ಬ, "ಹೊಸ ಸಾಹಿತ್ಯ ...ಮರ್ಶಕರ ದೃಷ್ಟಿಯಲ್ಲಿ ಎಲ್ಲವೂ ಉಂಟು ಮತ್ತು ಎಲ್ಲವೂ ಮಾಯೆ. ಮುಟ್ಟಿದರೆ ಟೇಬಲ್, ...ರೆ ಅದನ್ನು ಪರೀಕ್ಷಿಸಿದರೆ ಅದು ಟೇಬಲ್‌ನ ಅಣುಗಳ ರೂಪ ಮಾತ್ರ" ಅಂದ.

"ನೀನು ಹೇಳುವುದು ಸರಿ. ಸಾಹಿತಿಯನ್ನು ಈ ಪ್ರಶ್ನೆ ಯಾವಾಗಲೂ ಕಾಡುತ್ತದೆ. ಆದರೆ ಇಂಥದರ ಬಗ್ಗೆ ವಿಮರ್ಶಕ ಚಿಂತಿಸಿದರೆ ಅಪಾಯವಿಲ್ಲ, ಸಾಹಿತಿ ಈ ಬಗ್ಗೆ ಆದಷ್ಟೂ ಪ್ರಯತ್ನಿಸಿ ತಲೆಕೆಡಿಸಿಕೊಳ್ಳಕೂಡದು. ಯಾಕೆಂದರೆ ಸಾಹಿತಿ ಇಂದ್ರಿಯಗಮ್ಯ ವಿಷಯಗಳೊಂದಿಗೆ ಸಂಪರ್ಕ ಇಟ್ಟುಕೊಂಡವನು. ನನಗೆ ಮರ ಅನ್ನುವುದು ನಿಜವಾಗದಿದ್ದರೆ ಮರದ ಬಗ್ಗೆ ಬರೆಯಲಾಗುವುದಿಲ್ಲ. 'ಮರದ ಮೇಲೆ ಗಿಳಿ ಕುಳಿತಿತ್ತು' ಎನ್ನುವುದು ನಿಜ; ಅದು ಯಾವ ಸಂಕೇತವೂ ಅಲ್ಲ, ಗಿಳಿ ತನ್ನ ಮರಿಗೆ ಗುಟುಕು ಕೊಡುತ್ತಿದ್ದರೆ, ಹಾಡು ಹೇಳುತ್ತಿದ್ದರೆ, ಏನನ್ನೋ ಧ್ಯಾನಿಸುತ್ತಾ, ವಿರಹಿಣಿಯಂತೆ ಕೂತಿದ್ದರೆ... ಹಾಗೇ ಬರೆಯಬೇಕು. ಆ ಮರ, ಗಿಣಿ ಮತ್ತು ಹಾಡು ನನ್ನಲ್ಲಿ ಅವಾಗಿಯೇ ನಿಂತು ಕೃತಿಯ ರೂಪ ತಳೆಯಬೇಕು. ಗಿಣಿ ತಾಯಿಯಾಗುವುದಾಗಲಿ, ಮದರ್ ಥೆರೆಸಾ ಅಥವಾ ಜೂಲಿಯಟ್ ಆಗುವುದಾಗಲಿ ವಿಮರ್ಶಕನಲ್ಲಿ ಸಹೃದಯನಲ್ಲಿ... ನಾನು ಚಿಕ್ಕವನಾಗಿದ್ದಾಗ ನನ್ನ ಕತೆಗಳನ್ನು ನೋಡಿ ವಿಮರ್ಶಕನೊಬ್ಬ 'ನೀನು ಅಂಥ ಒಳ್ಳೆಯ ಲೇಖಕನಲ್ಲ, ಯಾಕೆಂದರೆ ನಿನಗೆ ಅಮೂರ್ತ ಚಿಂತನೆ, **abstract perception** ಅಷ್ಟಾಗಿ ಇಲ್ಲ' ಅಂದ. ನಾನು ನಿರಾಶನಾಗದೆ ನಕ್ಕೆ. 'ನಾನು ನಿನ್ನಂತೆ ಅಮೂರ್ತ ಗ್ರಹಿಕೆಯುವನು ಅಲ್ಲವಾದ್ದರಿಂದಲೇ ನಿನಗಿಂತ ಉತ್ತಮ ಸಾಹಿತಿ' ಅಂದೆ. ನನ್ನ ಧ್ವನಿಯ ವಿಶ್ವಾಸವನ್ನು ಕಂಡು ಅವನಿಗೆ ಆಶ್ಚರ್ಯವಾಯಿತು."



ಹಾವು ಮತ್ತು ಹಗ್ಗ, ವಸ್ತು ಮತ್ತು ಮಾಯೆಯ ಬಗ್ಗೆ ಕೋಟ್ಯಂತರ ಗಂಟೆಗಳ ವ್ಯರ್ಥ ಚಿಂತನೆ ನಡೆಸಿದ ಭಾರತೀಯರಿಗೆ ಯಾರಿಗೆ ಹಾವು, ಯಾರಿಗೆ ಹಗ್ಗ ಎನ್ನುವುದೇ ಗೊತ್ತಿರಲಿಲ್ಲ. ನೋವು ಎನ್ನುವುದು ಕವಿಗೆ ನೋವು, ದುಃಖ; ಅದು ಕಾಲ್ಪನಿಕ ಅನ್ನಿಸಿಕೆಯಲ್ಲ.

• ಏಪ್ರಿಲ್ 1, 1998

ಒಳಗೆ ಭಾಜಪ ಹೊರಗೆ ಕಜಪ!

ಬನಾನಾ ರಿಪಬ್ಲಿಕ್ ಅಂದರೆ ಏನು ಅನ್ನುವುದು ತಲೆಯಲ್ಲಿ ಕೊರೆಯುತ್ತಿತ್ತು. ಅದಕ್ಕೂ ರಾಜಕೀಯಕ್ಕೂ ಸಂಬಂಧ ಇರಬಹುದು ಅನ್ನುವ ಅನುಮಾನ ಬಂತು. ಇತ್ತೀಚಿನ ರಾಜಕೀಯ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಬಂದೆ. ಚಿಲ್ಲರೆ ವ್ಯಾಪಾರಕ್ಕೆ ವಿದೇಶೀ ಕಂಪನಿಗಳು ಲಗ್ಗೆ ಹಾಕೋಕೆ ಒಪ್ಪಿಗೆ ನೀಡಬೇಕೋ, ಬೇಡವೋ ಎಂಬುದರ ಕುರಿತು ಕೇಂದ್ರದಲ್ಲಿ ಬಿಸಿಬಿಸಿ ಚರ್ಚೆ ನಡೆಯುತ್ತಿತ್ತು. ಎಸ್‌ಪಿ, ಬಿಎಸ್‌ಪಿ ಎರಡೂ ಪಕ್ಷಗಳು ಬಡವರ ಆಧಾರಿತ ಪಕ್ಷಗಳು ಅಲ್ಲವಾ, ಅವೆರಡೂ ಲೋಕಸಭೆಯಲ್ಲಿ ಹರ್‌ಗೀಜ ವಿದೇಶಿ ಕಂಪನಿಗಳು ಚಿಲ್ಲರೆ ವ್ಯಾಪಾರಕ್ಕೆ ಅಂತ ಭಾರತಕ್ಕೆ ಸುತರಾಂ ಬರಕೂಡದು ಎಂದೆಲ್ಲ ಎಷ್ಟು ಪಸಂದಾಗಿ ವಾದ ಮಂಡಿಸಿದರು ಅಂತೀರಿ. ನೋಡೋಕೆ ಎರಡು ಕಣ್ಣೂ ಸಾಲದು. ಕೇಳೋಕೆ ಎರಡು ಕಿವಿಯೂ ಸಾಲದು. ಕಾಂಗ್ರೆಸ್‌ಗೆ ಹೊರಗಿನಿಂದ ಬೆಂಬಲ ನೀಡಿದ್ದರೂ ವಿದೇಶಿ ಕಂಪನಿಗಳನ್ನು ಆಹ್ವಾನಿಸುವಂತಹ ಜನವಿರೋಧಿ ನೀತಿಯನ್ನು ಇಷ್ಟು ಖಡಾಖಂಡಿತವಾಗಿ ವಿರೋಧಿಸುತ್ತಿವೆಯಲ್ಲಾ. ಇದು ನಿಜವಾದ ಪ್ರಜಾಪ್ರಭುತ್ವ ಎಂದು ಮನಸ್ಸಿನಲ್ಲೇ ಆ ಪಕ್ಷಗಳನ್ನ ತಾರೀಫು ಮಾಡಿದೆ. ಬೇಕೋ ಬೇಡವೋ ಎಂದು ನಿರ್ಧರಿಸಲು ಮತ ಹಾಕುವ ಸಮಯ ಬಂದಿತು. ಎರಡೂ ಪಕ್ಷಗಳ ಸದಸ್ಯರು ಗೈರುಹಾಜರಾಗಿದ್ದರು! 'ಇದೇನ್ರಿ ಸಿಂಗ್‌ಜಿ ಹಿಂಗೆ ಮಾಡಿದ್ದೀರಲ್ರೀ. ಬಡವರ ಶೋಷಣೆ ಮಾಡಲು ಸಮ್ಮತಿಸಿದರಲ್ಲಾ. ನ್ಯಾಯವೇನ್ರಿ!' ಅಂತ ಮುಲಾಯಂಸಿಂಗ್ ಅವರನ್ನು ಯಾರೋ ಕೇಳಿದರಂತೆ. ಅದಕ್ಕೆ ಅವರು 'ಹುಂಗಲ್ಲ ಇವರೆ. ನಾನು ಲೋಹಿಯಾ ಶಿಷ್ಯ. ಕೆಂಪುಮೂತಿಗಳ ಪ್ರವೇಶಕ್ಕೆ ಸುತರಾಂ ಒಪ್ಪುವುದಿಲ್ಲ. ಆದರೇನು ಮಾಡೀರಿ. ಭಾಜಪ ಕೋಮುವಾದಿಗಳ ಕೊಂಪೆ ಅನ್ನೋದು ನಿಮಗೆ ತಿಳಿದೇ ಇದೆ. ಅದರ ಜೊತೆ ಸಹಮತ ವ್ಯಕ್ತಪಡಿಸುವುದು ಹೇಗೆ ಆಗುತ್ತೆ ಹೇಳಿ' ಅಂತ ಪ್ರಶ್ನಿಸಿದವರನ್ನೇ ಗೊಂದಲಕ್ಕೆ ಕೆಡವಿದರಂತೆ. ಕೋಮುವಾದಕ್ಕೂ, ಚಿಲ್ಲರೆ ವ್ಯಾಪಾರಕ್ಕೂ ಎತ್ತಣಿಂದೆತ್ತಣ ಸಂಬಂಧವಯ್ಯಾ ಅಂತ ಅವರಿನ್ನೂ ಯೋಚಿಸುತ್ತಲೇ ಇದಾರಂತೆ. ಲೋಕಸಭೆಯಲ್ಲಿ ಹಿಂಗೆಲ್ಲ ನಡೀತಲ್ಲ, ರಾಜ್ಯಸಭೆಯಲ್ಲಿ ಹೇಗಿದ್ದರೂ ಕಾಂಗ್ರೆಸ್‌ಗೆ ಬಹುಮತ ಇಲ್ಲ, ಅಲ್ಲಿ ಇದು ಠುಸ್ ಎಂದೋಗುತ್ತೆ ಅಂದುಕೊಂಡಿದ್ದೆ. ಹಾಗೇ ನಡವಳಿಕೇನೂ ಇತ್ತು. ಮಾಯಾವತಿ ಉರುಫ್ ಬೆಹೆನ್‌ಜೀ ಅವರು ವಿದೇಶಿ ಕಂಪನಿಗಳ ವಿರುದ್ಧವಾಗಿ ಮಾತನಾಡಿದ್ದನ್ನು ಕೇಳುವುದಕ್ಕೇ ಒಂದು ಚೆಂದ. ಅಷ್ಟು ಪಸಂದಾಗಿತ್ತು ಅವರ ವಾದಸರಣಿ. ಮತದಾನದ ಸಮಯ ಬಂತು. ಮಾಯಾವತಿ ಪಕ್ಷದವರು ವಿದೇಶಿ ಕಂಪನಿಗಳ ಪರವಾಗಿಯೇ ಮತ ನೀಡಿದರು!

ಅರೆರೆ ಏನಯ್ಯಾ ಇದು ಅಂತೆಲ್ಲ ತಲೆ ಕೆರೆದುಕೊಂಡು ಕರ್ನಾಟಕದ ಆಡಳಿತ ವೈಖರಿ ಗಮನಿಸಿದೆ. ಭಾಜಪ ನಾಯಕರ ಹೀಯಾಳಿಸುವುದು ಯಡ್ಯೂರಪ್ಪನವರ ಇತ್ತೀಚಿನ ಖಯಾಲಿ. ದೇವರಿಗೆ ಪುಷ್ಪಾರ್ಚನೆ ಮಾಡಿದ ಹಾಗೆ ನಾಯಕರಿಗೆ ಬೈಗುಳಾರ್ಚನೆ ಮಾಡಿದರೇ ಒಂದು ರೀತಿಯ ಸಂತೃಪ್ತಿ. ಇಂತಹ ಯಡ್ಯೂರಪ್ಪನವರು ಕೆಜೆಪಿ ಅಧ್ಯಕ್ಷ ಸ್ಥಾನ ಅಲಂಕರಿಸುವ ಪುಣ್ಯ ಮುಹೂರ್ತ. ಈ ದಿವ್ಯ ಕ್ಷಣವನ್ನು ಕಣ್ಣು ತುಂಬಿಕೊಳ್ಳಲು ಭಾಜಪ ಮಂತ್ರಿಗಳು, ಶಾಸಕರು ಹಾಜರಾಗಿದ್ದರು. 'ಒಂದು ಪಕ್ಷದವರು ಇನ್ನೊಂದು ಪಕ್ಷದವರ ಸಭೆಯಲ್ಲಿ ವೇದಿಕೆ ಅಲಂಕರಿಸುವುದು ಅನೈತಿಕ ಅಲ್ಲವೆ' ಅಂತ ಯಾರೋ ಕೇಳಿದ್ದಕ್ಕೆ ಯಡ್ಯೂರಪ್ಪನವರು 'ಅವರೆಲ್ಲ ಕೆಜೆಪಿ ಸದಸ್ಯರು. ಈಗ ರಾಜ್ಯದಲ್ಲಿರುವುದು ಕೆಜೆಪಿ-ಬಿಜೆಪಿ ಸಮ್ಮಿಶ್ರ ಸರ್ಕಾರ' ಅಂದರಂತೆ! ಅಂದರೆ ಅವರೆಲ್ಲ ವಿಧಾನಮಂಡಲದಲ್ಲಿ ಭಾಜಪದ ಗೌರವಾನ್ವಿತ ಸದಸ್ಯರು, ಆದರಿಂದ ಹೊರಗೆ ಕಜಪದ ಆದೇ ಗೌರವಾನ್ವಿತ ಸದಸ್ಯರು ಎಂದ ಹಾಗಾಯಿತು! ಗೆದ್ದಿರುವುದು ಒಂದು ಪಕ್ಷದಿಂದ, ಹೇಳಿಕೊಳ್ಳುತ್ತಿರುವುದು ಇನ್ನೊಂದು ಪಕ್ಷ ಅಂತ. ಇದು ಯಡ್ಯೂರಪ್ಪ ರಿಪಬ್ಲಿಕ್ ಮಾದರಿ ಅಂದುಕೊಂಡೆ. ಇದು ಹಾಳಾಗಲಿ. ಸಮ್ಮಿಶ್ರ ಸರ್ಕಾರ ನಮ್ಮದು ಅಂತಾರೆ. ಅಂದಮೇಲೆ ಹೊಂದಾಣಿಕೆ ಇರಬೇಕಲ್ಲ. ಅವನ ಮುಖ ಇವನು, ಇವನ ಮುಖ ಅವನು ಕೆತ್ತುತ್ತಾ ಕುಂತವ್ರೆ. "ಯಾಕೆ ಹಿಂಗೆ ಕಿತ್ತಾಡ್ತಿರೋ ಇನ್ನು ಇರೋದೆ ಮೂರು ತಿಂಗಳು. ರಾಜೀನಾಮೆ ಬಿಸಾಕಿ ಬನ್ರೋ" ಅಂದರೆ ಅದಕ್ಕೆ ಮಾತ್ರ ಯಾರೂ ತಯಾರಿಲ್ಲ! ಎಂತಹ ಅದ್ವಾನದ ಆಡಳಿತಕ್ಕೆ ನಾವು ಸಾಕ್ಷಿ. ಆಗಬೇಕಾಗಿದೆಯಲ್ಲ ಅಂತ ರೊಚ್ಚಿಗೆದ್ದ ಕಾಂಗ್ರೆಸ್ ಏನಾದರೂ ಅವಿಶ್ವಾಸ ನಿರ್ಣಯ ತಂದರೆ.... ಭಾಜಪ-ಕಜಪದವರೆಲ್ಲರೂ ಒಟ್ಟಾಗಿ ನಿರ್ಣಯದ ವಿರುದ್ಧ ಮತ ಚಲಾಯಿಸುವುದು ಶತಸ್ಸಿದ್ಧ!

ಅಲ್ಲಾ ಬನಾನಾ ರಿಪಬ್ಲಿಕ್ ಅಂದರೆ ಇದೇನಾ...?

ಯಡ್ಯೂರಪ್ಪನವರ ಸೆಕ್ಯೂಲರ್ ಅವತಾರ

ದಯಾಮಯನಾದ ಪರಮಾತ್ಮನು ಭಕ್ತರ ಉದ್ಧಾರಕ್ಕಾಗಿ ಅವತಾರಗಳನ್ನು ಎತ್ತುತ್ತಾನೆ ಎಂಬುದು ಸಕಲರಿಗೂ ವೇದ್ಯವಾದ ಸಂಗತಿಯೇ ಆಗಿದೆ! ವರಾಹ, ಮತ್ಸ್ಯ ಕೂರ್ಮ ಮುಂತಾದ ಅವತಾರಗಳ ಪರಿಚಯ ಇಲ್ಲದವರು ಯಾರೂ ಇರಲಾರರು. ಇವುಗಳೆಲ್ಲದರ ಉದ್ದೇಶ ಲೋಕಕಲ್ಯಾಣ. ಆ ನಿರಾಕಾರ ಭಗವಂತನಂತೆಯೇ ಈ ಸಾಕಾರ ಯಡ್ಯೂರಪ್ಪನವರು ಇರುವ ಒಂದು ಜೀವಿತದಲ್ಲಿಯೇ ಹಲವಾರು ಅವತಾರಗಳನ್ನು ಎತ್ತಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರಲು ನಮ್ರವಾಗಿ ಬಯಸುತ್ತೇನೆ.

ಭಾಜಪದ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ಅದರ ನಿಷ್ಠಾವಂತ ಕಾರ್ಯಕರ್ತನಾಗಿ ಶ್ರೀಯುತರು 'ಸ್ವಯಂಸೇವಕ' ಅವತಾರ ತಾಳಿದ್ದರು. ಈ ವಿಷಯ ಜನಜನಿತವಾಗಿದ್ದರೂ ಅದನ್ನು ಅವರು ತ್ಯಜಿಸಿದ್ದೇಕೆ ಎಂದು ಕೆಲವರು ತಿಳಿಯಲು ಬಯಸಿದ್ದಾರೆ. ಇದನ್ನು ಇನ್ನೊಂದು ಅವತಾರವೆಂದೇ ತಿಳಿಯಬೇಕೆಂದು ನಮ್ಮ ನಮ್ರ ಉತ್ತರ. ಇದು ಅವರಿಗಿರುವ ಗೊಂದಲಕ್ಕೆ ಪರಿಹಾರವಾಗಲಾರದೇನೋ. ಯಾಕೆಂದರೆ ಭಕ್ತರ ಉದ್ಧಾರಕ್ಕಾಗಿ, ಲೋಕಕಲ್ಯಾಣಕ್ಕಾಗಿ ಆ ದಯಾಮಯನು ಅವತಾರವೆತ್ತಿದ್ದು ನಿಜ. ಇವರು ಯಾರ ಕಲ್ಯಾಣಕ್ಕಾಗಿ ಹೊಸ ಅವತಾರ ಎತ್ತುತ್ತಿದ್ದಾರೆ ಎಂದು ಪ್ರಶ್ನಿಸುತ್ತಿದ್ದಾರೆ. ಅದಕ್ಕೆ ನಮ್ಮ ಉತ್ತರ ಏನೆಂದರೆ ಯಡ್ಯೂರಪ್ಪನವರ ಹಲವಾರು ಅವತಾರಗಳಿಂದ ತೃಪ್ತಿಕಾಣದ ಹೈಕಮಾಂಡ್ ಎಂಬ ಹೈಕಮಾಂಡು ಅವರ ಅಧಿಕಾರವನ್ನೆಲ್ಲ ಕಸಿದುಕೊಂಡಿತ್ತಲ್ಲದೆ ಭ್ರಷ್ಟಾಚಾರದ ಆರೋಪ ಹೊರಿಸಿ ಜೈಲಿಗೆ ಸೇರಿಸಿತು. ಜೈಲು ಅವತಾರಕ್ಕೂ ಕಾರಣೀಭೂತವಾಯಿತು ಎಂದು ನಾವು ಸಂಪೂರ್ಣ ವಿವರ ನೀಡಬೇಕೆಂಬ ಉದ್ದೇಶ ಹೊಂದಿದ್ದರೂ ಪ್ರಶ್ನಿಗರಿಗೆ ಕೇಳಿಸಿಕೊಳ್ಳುವ ತಾಳ್ಮೆಯೇ ಇರಲಿಲ್ಲ. ಇವೆಲ್ಲ ಆದದ್ದು ಅವರ ಸ್ವಯಂಕೃತಾಪರಾಧದಿಂದ. ಅದಕ್ಕೆ ಅವರು ಇವರನ್ನು ಯಾಕೆ ದೂಷಿಸಬೇಕು? ಭಾಜಪವನ್ನು ಯಾಕೆ ಬಿಡಬೇಕು? ಎಂದೆಲ್ಲ ಪುಂಖಾನುಪುಂಖವಾಗಿ ಪ್ರಶ್ನೆಗಳ ಸುರಿಮಳೆಗೈಯ್ಯುತ್ತಿದ್ದಾರೆ. ಅವರು ಭಾಜಪ ತ್ಯಜಿಸಲು ಕಾರಣ ಇದೆ. ಅದು ಸಕಾರಣವೂ ಸಹ. ಆದರೆ ಇದನ್ನು ಯಡ್ಯೂರಪ್ಪನವರು ಬಹಿರಂಗವಾಗಿ ಹೇಳುವುದಕ್ಕಾಗುವುದಿಲ್ಲ. ಅದು ಯಾವುದೆಂದರೆ ಚುನಾವಣೆಯಲ್ಲಿ ಭಾಜಪಕ್ಕೆ ಭವಿಷ್ಯ ಇಲ್ಲ ಎಂಬ ಸತ್ಯಸಂಗತಿ. ಹೀಗೆ ಆಗಲು ಯಡ್ಯೂರಪ್ಪನವರೂ ಸೇರಿದಂತೆ ಹಲವರು ಶ್ರಮಿಸಿದ್ದರು! ಸಕ್ರಿಯ ರಾಜಕಾರಣಕ್ಕೆ ಭಾಜಪ ಸ್ಮಶಾನಸದೃಶ ಆಗಿತ್ತು, ಪಕ್ಷ ಬದಲಾಯಿಸುವುದು ಅನಿವಾರ್ಯವೇ ಆಗಿತ್ತು ಎಂಬ ಸತ್ಯ ಹೇಳಿದರೂ ಅವರು ನಂಬುವ ಸ್ಥಿತಿಯಲ್ಲಿಲ್ಲ. ಎಂತಹ ಬೊಗಳೆ ಮಾತು ಆಡುತ್ತಿದ್ದೀರಿ? ಇಲ್ಲಿ ಭ್ರಷ್ಟಾಚಾರಿ ಆದವನನ್ನ ಅಲ್ಲಿ ಸದಾಚಾರಿ ಎಂದು ಜನ ನಂಬುತ್ತಾರೆಯೇ ಎಂದು ಕೋಪೋದ್ರಿಕ್ತರಾಗಿ ಕೇಳುತ್ತಾರೆ. ನಂಬುತ್ತಾರೆ ಮಹಾಶಯರೆ, ನಂಬುತ್ತಾರೆ. ಹೊಸ ಪಕ್ಷ ಯಾವುದೇ ಕಳಂಕ ಅಂಟಲು ಅವಕಾಶ ದೊರೆತಿಲ್ಲ, ಹಳೆ ಮನುಷ್ಯ ಇರಬಹುದು. ಆದರೆ ಬಟ್ಟೆ ಹೊಸದು. ಯಾವುದೇ ಕಲೆ ಇಲ್ಲ, ಫಳಫಳ ಹೊಳೆಯುತ್ತಿದೆ. ಜನ ಮಾರು ಹೋಗುತ್ತಾರೆ ಎಂದೆಲ್ಲ ಹೇಳಿದರೂ ಕೇಳೊಲ್ಲರು. ಹೊಸ ಪಕ್ಷ ಸೇರುವಂತಿದ್ದರೆ ಹಿಂದೆಯೇ ಸೇರಬೇಕಾಗಿತ್ತು, ಅಧಿಕಾರಕ್ಕಾಗಿ ಕಾಡಿಬೇಡಿ ಸುಸ್ತಾದರು. ಸಿಗಲಿಲ್ಲ. ಈಗ ಹಾರಾಡ್ತಿದಾರೆ ಎಂದು ಕೊಸರಾಡುತ್ತಾರೆ. ಹಿಂದೆಯೇ ಮಾಡಬಹುದಾಗಿತ್ತು, ಸಾವಧಾನವಾಗಿ ಯೋಚಿಸಿ. ಒಂದು ವರ್ಷದ ಹಿಂದೆ



ಯಡ್ಯೂರಪ್ಪ ಎಂದರೆ ನಿಮ್ಮ ಭಾವಕೋಶದಲ್ಲಿ ಎಂತಹ ಚಿತ್ರ ಮೂಡಿಬರುತ್ತಿತ್ತು? ಭ್ರಷ್ಟಾಚಾರಿ, ಜೈಲುವಾಸಿ, ಕೋಮುವಾದಿ ಇಂತಹವುಗಳು ತಾನೆ. ಇಂತಹ ಅವತಾರಗಳು ಇರುವಾಗ ಮತ ಭಿಕ್ಷೆ ಬೇಡಲು ಹೇಗೆ ಸಾಧ್ಯ ಹೇಳಿ. ಅವರಿಗೆ ಗೊತ್ತು. ಕಾಲವೇ ಮದ್ದು. ಅಪರಾಧಗಳನ್ನು ಮರೆಸುತ್ತೆ, ಭ್ರಷ್ಟಾಚಾರ ಮುಚ್ಚಿಹಾಕುತ್ತೆ, ಕೋಮುವಾದಿ ಸೆಕ್ಯುಲರ್ ಆಗ್ತಾನೆ. ರಾಜ್ಯ ನುಂಗಿದವ ಕಲ್ಯಾಣ ರಾಜ್ಯದ ಹರಿಕಾರ ಆಗ್ತಾನೆ! ಈ ಅವತಾರಗಳ ಮರ್ಮ ಅರೀರಿ ಅಂದರೂ ಕೇಳದೆ ಅರಚಾಡ್ತವೆ. ಅರುಚಾಡಿಕೊಳ್ಳಲಿ ಬಿಡಿ. ಇವು ಇಲ್ಲಿ ಅರುಚಿದರೆ ಯಡ್ಯೂರಪ್ಪನರ ಕಲ್ಯಾಣ ರಾಜ್ಯ ಸ್ಥಾಪನೆ ನಿಲುತ್ತಾ...!

ಹಂಗಿನ ಭೋಜನ

ಒಳ್ಳೆಯ ಸುದ್ದಿ ಇರಬೇಕು, ನಿಜ. ಆದರೆ ಕೆಟ್ಟ ಸುದ್ದಿ ಅಂದರೆ ಕಿವಿ ನಿಮಿರುತ್ತೆ. ಇಂತಹ ಆಸಕ್ತಿ ಒಳ್ಳೆ ಸುದ್ದಿಗಳಿಗೆ ಮೂಡುವುದೇ ಇಲ್ಲ. ಸುಮ್ಮನೆ ನೋಡಿ. ಪ್ರವಾಸ ಹೋಗಿದ್ದ ಶಾಲಾ ಬಸ್ಸು ಸುಖವಾಗಿ ಊರು ಸೇರಿತು ಅಂದರೆ ಸುಖ ಇಲ್ಲ, ಅದೇ ಅದು ಅಪಘಾತಕ್ಕೆ ಸಿಲುಕಿತು ಅಂದರೆ ಕುತೂಹಲ. ಯಾರಿಗೂ ಅಪಾಯ ಇಲ್ಲ ಅಂದರೆ ಫಲ ಇಲ್ಲ, ಎಂತಹದ್ದೋ ನಿರಾಸೆ. ಕೆಲವರಾದರೂ ಪರಮಾತ್ಮನ ಪಾದಾರವಿಂದ ಸೇರಿದರು ಅಂದರೆ ಏನೊ ಒಂದು ರೀತಿಯ ಸಮಾಧಾನ. ಹೆಚ್ಚು ಹೆಚ್ಚು ಮಕ್ಕಳು ಸತ್ತಿದ್ದಾರೆ ಅಂದಷ್ಟು ಸುದ್ದಿಗೆ ಪ್ರಾಧಾನ್ಯತೆ. ಮನುಷ್ಯನ ಸ್ವಭಾವವೇ ಹೀಗೆ. ಒಳ್ಳೆಯದು ಬೇಡ. ಕೆಟ್ಟದ್ದು ಬೇಕು. ಆದರೆ ಅದು ಬೇರೆಯವರಿಗೆ ಆಗಿರಬೇಕು!

ಸುದ್ದಿ ಮಾಧ್ಯಮದವರು ಈ ಗುಟ್ಟು ಅರಿತಿದ್ದಾರೆ.

ಅಣಕ




• ಎಚ್.ಎಲ್.ಕೇಶವಮೂ

ಇಂತಹ ಸುದ್ದಿಗಳನ್ನೇ ಹಾಕಿ ಜನರ ಕುತೂಹಲ ತಣಿ... ಬಂದಿದ್ದಾರೆ. ಛತ್ತೀಸ್‌ಗಡದವರು ಇನ್ನೂ ಒಂದು ಹೆಜ್ಜೆ ... ಹೋಗಿದಾರೆ ಅಂತಾನೆ ಹೇಳಬಹುದು. ಸರ್ಕಾರ ಮೇಲೆ ಅಧಿಕಾರ ದುರುಪಯೋಗ ಮಾಡಿಕೊಳ್ಳುವುದು ಹಕ್ಕು. ಜನಪರ ಕಾರ್ಯಕ್ರಮಗಳಲ್ಲೂ ಅದು ಇರುತ್ತೆ... ಮಾಧ್ಯಮದೋವ್ರು ಅದರಲ್ಲಿನ ಒಳ್ಳೆಯ ಅಂಶಗಳ ಮೂಸಿಯೂ ನೋಡಲ್ವಂತೆ. ಆದರೆ ಪೊಲೀಸ್ ನಾಯಿ ... ಹುಳುಕುಗಳನ್ನ ಹೆಕ್ಕಿಹೆಕ್ಕಿ ತೋರ್ತಾರಂತೆ. ಅದಕ್ಕೆ ಬಣ್ಣ... ಪುಟಗಟ್ಟಲೆ ಬರೀತಾರಂತೆ. ಟಿವಿಯೋವಕ್ಕಂತೂ ಸುಗ್ಗಿ... ತಿರುಗಾ ಮುರುಗಾ ತೋರಿಸಿದ್ದನ್ನೆ ತೋರಿಸುತ್ತಾ ಕುಂತಿರ್ತಾ... ಹಿಂಗೆಲ್ಲ ಮಾಡಿ ಸರ್ಕಾರದ ಮಾನಾನ ಹಾದಿಬೀದೀಲಿ ಹ... ಮಾಡ್ತಿದಾರಂತೆ. ಇದು ಅಲ್ಲಿನ ಮುಖ್ಯಮಂತ್ರಿ ರಮಣ... ಅವರಿಗೆ ತಲೆನೋವಿನ ವಿಷಯವಾಗಿ ಕಾಡುತ್ತಿದೆಯಂ...

ಏನು ಹಿಂಗಾಗವಲ್ಲ ಈ ಮಾಧ್ಯಮದೋ... ಜನಕಲ್ಯಾಣ ಯೋಜನೆಗಳ ಕಡೆ ಅವು ಮೂಸಿ... ನೋಡುತ್ತಿಲ್ಲವಲ್ಲಾ. ಸರ್ಕಾರ ನಮಗಾಗಿ ಹಿಂಗೆಲ್ಲ ಮ... ಅನ್ನೋದ ಜನರಿಗೆ ತಿಳಿಸುವುದು ಹೆಂಗೆ ಅಂತೆಲ್ಲ ... ಯೋಚಿಸುತ್ತಾ ಕುಳಿತಿದ್ದರಂತೆ. ಯಾರೋ ಒಬ್ಬ ಬುದ್ಧಿ... 'ಜಾಹೀರಾತು ಮುಖಾಂತರ ಜನರ ಗಮನಕ್ಕೆ ತರಬಹ...' ಅನ್ನೋ ಸಲಹೆ ನೀಡಿ, 'ಉತ್ತಮ ಸಲಹೆ' ಅಂತ ... ಮಂತ್ರಿಯೋರು ತಾರೀಫು ಮಾಡ್ತಾರೆ ಅಂದುಕೊಂಡಿದ್ದ... ಯಾರೂ... ಈ ಬುದ್ಧಿವಂತ. ರಮಣಸಿಂಗ್ ಎಷ್ಟೇ ... ಅನುಭವಿ ರಾಜಕಾರಣಿ. ಸರ್ಕಾರದ ಜಾಹೀರಾತನ್ನು ... ಮೂರ್ಖರು ಯಾರೂ ಈ ದೇಶದಲ್ಲಿ ಹುಟ್ಟಿಲ್ಲ ... ಸತ್ಯಸಂಗತಿ ತಿಳಿದಿದ್ದರಂತೆ. ಅದಕ್ಕೆ ಅಂತಹ ... ನೀಡಿದವನ ತಲೆಯ ಮೇಲೆ 'ಪೆದ್ದು ಮುಂಡೇದೆ' ... ಮೊಟಕುತ್ತಿದ್ದಾಗ ಹೊಸ ಮಿಂಚು ಹೊಳೆಯಿ... ತಿದೇನಪ್ಪ ಅಂತಹ 'ಹೊಳಹು' ಅಂದರೆ ಜಾಹೀರಾ... ಸುದ್ದಿಯಾಗಿ ಪ್ರಕಟಿಸುವುದು ಆಗಿತ್ತಂತೆ! ಇದಕ್ಕೆ ... ಸಿಂಗ್‌ಜೀ ನಂತರ ಹಲವು ಮಾಧ್ಯಮಗಳ ... ಒಡಂಬಡಿಕೆ ಮಾಡಿಕೊಂಡರಂತೆ. ಕೊಡೊ... ತೆಗೊಳ್ಳೋದು ಎಲ್ಲಾ ಪಾರದರ್ಶಕವಾಗೇ ನಡೀತ್ತಿ... 'ಇದೇನ್ರಿ ಸಿಂಗ್ ಸಾಹೇಬರೆ ಹಿಂಗೆ ಮಾಡಿದ್ದೀರಿ. ಪತ್ರಿ... ಸುದ್ದಿ ಜನ ಅಂತ ಇರ್ತ್ತರೆ. ವಾಹಿನಿಗಳಲ್ಲಿ ಸುದ್ದಿ ಸ... ಅಂತ ಇರ್ತ್ತದೆ. ಹಾಗೇನೆ ಜಾಹೀರಾತು ಜಾಗ, ಜಾಹೀ... ಸಮಯ ಅಂತೆಲ್ಲ ನಿಗದಿ ಆಗಿರ್ತದೆ. ನೀವೇನ್ರಿ ಮಾಧ್ಯ... ನಿಯಮಾನೆ ಬದಲಾಯಿಸಿ ಬಿಟ್ಟಿದೀರಿ' ಅಂದರೆ ... 'ಒಳ್ಳೆಯ ಕೆಲಸಗಳಿಗೆ ಪ್ರಚಾರನೇ ಕೊಡೊಲ್ಲ ಅಂತ... ಚಂಡೆ ಹಿಡಿದು ಕೂತರೆ ಇನ್ನೇನು ಮಾಡಬೇಕ್ರಿ' ಅಂತಾ...

ಈಗ ಏನಾಗಿದೆ ಅಂದ್ರೆ ಬೆಳಕಿಗೆ ಬ... ಬೇಕಾಗಿದ್ದಂತಹ ಸುದ್ದಿಗಳೂ ಸರ್ಕಾರದ ಭಯದಿಂದ ... ಕಾಣುತ್ತಿಲ್ಲವಂತೆ! ಇದು ನ್ಯಾಯವೇ ಅಲ್ಲವೇನ್ರಿ. ... ತೆಗೆದುಕೊಳ್ಳದೇ ಇದ್ದರೆ ಒಂದು ತರಹ. ದುಡ್ಡು ತ... ವಿರೋಧ ಮಾಡ್ತೀನಿ ಅಂದ್ರೆ ಯಾರ ಸರ್ಕಾರ ... ಸುಮ್ಮನಿರಕ್ಕಾಗುತ್ತೆ....!

ಚಾನೆಲ್‌ಗಳು ಸಾಮಾಜಿಕ ಕಾಳಜಿಯಿಂದ ನಡೆದುಕೊಳ್ಳಬೇಕಾಗಿದೆ



ಪ್ರತಿ ವಾರ ಪತ್ರಿಕೆಯನ್ನು ತಪ್ಪದೆ ಓದುತ್ತಿದ್ದೇನೆ.

ಈ ವಾರದ ಪ್ರಳಯದ ಬಗ್ಗೆ ನಿಮ್ಮ ಸಂಪಾದಕೀಯ ಅರ್ಥಪೂರ್ಣವಾಗಿದೆ.

ಪ್ರತಿದಿನವೂ ಟಿ.ವಿ. ಚಾನಲ್‌ನವರು ಪ್ರಳಯ ಆಗುವುದು ಗ್ಯಾರಂಟಿ ಎನ್ನುವಂತೆ ತೋರಿಸುತ್ತಿದ್ದಾರೆ. ಹಾಗಾದರೆ ಪ್ರಳಯ ಆಗುವುದನ್ನು/ ಭೂಕಂಪ ಆಗುವುದನ್ನು ನೇರಪ್ರಸಾರ ಮಾಡುತ್ತಾರಾ ಹೇಗೆ? ಕಾದು ನೋಡಬೇಕು. ಪದೇಪದೇ ಈ ರೀತಿ ಪ್ರಸಾರ ಮಾಡುವುದು ಸಾಮಾನ್ಯ ಜನತೆಯ ಮೇಲೆ ಯಾವ ರೀತಿ ಪರಿಣಾಮ ಬೀರುವುದು ಎಂಬುದನ್ನು ಯೋಚಿಸಬೇಕಾಗುತ್ತದೆ. ಹೇಗೂ ಪ್ರಳಯವಾಗುತ್ತದೆ ಎಂದು ಜನಗಳಲ್ಲಿ



ಬಾಬರಿ ಮಸೀದಿ ಧ್ವಂಸದ ಬಗ್ಗೆ ಓದಿದೆ.

ತಿಪಟೂರಿನಲ್ಲಿ ನನ್ನ ಸ್ನೇಹಿತರೊಬ್ಬರು ಕರ್ನಾಟಕದಿಂದ ಕರಸೇವಕರಾಗಿ ಅಯೋಧ್ಯೆಗೆ ಹೋಗಿದ್ದ ನೆನಪುಗಳನ್ನು ನನ್ನೊಡನೆ ಹೇಳಿದರು. ಬಾಬರಿ ಮಸೀದಿ ಧ್ವಂಸಕ್ಕೆ ಮುನ್ನ ಮತ್ತು ಆನಂತರ ಆ ಸ್ಥಳದಲ್ಲಿ ತೆಗೆಸಿಕೊಂಡ ಫೋಟೋಗಳನ್ನು ಕೂಡ ತೋರಿಸಿದರು.

ಜಿ. ರಾಜಶೇಖರ ಅವರ ಲೇಖನವನ್ನು ಓದಿದ ಮೇಲೆ ಈ ವಿಷಯ ನನಗೆ ನೆನಪಿಗೆ ಬಂತು.

- ಸದಾಶಿವ, ತುಮಕೂರು.

ಆಸ್ತಿ ಕೊಡುವ ಆಸಿಕ ಪಿಳ್ಳೆ ಸಿಗುವಂತಾಗಲಿ!

ಕಂಡಹಾಗೆ ಅಂಕಣದಲ್ಲಿ ಗೌರಿ ಲಂಕೇಶ್ ಬರೆದ 'ಮಂಕುದಿಣ್ಣೆಗಳ ಪ್ರಳಯ' ಎಂಬ ಲೇಖನದ ಕೊನೆಯಲ್ಲಿ ಹೇಳಿರುವ ಮಾತನ್ನೇ ನಾನು ಹಲವು ಮಂಕುದಿಣ್ಣೆಗಳಿಗೆ ಹೇಳಿ. ಅವರನ್ನು ಮುಜುಗರಕ್ಕೆ ಸಿಕ್ಕಿಸಿದ್ದೇನೆ. ಯಾವ ಆಸ್ತಿ ಇಲ್ಲದಿದ್ದರೂ ಪ್ರಾಮಾಣಿಕವಾಗಿ ಬದುಕುತ್ತಿರುವ ನಾನು ಹೇಗಾದರೂ ಈ ಮಂಕುದಿಣ್ಣೆಗಳ ಆಸ್ತಿಯನ್ನು ದೋಚಿಕೊಳ್ಳೋಣ ಎಂದುಕೊಂಡಿದ್ದೆ. ನನ್ನ ಮತ್ತು ... !!!

... ಪ್ರಳಯದ ಬಗ್ಗೆ ನಂಬಿಕೆ ಇಟ್ಟುಕೊಂಡಿರುವವರು ಯಾರಾದರೂ ತಮ್ಮ ಆಸ್ತಿಯನ್ನು ನಿಮಗೆ ಕೊಟ್ಟರೆ ಅದರಲ್ಲಿ ನನಗೂ ಪಾಲು ಕೊಡಬೇಕು. ಇಲ್ಲಾ ಅಂದರೆ ನಮ್ಮ ಕಮಾಂಡರ್ ಕೆ. ಫಣಿರಾಜ್ ನೇತೃತ್ವದಲ್ಲಿ ನಾವು ಲಂಕೇಶ್ ಕಚೇರಿಯ ಮೇಲೆ ದಾಳಿ ಮಾಡಿ ಪ್ರಳಯ ನಂಬಿರುವವರು ನಿಮಗೆ ಕೊಟ್ಟಿರುವ ಆಸ್ತಿಯನ್ನು ದೋಚುತ್ತೇವೆ. ನಮ್ಮ ಫಣಿರಾಜ್ ಹೇಳುತ್ತಾರೆ "ಅರೆ ಇಸ್ಮತ್, ಆ ಗೌರಿಕ ತಿಜೋರಿ ಮೆ ಕಿತ್ನಾ ಸೋನ, ಚಾಂದಿ ಹೈ ರೇ?!"

ಹುಷಾರ್!

- ಇಸ್ಮರ್ ಫಜೀರ್, ಮಂಗಳೂರು


ಯಡ್ಡಿ ಮತ್ತೊಮ್ಮೆ ಗೆದ್ದರೆ ಪ್ರಳಯ ಗ್ಯಾರಂಟಿ


ಯಡ್ಡಿಯಷ್ಟೇ ಅಲ್ಲ ಇಡೀ ಬಿಜೆಪಿ ಬುಟ್ಟಿಯೇ ಕೊಳೆತು ನಾರುತ್ತಿದೆ. ಶಿಸ್ತಿನ ಪಕ್ಷ, ಇತರ ಪಾರ್ಟಿಗಳಿಗಿಂತ ಭಿನ್ನವಾದ ಪಕ್ಷ ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಂಡು ತಿರುಗುತ್ತಿದ್ದ ಬಿಜೆಪಿ ವಚನಭ್ರಷ್ಟತೆಯ ಹೆಸರಲ್ಲಿ ಅತ್ತೂ ಕರೆದು ದಕ್ಷಿಣ ರಾಜ್ಯದಲ್ಲಿ ಮೊದಲಬಾರಿಗೆ ಗದ್ದುಗೆಗೇರಿತ್ತು. ಆದರೆ ಬೀದಿನಾಯಿಗಳಿಗಿಂತ ಕಡೆಯಾಗಿ ಬಿಜೆಪಿಯ ಶಾಸಕರು ಕಚ್ಚಾಡಿದ ಕಾರಣಕ್ಕೆ ಮೂರು ಮುಖ್ಯಮಂತ್ರಿಗಳನ್ನು ಕೊಟ್ಟು ... 'ವಿಭಿನ್ನ' ಪಕ್ಷವೆಂಬುದನ್ನು ಜನತೆಗೆ ತೋರಿಸಿಕೊಟ್ಟಿತು.



ಹುಂಬತನದ ಸಮಸ್ಯೆಗಳಿಗಿಂತ ಬಿಜೆಪಿಯ ಆಂತರಿಕ ಕ... ಅವರಿಗೆ ಮುಖ್ಯವಾಗಿದೆ. ...

ಮತ್ತೆ ಆರ್‌ಜಿವಿ ಜೊತೆ ಸುದೀಪ್





ಸುದೀಪ್ ನಾಯಕವಾಗಿ ನಟಿಸಿದ್ದ ತೆಲುಗು ಚಿತ್ರ 'ಈಗ' ದೇಶಾದ್ಯಂತ ಬಾಕ್ಸ್ ಆಫೀಸ್‌ನಲ್ಲಿ ಹಿಟ್ ಆಗಿದ್ದೇ ತಡ ತೆಲುಗು ಮತ್ತು ತಮಿಳು ಚಿತ್ರರಂಗಗಳಿಂದ ಅನೇಕ ಅವಕಾಶಗಳು ಸುದೀಪ್‌ರನ್ನು ಹುಡುಕಿಕೊಂಡು ಬಂದಿದ್ದವು. ಆದರೆ ಅಂತಹ ಎಲಾ ಆಫರ್‌ಗಳನ್ನು ನಿರಾಕರಿಸುತ್ತಾ ಬಂದಿದ್ದ ಸುದೀಪ್ ಈಗ ಹೊಸ ಚಿತ್ರಕ್ಕೆ ಸಹಿ ಹಾಕಿರುವ ಸುದ್ದಿ ಬಂದಿವೆ.

ತೆಲುಗು ಮತ್ತು ಹಿಂದಿಯಲ್ಲಿ ಖ್ಯಾತ ನಿರ್ದೇಶಕರಾಗುವ ರಾಮ್ ಗೋಪಾಲ್ ವರ್ಮ ಹೊಸ ಚಿತ್ರಕ್ಕೆ ಸುದೀಪ್ ಆಯ್ಕೆಯಾಗಿರುವುದು ಪಕ್ಕಾ ಆಗಿದೆ. ಆದರೆ ಈ ...ಲ್ಲಿ ಸುದೀಪ್ ನಾಯಕನೋ ಅಥವಾ ಖಳನಾಯಕನೋ ಎಂಬುದು ಗೊತ್ತಿಲ್ಲ. ...ದೀಪ್ ಮತ್ತು ರಾಮ್ ಗೋಪಾಲ್ ವರ್ಮ ನಡುವೆ ಹಿಂದಿನಿಂದಲೂ ...ು ಸಂಬಂಧವಿದೆ. ಈಗಾಗಲೇ ವರ್ಮ ಅವರ ನಿರ್ದೇಶನದ 'ಫೂಂಕ್', ...ಕ್-2' ಮತ್ತು 'ರಾಣ್' ಎಂಬ ಮೂರು ಹಿಂದಿ ಚಿತ್ರಗಳಲ್ಲಿ ಸುದೀಪ್ ...ದ್ದಾರೆ. ಅದರಲ್ಲೂ ಒಂದು ಚಿತ್ರದಲ್ಲಿ ಅಮಿತಾಭ್ ಬಚ್ಚನ್ ಜೊತೆ ನಟಿಸಿ ಎಲ್ಲರಿಂದ ಸೈ ಎನಿಸಿಕೊಂಡಿದ್ದಾರೆ. ...ರಾಮ್ ಗೋಪಾಲ್ ವರ್ಮ ಮತ್ತು ಸುದೀಪ್ ಅವರ ಸಮಾಗಮದ ನಾಲ್ಕನೆ ಚಿತ್ರವು ಏಕಕಾಲದಲ್ಲಿ ಹಿಂದಿ, ...ು, ತೆಲುಗು ಮತ್ತು ಕನ್ನಡದಲ್ಲಿ ಮೂಡಿಬರಲಿದೆ.


ಕಿರುತೆರೆಯಲ್ಲೂ ದೋಸ್ತ್‌ಗಳ ಪೈಪೋಟಿ



ಕಿಚ್ಚ ಸುದೀಪ್ ಅಭಿನಯಿಸುತ್ತಿರುವ 'ಬಚ್ಚನ್' ಚಿತ್ರ ಸಂಪೂರ್ಣವಾಗುವ ಮೊದಲೇ ಅದರ ಟಿವಿ ಹಕ್ಕುಗಳು ದಾಖಲೆ 3.33 ಕೋಟಿ ರೂಪಾಯಿಗಳಿಗೆ ಮಾರಾಟವಾಗಿದೆ. ಇತ್ತೀಚೆಗೆ ಇಷ್ಟೊಂದು ದೊಡ್ಡ ಮೊತ್ತಕ್ಕೆ ಯಾವೊಂದು ಚಿತ್ರವನ್ನೂ ಚಾನಲ್‌ನವರು ಖರೀದಿಸಿಲ್ಲ.

ಹಾಗೆಯೇ ದರ್ಶನ್ ನಾಯಕನಾಗಿ ನಟಿಸಿರುವ, ಈಗಾಗಲೇ 50 ದಿನಗಳ ಪ್ರದರ್ಶನವನ್ನು ಕಂಡಿರುವ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಚಿತ್ರವನ್ನು ಖರೀದಿಸಲೂ ಟಿವಿ ಚಾನಲ್‌ಗಳ ನಡುವೆ ಪೈಪೋಟಿ ನಡೆಯುತ್ತಿದೆ. ಕನ್ನಡ ಚಿತ್ರರಂಗದ ಅತ್ಯಂತ ಅದ್ದೂರಿ ವೆಚ್ಚದ ಚಿತ್ರವಾದ 'ಸಂಗೊಳ್ಳಿ ರಾಯಣ್ಣ'ನಿಗೆ ಒಂದು ಟಿವಿ ಚಾನೆಲ್‌ನವರು ಏಳು ಕೋಟಿ ರೂಪಾಯಿ ನೀಡಲು ತಯಾರಾಗಿದ್ದಾರೆ. ಆದರೆ ಆ ಚಿತ್ರದ ನಿರ್ಮಾಪಕ ಆನಂದ್ ಅಪ್ಪುಗೋಳು ಅವರು "ಯಾವ ಕಾರಣಕ್ಕೂ ಒಂಭತ್ತು ಕೋಟಿಗಿಂತ ಕಡಿಮೆ ಮೊತ್ತಕ್ಕೆ ಈ ಚಿತ್ರವನ್ನು ಮಾರಾಟ ಮಾಡುವುದಿಲ್ಲ" ಎಂದು ಹಠ ಹಿಡಿದು ಕುಳಿತಿದ್ದಾರೆ.

ಅಂತೂ ಸ್ನೇಹಿತರಾದ ಸುದೀಪ್ ಮತ್ತು ದರ್ಶನ್ ಚಿತ್ರಗಳು ಇತ್ತ ಬಾಕ್ಸ್ ಆಫೀಸ್‌ನಲ್ಲೂ ಅತ್ತ ಟಿವಿ ವಲಯದಲ್ಲೂ ಸುದ್ದಿ ಮಾಡಿ ವಿಜೃಂಭಿಸುತ್ತಿರುವುದು ವಿಶೇಷವಾಗಿ ಕಾಣಿಸುತ್ತಿದೆ.




ಹೊಸ ವರ್ಷದ ಮೊದಲ ಕ್ಷಣದಲ್ಲಿ ಸೆಟ್ಟೇರುತ್ತಿರುವ ಎರಡು ಚಿತ್ರಗಳು

ಈ ವರ್ಷದ ಕೊನೆಯ ದಿನವಾದ ಡಿಸೆಂಬರ್ 31ರ ರಾತ್ರಿ ಹೊಸ ವರ್ಷದ ಮೊದಲನೆ ಕ್ಷಣವಾದ ರಾತ್ರಿ 12 ಗಂಟೆಗೆ ಎರಡು ಚಿತ್ರಗಳ ಮುಹೂರ್ತ ನಡೆಯಲಿದೆ. ಇಂತಹ ಹೊಸ 'ಸಾಧನೆ'ಗೆ ಮುಂದಾಗಿರುವವರು ನಿರ್ದೇಶಕರಾದ ಪ್ರೇಮ್ ಮತ್ತು ವೇಣುಗೋಪಾಲ್.



...ಸುದೀಪ್ ನಾಯಕ ನಟನಾಗಿ ನಟಿಸಲಿರುವ, ಚಂದ್ರಶೇಖರ್ ನಿರ್ಮಿಸಲಿರುವ, ಪ್ರೇಮ್ ...ದೇಶಿಸುತ್ತಿರುವ, ಏಕಕಾಲಕ್ಕೆ ಮೂರು ಭಾಷೆಗಳಲ್ಲಿ ತಯಾರಾಗುತ್ತಿರುವ ಚಿತ್ರಕ್ಕೆ ಇನ್ನೂ ...ಟ್ಟಿಲ್ಲ. "ಈ ಚಿತ್ರದ ಟೈಟಲ್ ಮತ್ತು ನಾಯಕಿಯರ ಹೆಸರನ್ನು ಡಿಸೆಂಬರ್ 31 ರ ...ಧ್ಯ ರಾತ್ರಿ ಘೋಷಿಸುತ್ತೇನೆ" ಎಂದು ಪ್ರೇಮ್ ಹೇಳುವ ಮೂಲಕ ಒಂದು ಗಿಮ್ಮಿಕ್ ...ಡುತ್ತಿದ್ದಾರೆ.

ಇತ್ತೀಚೆಗೆ 'ಆ ಬಾನು ಈ ಭೂಮಿ' ಎಂಬ ಚಿತ್ರವನ್ನು ನಿರ್ದೇಶಿಸಿರುವ ವೇಣುಗೋಪಾಲ್ ...ಚಿತ್ರ ಬಿಡುಗಡೆ ಆಗುವ ಮುನ್ನವೇ 'ಭಗವತಿ' ಎಂಬ ಹಿಂದಿ ಚಿತ್ರವನ್ನು ಅನೌನ್ಸ್ ...ಡಿದ್ದಾರೆ. ಅವರೂ ಕೂಡ ಚಿತ್ರದ ಮುಹೂರ್ತವನ್ನು ಡಿಸೆಂಬರ್ 31 ರ ಮಧ್ಯ ರಾತ್ರಿ ...ಗಳೂರಿನಲ್ಲೇ ನಡೆಸುತ್ತೇನೆ ಎಂದು ಹೇಳಿದ್ದಾರೆ. ಅಂದಹಾಗೆ, ಈ ಚಿತ್ರಕ್ಕೆ ರಾಣಿ ...ಖರ್ಜಿ ಅಥವಾ ವಿದ್ಯ ಬಾಲನ್ ನಾಯಕಿಯಾಗಿ ಆಯ್ಕೆ ಆಗುವ ಸಾಧ್ಯತೆ ಇದೆ ...ದಿದ್ದಾರೆ.



...ಸುಮಾರು 50 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸೆಟ್ ಏರಲಿರುವ ವೇಣು ಚಿತ್ರ ...ತ್ತು ಸುಮಾರು 35 ಕೋಟಿ ರೂಪಾಯಿ ವೆಚ್ಚದಲ್ಲಿ ತೆರೆಗೆ ಬರಲಿರುವ ಸುದೀಪ್ ಚಿತ್ರ, ...ಎರಡೂ ಚಿತ್ರಗಳು ಹೊಸ ವರ್ಷದಲ್ಲಿ ಆರಂಭವಾಗುತ್ತಿರುವುದು ಕನ್ನಡ ಚಿತ್ರರಂಗಕ್ಕೆ ...ನ ತರಲಿ ಎಂದು ಗಾಂಧಿನಗರದವರು ಹಾರೈಸುತ್ತಿದ್ದಾರೆ.

ಚಳಿಯಲ್ಲೂ ಕ್ರಿಕೆಟ್ ಅಭ್ಯಾಸ

ಈ ಬಾರಿಯ ಸಿಸಿಎಲ್ ಕ್ರಿಕೆಟ್ ಟೂರ್ನಮೆಂಟ್‌ಗಾಗಿ ಸುದೀಪ್ ನಾಯಕತ್ವದ ತಂಡ ಮತ್ತೆ ಕ್ರಿಕೆಟ್ ತರಬೇತಿಯನ್ನು ಆರಂಭಿಸಿದೆ. ಡಿಸೆಂಬರ್ ತಿಂಗಳ ಚುಮು ಚುಮು ಚಳಿಯನ್ನೂ ಲೆಕ್ಕಿಸದೆ ಕರ್ನಾಟಕ ಬುಲ್‌ಡೋಜರ್ ತಂಡದ ಆಟಗಾರರೆಲ್ಲ ಬೆಳಗಿನ ಜಾವ ಆರು ಗಂಟೆಗೆ ಒಟ್ಟು ಸೇರಿ ಅಭ್ಯಾಸ ಮಾಡುತ್ತಿದ್ದಾರೆ.

ಎಂದಿನಂತೆ ನಾಯಕ ಸುದೀಪ್ ಬೆಳಗ್ಗೆ ಆರು ಗಂಟೆಗೆ ಮೈದಾನದಲ್ಲಿ ಹಾಜರಿರುತ್ತಾರೆ. ಆರೂಕಾಲಕ್ಕೆ ಪಂದ್ಯ ಆರಂಭ. ತಡವಾಗಿ ಬಂದವರಿಗೆ ಆಟದಲ್ಲಿ ಅವಕಾಶವಿಲ್ಲ. ಅವರು ಮೈದಾನಕ್ಕೆ ಎರಡು ಸುತ್ತು ಹಾಕಿ ವಾಪಸ್ ಮನೆಗೆ ಹೋಗಬೇಕು. ಈ ವಿಷಯದಲ್ಲಿ ಸುದೀಪ್ ಎಂದೂ ರಾಜೀ ಆಗುವುದೇ ಇಲ್ಲ. ಹೀಗಾಗಿ ಎಲ್ಲಾ ಆಟಗಾರರು ಚಳಿಯನ್ನು ಲೆಕ್ಕಿಸದೆ ಬೆಳಗ್ಗೆ ಮೈದಾನದಲ್ಲಿ ಒಟ್ಟು ಸೇರುತ್ತಿದ್ದಾರೆ.


ಕಳೆದ ವರ್ಷ ಕರ್ನಾಟಕದ ತಂಡ ಫೈನಲ್ಸ್‌ನಲ್ಲಿ ಆಂಧ್ರ ತಂಡದ ವಿರುದ್ಧ ಕೊನೆಯ ಬಾಲ್‌ನಲ್ಲಿ ಸೋತಿತ್ತು. ಈ ಬಾರಿ ಏನೇ ಆದರೂ ರಾಷ್ಟ್ರ ಮಟ್ಟದಲ್ಲಿ ಕರ್ನಾಟಕ ಕೀರ್ತಿ ಪತಾಕೆಯನ್ನು ಹಾರಿಸಲೇಬೇಕು ಎಂದು ಆಟಗಾರರು ಸಂಕಲ್ಪಮಾಡಿರುವವರಂತೆ ತರಬೇತಿ ಪಡೆಯುತ್ತಿದ್ದಾರೆ. ಜನವರಿಯಲ್ಲಿ ಆರಂಭವಾಗುವ ಈ ಪಂದ್ಯಾವಳಿಯಲ್ಲಿ ಕರ್ನಾಟಕ ಗೆಲ್ಲುತ್ತದೋ ಎಂದು ಕಾದು ನೋಡಬೇಕು.

● ಶೆಣೈ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
...ankesh70@rediffmail.com ಗೆ
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.
ನಿಮ್ಮ ಪ್ರತಿಕ್ರಿಯೆಗಳನ್ನು 9980331427
ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ
ಕಳುಹಿಸಬಹುದು.

...? ... ಇಂತಹ ಮುಖ್ಯಮಂತ್ರಿಗಳನ್ನು ಕೊಟ್ಟದ್ದೇ ...ಯ ಸಾಧನೆ ಎನ್ನಬಹುದು.

...ಕಾಂಗ್ರೆಸ್‌ನ ಕೋಮು ಸಿದ್ಧಾಂತದಡಿ ಬೆಳೆದ ಯಡ್ಡಿ ...ಪ್ಲೇಟು ಬದಲಿಸಿ ತನ್ನ ಹೊಸ ಪಕ್ಷದ ಬಾವುಟದಲ್ಲಿ ...ಸೈದ್ಧಾಂತಿಕ ಸಂಕೇತವಾದ ಕೇಸರಿ ಬಣ್ಣಕ್ಕೇ ಗುಡ್‌ಬೈ ...ದ್ದಾರೆ. ಹಾವೇರಿಯಲ್ಲಿ ನಡೆದ ಸಭೆಯಲ್ಲಿ ದಲಿತರು, ...ಳಿದವರು, ಅಲ್ಪಸಂಖ್ಯಾತರ ಬಗ್ಗೆ ... ವ್ಯಕ್ತಪಡಿಸಿದ್ದಾರೆ. ಇದೇ ಯಡ್ಡಿ ...ಮೂರು ವರ್ಷ ಅಧಿಕಾರದಲ್ಲಿದ್ದಾಗ ...ಸಮುದಾಯಗಳ ಸ್ಥಿತಿಗತಿಗಳ ಬಗ್ಗೆ ...ಮರುಗಿರಲಿಲ್ಲ. ಆದರೀಗ ಮತ್ತೆ ...ರ ಪಡೆಯಲು ಚುನಾವಣೆಯಲ್ಲಿ ...ಸಮುದಾಯಗಳ ಬೆಂಬಲ ...ವುದರಿಂದ ಸಿಹಾಸ್ಯಕ್ಕೆ ಮೊಸಳೆ ...ರನ್ನು ಸುರಿಸುತ್ತಿರುವುದು ...ಷ್ಟವಾಗಿದೆ.



...ದ ಬೆವರಿನ ತೆರಿಗೆ ಹಣವನ್ನು ತನ್ನ ಪಾಕೆಟ್ ...ಮಂತ್ರಿ ಮಠಗಳಿಗೆ ಸುರಿದ, ವಿಧಾನಸೌಧದಂತಹ ...ತ ಕಟ್ಟಡದಲ್ಲಿ ಹೋಮ-ಹವನ, ಮಾಟ-ಮಂತ್ರ ...ಸಿ ಮೌಢ್ಯವನ್ನು ಹಬ್ಬಿಸಿದ, ಮಹಾತ್ಮ ಅಂಬೇಡ್ಕರ್ ...ಟೋವನ್ನು ತೆಗೆದು ಹಾಕಿದ, ಚರ್ಚ್‌ಗಳ ಮೇಲಿನ ...

ದಾಳಿಯ ಬಗ್ಗೆ ಮೌನ ವಹಿಸಿದ ಯಡ್ಡಿ ಮತ್ತೆ ಅಧಿಕಾರ ಪಡೆದರೆ ರಾಜ್ಯದಲ್ಲಿ ಪ್ರಳಯವಾಗುವುದು ಖಂಡಿತ.

- ಶಶಿ ಪುತ್ತೂರು, ದಕ

ಗಲ್ಲಿಗೇರಿದ ಕಸಬ್ ಬಗ್ಗೆ....

ಪಾಕಿಸ್ತಾನದ ಭಯೋತ್ಪಾದಕ ಕಸಬ್‌ನನ್ನು ಗಲ್ಲಿಗೇರಿಸಿದ ಸುದ್ದಿ ಕೇಳಿ ಭಾರತದ ಬಹಳಷ್ಟು ಮಂದಿ ಸಂಭ್ರಮಾಚರಿಸಿದ್ದನ್ನು ಸಿಹಿ ತಿಂದಿ ತಿಂದು ಪಟಾಕಿ ಸಿಡಿಸಿದ್ದನ್ನು ಟಿ.ವಿ.ಯಲ್ಲಿ ನೋಡಿದೆ.


ಒಬ್ಬನ ಸಾವನ್ನು- ಆತ ಪರಮ ದುಷ್ಟನೇ ಆಗಿದ್ದರೂ- ಹೀಗೆ ಸಂಭ್ರಮಿಸುವುದನ್ನು ಕಂಡು ನನ್ನಲ್ಲೇ ಜಿಗುಪ್ಸೆ ಹುಟ್ಟಿತು. ಕಸಬ್ ಮುಂಬೈ ದಾಳಿಯಲ್ಲಿ ಭಾಗವಹಿಸಲು ಬಂದಾಗ ಪ್ರಾಣದ ಹಂಗನ್ನು ತೊರೆದು ಬಂದಿದ್ದ. ಆತನನ್ನು ಬ್ರೈನ್‌ವಾಶ್ ಮಾಡಲಾಗಿತ್ತು. ಮುಂದೆಯೂ ಇವನಂಥವರು ಜೀವ ಉಳಿಸಿಕೊಳ್ಳುವ ಯಾವ ಚಿಂತೆ ಇರದೆ ಬರುತ್ತಾರೆ. ಇವರನ್ನು ಕಳಿಸಿಕೊಡುವವರನ್ನು ಮತ್ತು ಅವರಿಗೆ ಕದ್ದು ಸಹಕಾರ ಕೊಡುವವರನ್ನು ಹಿಡಿದು ಸಂಪೂರ್ಣ ಮಟ್ಟ ಹಾಕಿದರೆ... ಆಗ ಸಿಹಿ ತಿಂದು ಪಟಾಕಿ ಸಿಡಿಸಿದರೆ ಅದಕ್ಕೊಂದು ಅರ್ಥ ಇರುತ್ತಿತ್ತು.

ಅಂತೂ ಡಿಸೆಂಬರ್ 05, 2012 'ಗೌರಿ ಲಂಕೇಶ್' ವಾರಪತ್ರಿಕೆ ಸೂಪರ್. ಬೇಗನೆ ಅಂಗಡಿಗೆ ಹೋಗಿ ಹೊಸ ಫ್ಲೈರ್ ತಂದು ಪತ್ರಿಕೆಯನ್ನು ಜೋಪಾನವಾಗಿ ಇಟ್ಟೆ.

ಸಚಿನ್, ಮಂಗಳೂರು

ನನ್ನಲ್ಲಿ ಸಂಚಲನ ಮೂಡಿತು

'ಕಸಬ್ ಒಬ್ಬ ಭಯೋತ್ಪಾದಕ, ಅವನು ಯಾವಾಗ ಸಾಯುತ್ತಾನೋ' ಎಂದು ನನ್ನಲ್ಲೂ ಕೋಪ ಅಡಗಿತ್ತು. . ಆದರೆ ಎರಡು ವಾರಗಳ ಹಿಂದೆ 'ಗೌರಿ ಲಂಕೇಶ್' ವಾರ ಪತ್ರಿಕೆಯನ್ನು (ರಾಜಕೀಯ ಮಸಲತ್ತಿಗೆ ಕಸಬ್ ಗಲ್ಲಿಗೇರಿದ, ಡಿಸೆಂಬರ್ 5, 2012ರ ಸಂಚಿಕೆ) ಓದಿದ ನಂತರ ನನ್ನ ಆಲೋಚನಾ ದೃಷ್ಟಿಕೋನ ಹೇಗಿರಬೇಕೆಂದು ಗೊತ್ತಾಯಿತು. ಕಸಬ್ ಬಗ್ಗೆ ನಟ ಆಶೀಶ್ ಚೌಧುರಿಯ (ಡಿಸೆಂಬರ್ 12, 2012ರ ಸಂಚಿಕೆ) ಮಾತುಗಳನ್ನು ಓದಿದ ನಂತರವಂತೂ ನನ್ನಲ್ಲಿನ ಅಭಿಪ್ರಾಯದಲ್ಲೇ ಸಂಚಲನ ಮೂಡಿತು. ತನ್ನ ಸಹೋದರಿ ಮತ್ತು ಭಾವನನ್ನು 26/11ರ ದಾಳಿಯಲ್ಲಿ ಕಳೆದುಕೊಂಡರೂ ಕಸಬ್ ಸಾವನ್ನು ಸಂಭ್ರಮಾಚರಿಸದೆ ಭಯೋತ್ಪಾದನೆಯ ಮೂಲ ಕಾರಣದ ಬಗ್ಗೆ ಚೆನ್ನಾಗಿ ಮಾತನಾಡಿದ್ದಾರೆ ಆಶೀಶ್ ಚೌಧುರಿ. ಆಶೀಶ್ ಚೌಧುರಿಯಂತೆ ಎಲ್ಲರೂ ಯೋಚಿಸಿ ರಾಜಕೀಯ ತುರುಕದೆ ಶಾಶ್ವತ ಪರಿಹಾರವನ್ನು ಕುರಿತು ಚಿಂತಿಸಬೇಕಿದೆ.



- ಸರೋವರ್, ಬೆಂಕಿಕೆರೆ

"ಪಂಟರ್ (ರಿಕ್ಕಿ ಪಾಂಟಿಂಗ್)ಗೆ ಅಭಿನಂದನೆಗಳು ಮತ್ತು ಬಾಯ್ಕಾಟ್‌ಗೆ ಜಯವಾಗಲಿ" (ಡಿಸೆಂಬರ್ 19, 2012ರ ಸಂಚಿಕೆ) ಹಾರ್ವತೀಶ ಅವರು ಬರೆದ ಅರ್ಥಪೂರ್ಣ ಲೇಖನಗಳಿಂದ ಆ ಸಂಚಿಕೆ ಸುಂದರವಾಗಿ ಮೂಡಿ ಬಂದಿದೆ.

- ಸುರೇಶ್ ಅರಹಲು, ಶಿವಮೊಗ್ಗ

ಹೋಮ್ ಸ್ಟೇ ಮೇಲಿನ ದಾಳಿಗೆ ಸಂಬಂಧಿಸಿದಂತೆ ಮಂಗಳೂರಿನ ಪತ್ರಕರ್ತ ಶ್ರೀ ನವೀನ್ ಸೂರಿಂಜೆ ಅವರ ಬಂಧನವನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಸೂರಿಂಜೆ ಅವರು ಸಕಾಲದಲ್ಲಿ ವರದಿ ಮಾಡದೇ ಇರುತ್ತಿದ್ದರೆ ಕರಾವಳಿಯ ಕೋಮುವಾದಿಗಳ ಕುಕೃತ್ಯ ಬಯಲಿಗೆ ಬರುತ್ತಿರಲಿಲ್ಲ. ಈ ಘಟನೆ ಕರಾವಳಿಯ ಕೋಮುವಾದಿಗಳೊಡನೆ ಪೊಲೀಸ್ ಶಕ್ತಿ ಸೇರಿಕೊಂಡಿದ್ದರ ಸಂಕೇತ. ಇದರ ವಿರುದ್ಧ ದೇಶದ ಎಲ್ಲರೂ ಸ್ವರ ಎತ್ತಬೇಕಾಗಿದೆ.

ಕರ್ನಾಟಕ ಮಾನ ದೇಶದಾದ್ಯಂತ ಇನ್ನೊಮ್ಮೆ ಹರಾಜಾಗುತ್ತಿದೆ.

- ಪುರುಷೋತ್ತಮ ಬಿಳಿಮಲೆ, ದೆಹಲಿ

'ಮರೆಯುವ ಮುನ್ನ' ಅಂಕಣದಲ್ಲಿ ಪ್ರಕಟವಾದ 'ಕಲಿತವನು, ಅರಿತವನು' ಓದಿದಾಗ ಪಿ.ಲಂಕೇಶ್ ಮತ್ತು ಡಿ.ಆರ್.ನಾಗರಾಜ ಇಬ್ಬರೂ ಮಹನೀಯರು ಈ ಲೋಕದಲ್ಲಿಲ್ಲ ಎಂದು ಅನ್ನಿಸಲೇ ಇಲ್ಲ!

- ಅಮೀರುದ್ದೀನ್ ಖಾಜಿ, ಬಿಜಾಪುರ

ನರೇಂದ್ರ ಮೋದಿಯಂತಹ ಪ್ರಳಯಾಂತಕ ನರಹಂತಕನನ್ನು ಬಿಜೆಪಿಗಳು 2014ರಲ್ಲಿ ಪ್ರಧಾನಿ ಮಾಡಲು ಟೊಂಕ ಕಟ್ಟಿರುವಾಗಲೂ ಜನ 2012ರ ಪ್ರಳಯವನ್ನು ನಂಬುತ್ತಾರಲ್ಲಾ . . . ?!

- ರವಿಕುಮಾರ್, ಹಾಸನ

ಅರಸನನ್ನು ಅರಸುತ್ತಾ ರಾಮುಲು ಬಂಧನದಲ್ಲಿ...
ದ್ವಾರಕನಾಥ್, ರೇಷ್ಮೆ, ಇತ್ಯಾದಿಗಳ ಪರಿಸ್ಥಿತಿ...

- ಮಲ್ಲನಗೌಡರ್, ಗದಗ

Registered No KA RNP BGS 2036 2011-13 Posted at GPO, Bangalore-01, Friday R B P LANKESH, Kannada weekly



ಹಿಂದಿ ನಟಿಯ ಪಾಲಾದ ಕನ್ನಡತಿಯರ

ಮೊನ್ನೆ 'ಅಪ್ಪಾ ದೇಶ್' ಎಂಬ ಚಿತ್ರದ ಪತ್ರಿಕಾಗೋಷ್ಠಿ ನಡೆಯಿತು. 'ಅಪ್ಪಾ ದೇಶ್' ಅಂದಾಕ್ಷಣ ಇದು ಹಿಂದಿ ಚಿತ್ರ ಎಂಬ ಸಂಶಯ ಬರುವುದು ಸಹಜ. ಆದರೆ ಇದು ಹಿಂದಿ ಚಿತ್ರವಲ್ಲ, ಬದಲಾಗಿ ನಿರ್ದೇಶಕರಾದ ಚಿನ್ನಗಂಗಪ್ಪ ಅವರ ಹೊಸ ಕನ್ನಡ ಚಿತ್ರದ ಹೆಸರು.


ಅಂದಹಾಗೆ, ಈ ಚಿತ್ರದಲ್ಲಿ ನಟಿಸಲು ಕನ್ನಡತಿಯರು ನಿರಾಕರಿಸಿದ್ದರಿಂದ ವಿಧಿ ಇಲ್ಲದೆ ಚಿನ್ನಗಂಗಪ್ಪನವರು ಹಿಂದಿ ಚಿತ್ರರಂಗದಿಂದ ಒಬ್ಬಳನ್ನು ಕರೆತರಬೇಕಾಯಿತಂತೆ.

ಆಕೆಯ ಹೆಸರು ಅಂಜಲಿ ಪಾಟೀಲ್. ಇತ್ತೀಚೆಗೆ ಬಿಡುಗಡೆಗೊಂಡ ಹಿಂದಿ ಸಿನಿಮಾ 'ಚಕ್ರವ್ಯೂಹ'ದಲ್ಲಿ ಅದ್ಭುತ ನಟನೆಯನ್ನು ನೀಡಿದ್ದ ಈಕೆ ಪ್ರತಿಷ್ಠಿತ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ (ಎನ್‌ಎಸ್‌ಡಿಸ್)ದ ವಿದ್ಯಾರ್ಥಿನಿ. ಈ ಹಿಂದೆ ಎನ್‌ಎಸ್‌ಡಿಯ ನಿರ್ದೇಶಕರಾಗಿದ್ದ ಖ್ಯಾತ ಕನ್ನಡ ಸಾಹಿತಿ ಗಿರೀಶ್ ಕಾರ್ನಾಡ್ ಕೂಡ 'ಅಪ್ಪಾ ದೇಶ್' ಚಿತ್ರದಲ್ಲಿ ನ... ಎಂಬ ಏಕೈಕ ಕಾರಣಕ್ಕೆ ಅಂಜಲಿ ಪಾಟೀಲ್ ಅ... ನಟಿಸಲು ಕೂಡಲೆ ಒಪ್ಪಿಕೊಂಡಳಂತೆ. ಕಾರ್ನಾಡ್ ಅ... ಬೆಳ್ಳಿತೆರೆಯ ಮೇಲೆ ಕಾಣಿಸಿಕೊಳ್ಳಬೇಕು ಎಂಬ ... ಆಕೆಗೆ. ಅಂದಹಾಗೆ, ಆಕೆ ನಟಿಸಿದ ಮೊದಲ ನಾ... ಕಾರ್ನಾಡರು ಬರೆದಿರುವ 'ಹಯವದನ.'

ಈ ಚಿತ್ರದ ಕತೆ ನಾಯಕಿಗೆ ಪ್ರಧಾನವಾಗಿದ್ದರು... ನಾಯಕಿಯರು ಇದರಲ್ಲಿ ನಟಿಸಲು ನಿರಾಕರಿಸಿದ್ದರ ಬಗ್ಗೆ... ಚಿನ್ನಗಂಗಪ್ಪ ಅವರಿಗೆ ಬಹಳ ಬೇಸರವಾಗಿದೆಯಂ... ಅಥವಾ ರಾಷ್ಟ್ರಮಟ್ಟದ ಪ್ರಶಸ್ತಿಯನ್ನು ಪಡೆಯುವಷ್ಟು ... ಆಗಿರುವ ಈ ಪಾತ್ರವನ್ನು ನಿರಾಕರಿಸಿದವರು ರಾಧಿ... ಮತ್ತು ಪ್ರಿಯಾಮಣಿ" ಎಂದು ಅವರು ಹೇಳಿದ... ಪತ್ರಕರ್ತರಿಗೆ ಅಚ್ಚರಿಯಾಯಿತು.



'ಆಟ'ವಾಡುತ್ತಾ ಕಳೆದದ್ದನ್ನು 'ದಿಲ್‌ವಾಲಾ' ತಂದುಕೊಡುತ್ತಾನಾ?





ಶ್ರೀಮಂತ ನಿರ್ಮಾಪಕ ಶೈಲೇಂದ್ರ ಬಾಬು ಅವರು ಎರಡು ವರ್ಷಗಳ ಗ್ಯಾಪ್ ನಂತರ ಮತ್ತೆ ಸಿನಿಮಾ ನಿರ್ಮಾಣಕ್ಕೆ ಕೈಹಾಕಿದ್ದಾರೆ. ಅವರು ಈ ಹಿಂದೆ ನಿರ್ಮಿಸಿದ್ದ ಚಿತ್ರದ ಹೆಸರು 'ಆಟ'. ಅದರಲ್ಲಿ ಬಾಬು ಅವರ ಮಗ ಸುಮಂತ್ ನಾಯಕನಾಗಿ ನಟಿಸಿದ್ದ. ತಮ್ಮ ಮಗನ ಚೊಚ್ಚಲ ಚಿತ್ರಕ್ಕೆ ಬಾಬು ಅವರು ಕೋಟಿ ಕೋಟಿ ರೂಪಾಯಿಗಳನ್ನು ಸುರಿದಿದ್ದರು. ಆದರೆ ಚಿತ್ರ ಮಾತ್ರ ಬಾಕ್ಸ್ ಆಫೀಸ್‌ನಲ್ಲಿ ಸಂಪೂರ್ಣವಾಗಿ ಮುಗ್ಗರಿಸಿತ್ತು, ಬಾಬು ಪಾಲಿಗೆ ಕೋಟ್ಯಾಂತರ ರೂಪಾಯಿ ನಷ್ಟವಾಗಿತ್ತು, ಆದರೂ ಬಾಬು ಅವರ ಪುತ್ರ ವ್ಯಾಮೋಹವೇನೂ ಕಡಿಮೆಯಾಗಿಲ್ಲ. ಮಗನ ಮೇಲೆ ಅಪಾರವಾದ ನಂಬಿಕೆಯಿಂದ ಮತ್ತೆ ಮಗನನ್ನೇ ಹಾಕಿಕೊಂಡು ಇನ್ನೊಂದು ಚಿತ್ರ ಮಾಡಲು ಹೊರಟಿದ್ದಾರೆ. ಈ ಚಿತ್ರದ ಹೆಸರು 'ದಿಲ್‌ವಾಲಾ'. ತಮ್ಮ ಹಳೆಯ ಚಿತ್ರ 'ಆಟ'ದಲ್ಲಿ ಕಳೆದುಕೊಂಡ ಹಣವನ್ನು ಹೊಸ ಚಿತ್ರ 'ದಿಲ್‌ವಾಲಾ' ಮೂಲಕ ಹಿಂದೆ ಪಡೆಯುವ ವಿಶ್ವಾಸ ಅವರದ್ದು. ಯಾಕೆಂದರೆ ಈ ಚಿತ್ರಕ್ಕೆ ಸದ್ಯಕ್ಕೆ ಗಾಂಧಿನಗರದಲ್ಲಿ ಅದೃಷ್ಟದ ತಾರೆ ಎಂದೇ ಪರಿಗಣಿತವಾಗಿರುವ ರಾಧಿಕಾ ಪಂಡಿತ್‌ಳನ್ನು ಆಯ್ಕೆ ಮಾಡಿದ್ದಾರೆ.

ರಾಧಿಕಾ ಪಂಡಿತ್‌ಳಿಗೆ ಬಾಬು ಅವರು ದುಬಾರಿ ಸಂಭಾವನೆಯನ್ನು ನೀಡಿದ್ದಾರೆ ಮಾತ್ರವಲ್ಲ, ಆಕೆಯ ಕಾಲ್‌ಶೀಟ್‌ಗಾಗಿ ಎರಡು ತಿಂಗಳು ಕಾದಿದ್ದಾರೆ ಎಂಬ ಸುದ್ದಿಯೂ ಕೇಳಿಬರುತ್ತಿದೆ. ಅಂದಾಗೆ ಈ ಚಿತ್ರವನ್ನು 'ಒರಟ ಐ ಲವ್ ಯು' ಮತ್ತು 'ಶಕ್ತಿ' ಚಿತ್ರಗಳನ್ನು ನಿರ್ದೇಶಿಸಿದ್ದ ಅನಿಲ್ ನಿರ್ದೇಶಿಸುತ್ತಿದ್ದಾರೆ. ನಮ್ಮ ಕನ್ನಡದ ನಾಯಕ-ನಾಯಕಿ ಮತ್ತು ನಿರ್ದೇಶಕರ ಈ 'ದಿಲ್‌ವಾಲಾ'ಕ್ಕೆ ಶುಭವಾಗಲಿ.

'ಡವ್' ಒಕೆ, 'ಕಿಸ್ ನಾಟ್ ಒಕೆ' ಎಂದಳು

ಪ್ರಮುಖ ನಿರ್ಮಾಪಕ ಮತ್ತು ಕನ್ನಡ ಹೋರಾಟಗಾರ ಸಾ.ರಾ. ಗೋವಿಂದು ಅವರ ಮಗ ಅನುಪ್ ನಾಯಕ ನಟನಾಗಿ ನಟಿಸುತ್ತಿರುವ ಚೊಚ್ಚಲ ಚಿತ್ರ 'ಡವ್' ಮೊನ್ನೆ ಅದರ ನಿರ್ಮಾಪಕ ಬೆಂಕೋಶ್ರೀ ಅವರ 50ನೇ ಹುಟ್ಟುಹಬ್ಬದ ದಿನದಂದು ಆರಂಭವಾಯಿತು. ಗೋವಿಂದು ಅವರ ಮಗ ಅಂದಮೇಲೆ ಉದ್ಯಮದವರ ಹಾಜರಾತಿ ಫುಲ್ ಇರಲೇಬೇಕು ತಾನೆ? ಚಿತ್ರೋದ್ಯಮದ ಗಣ್ಯರೆಲ್ಲರೂ ಕಂಠೀರವ ಸ್ಟುಡಿಯೋಕ್ಕೆ ಆಗಮಿಸಿ ಚಿತ್ರಕ್ಕೆ ಶುಭ ಹಾರೈಸಿದರು.

ಆದರೆ ಅಂದು ಸುದ್ದಿ ಮಾಡಿದ್ದು ಮಾತ್ರ ಗೋವಿಂದು ಮಗ ಅನುಪ್ ಅಲ್ಲ, ಬದಲಾಗಿ ಚಿತ್ರದ ಎರಡೇ ನಾಯಕಿಯಾಗಿ ಆಯ್ಕೆಯಾಗಿದ್ದ ಪ್ರಜ್ಞ ಎಂಬ ನಟಿ. "ಸಿನಿಮಾದಲ್ಲಿ ತುಟಿಗೆ ತುಟಿ ಇಟ್ಟು ಕಿಸ್ ಮಾಡುವ ದೃಶ್ಯದಲ್ಲಿ ನಾನು ನಟಿಸುವುದಿಲ್ಲ" ಎಂದು ಹೇಳಿದ ಪ್ರಜ್ಞ ಮುಹೂರ್ತಕ್ಕೆ ಗೈರುಹಾಜರಾಗಿದ್ದಳು.

ಅದಕ್ಕಿಂತಲೂ ಮುಖ್ಯವಾಗಿ ಮುಹೂರ್ತದ ಹಿಂದಿನ ಪ್ರಜ್ಞ ಮತ್ತು ಆಕೆಯ 'ಕೇರ್‌ಟೇಕರ್' ಸಾಧುಕೋಕಿಲಾ ನಡುವೆ ಗಲಾಟೆ ಆಯಿತಂತೆ. ಕಿಸ್ ಕೊಡುವ ದೃಶ್ಯದಲ್ಲಿ ಪ್ರಜ್ಞ ಭಾಗವಹಿಸಿದರೆ ಅದರಲ್ಲೇನೂ ತಪ್ಪಿಲ್ಲ ಎಂದು ಸಾಧುಕೋಕಿಲ ಹೇಳಿದರಂತೆ. ಇದನ್ನು ಕೇಳಿ ಪ್ರಜ್ಞಾಳಿಗೆ ಕೋಪ ಬಂತಂತೆ. ಅವರಿಬ್ಬರ ನಡುವೆ ಮಾತಿನ ಜಟಾಪಟಿ ನಡೆಯಿತಂತೆ. ಕೊನೆಗೆ ಸಾಧು ಸಿಟ್ಟಿನಿಂದ ಆಕೆಯ ಕಪಾಳಕ್ಕೆ ಹೊಡೆದರಂತೆ. ಆಕೆ ರಾತ್ರಿ ಆತ್ಮಹತ್ಯೆ ಮಾಡಿಕೊಂಡಳಂತೆ ಎಂಬ ಸುದ್ದಿ ಗಾಂಧಿನಗರದಲ್ಲಿ ಕಾಡ್ಗಿಚ್ಚಿನಂತೆ ಹರಡಿತ್ತು, ಕೊನೆಗೆ ಅದೆಲ್ಲ ಸುಳ್ಳು ಎಂದು ಗೊತ್ತಾಯಿತು.

"ಇದೆಲ್ಲ ಗಾಳಿ ಸುದ್ದಿ" ಎಂದು ತಿರಸ್ಕರಿಸಿದ ಪ್ರಜ್ಞ "ನಾನು ಯಾಕೆ ಆತ್ಮಹತ್ಯೆಗೆ ಪ್ರಯತ್ನಿಸಲಿ? ನನಗೆ ಆ ದೃಶ್ಯ ಇಷ್ಟವಾಗಲಿಲ್ಲ, ಆ ಕಾರಣಕ್ಕೆ ನಾನು 'ಡವ್' ಚಿತ್ರದಲ್ಲಿ ನಟಿಸುವುದಿಲ್ಲ ಎಂದು ಹೇಳಿದ್ದೇನೆ ಅಷ್ಟೆ..." ಎಂದು ಈ ವಿವಾದಕ್ಕೆ ಇತಿಶ್ರೀ ಹಾಡಿದಳು. ಈಗ ಪ್ರಜ್ಞ ಸ್ಥಾನಕ್ಕೆ ಹೊಸ ನಾಯಕಿಯನ್ನು ಆಯ್ಕೆ ಮಾಡಿರುವ ನಿರ್ದೇಶಕ ಸಂತು ಚಿತ್ರೀಕರಣವನ್ನು ಮುಂದುವರಿಸಿದ್ದಾರೆ. ● ಶೆಣೈ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 2667642
Fax : 26604536, E-mail : lankesh70@rediffmail.com